# ಪ್ರಸಾದ

ಸಂಪುಟ 29 ಸಂಚಿಕೆ 4 ಜುಲೈ-ಆಗಸ್ಟ್ 2014

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**99ನೆಯ ಜಯಂತಿ ಮಹೋತ್ಸವ ವಿಶೇಷ ಸಂಚಿಕೆ**

ಸಂಪಾದಕ
**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

‘ಶ್ರೀಮನ್ಮಹಾರಾಜ ರಾಜಗುರುತಿಲಕ’ ಪರಮಪೂಜ್ಯ ಲಿಂಗೈಕ್ಯ
**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**
**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್.ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಸಂಪಾದಕೀಯ

ಮಹಾಮನೆ, ಹೆಸರಿನ ನನ್ನದೊಂದು ಪುಟ್ಟ ಮನೆ. ಹುಣಸೂರು ರಸ್ತೆಯಲ್ಲಿರುವ ಹಿನಕಲ್ ಗ್ರಾಮಕ್ಕೆ ಸೇರಿದ ಸರಹದ್ದಿನಲ್ಲಿದೆ. ಒಮ್ಮೆ ಅಚಾನಕ್ಕಾಗಿ ಸುತ್ತೂರು ಸಂಸ್ಥೆಯ ನಿವೃತ್ತ ನೌಕರರೊಬ್ಬರು ನನ್ನ ಮನೆಗೆ ಬಂದರು. ಹೀಗೆಯೇ ಮಾತನಾಡುತ್ತಾ, ಶ್ರೀಮಠದ ಕಾರ್ಯವ್ಯಾಪ್ತಿ, ಅದು ಬೆಳೆದು ಪ್ರಸಿದ್ಧವಾಗಿರುವ ಪರಿ, ಈಗಿನ ಜಗದ್ಗುರುಗಳವರ ಅಸಾಧಾರಣ ಕರ್ಮಯೋಗಿತ್ವ ಮುಂತಾಗಿ ವಿವಿಧ ದಿಕ್ಕುಗಳಲ್ಲಿ ಮಾತಿನ ಲಹರಿ ಹರಿಯತೊಡಗಿತ್ತು. ಬಾಯಿ ಮಾತನಾಡುತ್ತಿದ್ದರೂ ಅವರ ಕಣ್ಣುಗಳು ಮಾತ್ರ ನಮ್ಮ ಮನೆಯ ಗೋಡೆಗಳು, ಕಪಾಟುಗಳು, ಟೇಬಲ್, ಟೀಪಾಯ್, ಬುಕ್‌ಶೆಲ್ಫ್‌ಗಳನ್ನು ತಲಾಶ್ ಮಾಡತೊಡಗಿದ್ದವು. ಸ್ವಲ್ಪ ಹೊತ್ತಿನ ನಂತರ ಅವರು, “ಏನು, ಎಲ್ಲಿಯೂ ಯಾವ ಸ್ವಾಮೀಜಿಗಳ ಫೋಟೋಗಳು ಕಾಣುತ್ತಿಲ್ಲವಲ್ಲ?” ಎಂದರು. ನಾನು ಏನೂ ಹೇಳದೆ ಸುಮ್ಮನೆ ಕುಳಿತುಕೊಂಡಿದ್ದೆ. ಹಾಗೆಯೇ ಮುಂದುವರಿದು ಅವರು “ಯಾವ ದೇವರ ಫೋಟೋನೂ ಸಹ ಕಾಣ್ತಾ ಇಲ್ಲ” ಎಂದರು. ನಾನು ಆಗ ಬೇಕೆಂತಲೇ ನಿರ್ಭಾವುಕ ಧ್ವನಿಯಲ್ಲಿ ದೇವರ ಫೋಟೋ ಹಾಕಿಕೊಳ್ಳುವ ಅಭ್ಯಾಸವೇ ನನಗೆ ಇಲ್ಲವೆಂದೆ. 'ಹೌದಾ' ಎಂದು ಪ್ರತಿಕ್ರಿಯಿಸಿದ ಅವರ ಧ್ವನಿಯ ಜೊತೆಗೆ ಅವರ ಮುಖ ವಿಚಿತ್ರ ಭಾವವನ್ನು ತಳೆಯಿತು. ಕುಳಿತಲ್ಲಿಂದ ಮೇಲಕ್ಕೆ ಎದ್ದ ಅವರು ಕಪಾಟಿನಲ್ಲಿದ್ದ ಪುಸ್ತಕಗಳನ್ನು ನೋಡುತ್ತ ಇರುವಾಗ ಅಲ್ಲಿ ಒಂದು ಕಡೆ ಸನ್ಯಾಸಿಗಳು ಧರಿಸುವ ಪಾದುಕೆಗಳಿದ್ದುದು ಅವರ ಕಣ್ಣಿಗೆ ಬಿದ್ದವು. ಅವರಿಗೆ ಕುತೂಹಲ ಮತ್ತು ಅಚ್ಚರಿ ಒಟ್ಟಿಗೇ ಉಂಟಾದಂತೆ ಭಾಸವಾಗಿ, ಮೆಲ್ಲಗೆ ಅವುಗಳನ್ನು ಭಯಮಿಶ್ರಿತ ಗೌರವದಿಂದ ಸ್ಪರ್ಶಿಸುತ್ತಾ, ‘ಇವು ಯಾರವು’ ಎಂದು ಕೇಳುತ್ತ ನನ್ನ ಕಡೆ ತಿರುಗಿದರು. ಅವರ ಮನಃಸ್ಥಿತಿ ನನಗೆ ಅರ್ಥವಾಗತೊಡಗಿತ್ತು. ನಾನು “ಅವು ನಮ್ಮ ಸ್ವಾಮಿಗಳವು” ಎಂದೆ. ಅಷ್ಟಕ್ಕೇ ಅವರು ಸುಮ್ಮನಾಗಲಿಲ್ಲ. “ಯಾವ ಫೋಟೋವನ್ನೂ ಇಟ್ಟುಕೊಳ್ಳದ ನೀವೇಕೆ ಇವನ್ನು ಇಟ್ಟುಕೊಂಡಿದ್ದೀರಿ?” ಎಂದು ಪ್ರಶ್ನಿಸಿದರು. ಆಗ ನನಗೆ ಅವರನ್ನು ಸ್ವಲ್ಪ ಕೆಣಕಿ ಮಾತನಾಡಬೇಕೆನಿಸಿತು. “ನೀವು ರಾಮಾಯಣವನ್ನು ಓದಿದ್ದೀರಾ?” ಎಂದೆ. ಅವರು 'ಅಷ್ಟಿಷ್ಟು' ಎಂದರು. “ಅಲ್ಲಿ ರಾಮ ಕಾಡಿಗೆ ಹೋದಾಗ, ಅಣ್ಣನನ್ನು ಹಿಂದಕ್ಕೆ ಕರೆತರಲು ಭರತನು ಕಾಡಿಗೆ ಹೋಗಿ ಅನೇಕ ರೀತಿಯಲ್ಲಿ ಬೇಡಿಕೊಳ್ಳುತ್ತಾನೆ. ಆದರೆ ರಾಮ ಹಿಂದಕ್ಕೆ ಬರಲು ಒಪ್ಪುವುದಿಲ್ಲ. ಆಗ ಭರತ, ಅಣ್ಣನನ್ನು ಕುರಿತು, ‘ನಿನ್ನ ಪಾದುಕೆಗಳನ್ನು ಕೊಡು. ನೀನು ಹಿಂದಕ್ಕೆ ಬರುವ ತನಕ ಅವನ್ನು ಸದಾ ಸಿಂಹಾಸನದ

ಮೇಲೆ ಇಟ್ಟು ಅವುಗಳ ಸಾಕ್ಷಿಯಲ್ಲಿ ನಿನ್ನ ಆದರ್ಶ, ತತ್ವ ಸಿದ್ಧಾಂತಗಳಿಗೆ ತಕ್ಕಂತೆ ರಾಜ್ಯಭಾರ ಮಾಡುತ್ತೇನೆ' ಎಂದು ಹೇಳಿ ಅವುಗಳನ್ನು ತಂದು ಸಿಂಹಾಸನದ ಮೇಲೆ ಪ್ರತಿಷ್ಠಾಪಿಸಿ, ರಾಜ್ಯಭಾರ ಮಾಡುತ್ತಾನೆ, ಗೊತ್ತಲ್ಲವೆ? ಎಂದೆ. "ಹೌದು, ಗೊತ್ತು, ಆದರೆ ಅದಕ್ಕೂ ಇದಕ್ಕೂ ಏನು ಸಂಬಂಧ?" ಎಂದರು. "ನೇರವಾಗಿ ಯಾವ ಸಂಬಂಧವೂ ಇಲ್ಲ. ಆದರೆ ನನ್ನ ಮಾತಿನ ಹಿಂದಿನ ಧ್ವನಿಯನ್ನು ಕುರಿತು ಸ್ವಲ್ಪ ಚಿಂತಿಸಿ" ಎಂದೆ. ಅವರು ಯಾಕೋ ಏನೋ, ಮುಂದಕ್ಕೆ ಮಾತನಾಡುವ ಉತ್ಸಾಹ ತೋರಿಸಲಿಲ್ಲ. ಆತಿಥ್ಯವನ್ನು ಪಡೆದು ಹೊರಡುವಾಗ, "ಏನೋ ಅಪ್ಪ, ನೀವು ಸಾಹಿತಿಗಳು. ನಿಮ್ಮಂತಹವರಿಗೆ ಹೆಚ್ಚಿಗೆ ಹೇಳುವ ಅವಶ್ಯಕತೆ ಇಲ್ಲ. ಆದರೂ... ಆದರೂ... ನೀವು ಒಂದಾದರೂ ದೇವರ ಫೋಟೋನಾದ್ರು ಇಟ್ಟುಕೊಳ್ಳಬೇಕಿತ್ತು" ಎಂದರು. ನಾನು ಸುಮ್ಮನೆ ನಕ್ಕೆ. ಅವರ ಮುಖ ಮಾತ್ರ ಎಂದಿಗಿಂತಲೂ ಗಂಭೀರವಾಗಿತ್ತು.

ಲಿಂ. ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ 99ನೇ ಜಯಂತಿ ಮಹೋತ್ಸವದ ಸಂದರ್ಭದ 'ಪ್ರಸಾದ' ಸಂಚಿಕೆಯನ್ನು ಸಿದ್ಧಗೊಳಿಸುವಾಗ ಈ ಘಟನೆ ನನಗೆ ನೆನಪಾಯಿತು.

ನಮ್ಮಲ್ಲಿ ಬಹುಪಾಲು ಜನಕ್ಕೆ ಭಕ್ತಿ, ನಿಷ್ಠೆ ಮುಂತಾದುವುಗಳನ್ನು ತೋರ್ಪಡಿಸಿಕೊಳ್ಳಲು ಇರುವ ಸಾಮಾನ್ಯ ಮಾರ್ಗವೆಂದರೆ ಮನೆಯಲ್ಲೆಲ್ಲ ಭಾವಚಿತ್ರಗಳನ್ನು ನೇತುಹಾಕಿಕೊಂಡು ಅವಕ್ಕೆ ದೂಪದೀಪಗಳಿಂದ ನಿತ್ಯಪೂಜೆ ಮಾಡುವುದೇ ಆಗಿದೆ. ಅದರಾಚೆಗೆ ಅವರ ಭಕ್ತಿ ಕ್ರಿಯಾಶೀಲ ಸ್ವರೂಪವನ್ನು ತಳೆಯುವುದೇ ಇಲ್ಲ. ರಾಮನ ಭಾವಚಿತ್ರವನ್ನು ಇಟ್ಟುಕೊಂಡು ಪೂಜೆ ಮಾಡುತ್ತಾ, ಆತನ ತತ್ವಾದರ್ಶಗಳಿಗೆ ವಿರುದ್ಧವಾದ ಆಡಳಿತವನ್ನು ಭರತ ನಡೆಸಿದರೆ ಅದನ್ನು ಅಣ್ಣನ ಮೇಲಿನ ಭಕ್ತಿ ಎಂದು ಹೇಗೆ ಕರೆಯಲಾಗುತ್ತಿತ್ತು? ಅವನು ರಾಮನ ಪಾದುಕೆಗಳನ್ನು ಸಿಂಹಾಸನದ ಮೇಲೆ ಇಟ್ಟು ರಾಜ್ಯಭಾರ ಮಾಡಿದ್ದು, ರಾಮನು ಇಟ್ಟ ಹೆಜ್ಜೆಗಳ ಮೇಲೆಯೇ ನಾನು ಹೆಜ್ಜೆ ಇಟ್ಟು ನಡೆಯುತ್ತೇನೆ ಎಂದದ್ದು ಮರ್ಯಾದಾಪುರುಷೋತ್ತಮನಿಗೆ ಆತ ಸಲ್ಲಿಸುವ ಗೌರವವಾಗಿತ್ತೆಂಬುದರ ಸಂಕೇತ. ಎಂದೂ ಯಾವುದೇ ದೇವಸ್ಥಾನಕ್ಕೆ ಹೋಗಿ ಹರಕೆ ಒಪ್ಪಿಸದ, ಪೂಜೆ ನೈವೇದ್ಯಗಳನ್ನೂ ಮಾಡದ ಗಾಂಧೀಜಿ ಮಹಾತ್ಮರಾದದ್ದು, ಆತ್ಮದೊಡನೆ ನಡೆಸಿದ ಅನುಸಂಧಾನದಿಂದ, ಸತ್ಯದೊಡನೆ ಸದಾ ಮುಖಾಮುಖಿಯಾಗಿ ಪ್ರಯೋಗಗಳನ್ನು ಮಾಡಿ ಅವುಗಳಲ್ಲಿ ಉತ್ತೀರ್ಣರಾದುದರಿಂದ, ರಾಮನ ಆದರ್ಶಗಳನ್ನು ತಮ್ಮೊಳಗೆ ಆವಾಹನೆ ಮಾಡಿಕೊಂಡದ್ದರಿಂದ. 'ತನು ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು, ಮನ ಕರಗದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು' ಎಂದು ಅಕ್ಕ ಹೇಳುವ ಮಾತುಗಳ ಹಿನ್ನೆಲೆಯಲ್ಲಿ ಇರುವುದು, ಪೂಜೆಯನ್ನು ಮಾಡುವ ಅರ್ಹತೆಯನ್ನು ಪಡೆಯುವುದು ನಮ್ಮ ಬುದ್ಧಿ, ಭಾವಗಳು ಮತ್ತೊಂದು ಜೀವಿಯ ನೋವು ನಲಿವುಗಳಿಗೆ ಸ್ಪಂದಿಸಿದಾಗ ಮಾತ್ರ ಎನ್ನುವ ಅರ್ಥ ಮಾತ್ರ.





ಡಾ. ರಾಜೇಂದ್ರ ಶ್ರೀಗಳು ತ್ರಿವಿಧದಾಸೋಹವನ್ನು ನಡೆಸುವುದಕ್ಕಾಗಿ ತಮ್ಮ ಇಡೀ ಬದುಕನ್ನು ಗಂಧದಂತೆ ತೇಯ್ದವರು. ಎಷ್ಟೋ ದಿನಗಳು ತಮ್ಮ ನಿಷ್ಠೆಯ ಇಷ್ಟಲಿಂಗಪೂಜೆಯನ್ನೂ ಮಾಡಲು ಸಾಧ್ಯವಾಗದ ಒತ್ತಡಕ್ಕೆ ಸಿಲುಕಿ, ಬಡ ವಿದ್ಯಾರ್ಥಿಗಳ ಹಸಿದ ತುತ್ತಿನ ಚೀಲವನ್ನು ತುಂಬಿಸಲು ಸದಾ ಚಡಪಡಿಸಿದವರು. ಅಂತಹವರ ಜಯಂತಿಯನ್ನು ಆಚರಿಸುವ ಸಂದರ್ಭದಲ್ಲಿ, 'ಅವರಿಂದ ನಾವು ಮೇಲೆ ಬಂದೆವು, ನಮ್ಮ ಕುಟುಂಬ ಒಂದು ನೆಲೆ ಕಂಡುಕೊಂಡಿತು' ಎಂದು ಏನೆಲ್ಲ ಮಾತನಾಡುವ ನನ್ನಂತಹವರು, ಅವರ ಪ್ರಸಾದದ ಋಣ ಮೇಲಿರುವ ಅವರ ನಮ್ಮ ನರನಾಡಿಗಳಲ್ಲಿ ತುಂಬಿಕೊಂಡಿರುವಾಗ, ನಮ್ಮ ಋಣ 'ಮರುಪಾವತಿ'ಯಾಗಿದೆಯೆ ಎನ್ನುವ ಆತ್ಮಾವಲೋಕನ ನಮ್ಮೊಳಗೆ ಕಿಂಚಿತ್ತಾದರೂ ಮೊಳಕೆಯೊಡೆದರೆ ಅದು ಆ ಚೇತನಕ್ಕೆ ನಾವು ಸಲ್ಲಿಸುವ ನಿಜವಾದ ಭಕ್ತಿ ಗೌರವ ಎನ್ನುವುದು ನನ್ನ ಯಾವತ್ತೂ ಭಾವನೆ. 'ಜಗವೆಲ್ಲ ನಗುತಿರಲಿ, ಜಗದಳಲು ಎನಗಿರಲಿ' ಎನ್ನುವ ಸ್ಥಾಯೀ ಭಾವದಿಂದ ಶ್ರೀಮಂತಗೊಂಡಿದ್ದ ಅವರ ಚೇತನ 'ಲೋಕ ಮೆಚ್ಚುಗೆ'ಗಾಗಿ ಸೇವೆ ಮಾಡಿ ಸವೆಯಲಿಲ್ಲ. 'ಅಯ್ಯಾ ನೀ ಕೇಳಿದರೆ ಕೇಳು ಕೇಳದಿದ್ದರೆ ಮಾಣು, ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ' ಎನ್ನುವ ಅಕ್ಕನ ಮನಸ್ಥಿತಿ ಅವರದು. ತಾವು ಸ್ವತಃ ದೊಡ್ಡ ವಿದ್ಯಾವಂತರಾಗದಿದ್ದರೂ, ಹಳೆಯ ಮೈಸೂರು ಭಾಗದ ಜನತೆಯ ಮನೆ ಬಾಗಿಲಿಗೆ ವಿದ್ಯೆಯ ಪ್ರಖರ ಬೆಳಕನ್ನೇ ಹರಿಸಿದವರು. ಅಂತಹ ಪುಣ್ಯಾತ್ಮರ ಪೂಜೆ ಕೇವಲ ಭಾವಚಿತ್ರಕ್ಕೆ ಮಾತ್ರ ಮೀಸಲಾಗುವಂತದ್ದಲ್ಲ. ಅದರಾಚೆಗೂ ನಮ್ಮ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು ಚಾಚುವಂತಾಗಬೇಕು. ಇಂದು ಯಾರ ಕಣ್ಣೀರನ್ನೂ ಒರೆಸಲು ನಮಗೆ ಅವಕಾಶ ಸಿಕ್ಕಲಿಲ್ಲವಲ್ಲಾ ಎಂದು ಕೊರಗಬೇಕು; ಅವಕಾಶಗಳನ್ನು ಆಹ್ವಾನಿಸಿಕೊಳ್ಳಬೇಕು; ಆವಾಹಿಸಿಕೊಳ್ಳಬೇಕು. ಅದು ನಮ್ಮ ಬದುಕಿನ ಉಸಿರಾಗಬೇಕು.

* * *

ದಿನಾಂಕ 20.7.2014ರಂದು ಬೆಂಗಳೂರಿನಲ್ಲಿ ನಾಡಿನ ಹಿರಿಯ ಚಿಂತಕ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಸನ್ಮಾನ್ಯ ಗೊ.ರು. ಚನ್ನಬಸಪ್ಪನವರ ಅಭಿನಂದನಾ ಸಮಾರಂಭ ನಡೆಯಿತು. ಅದೊಂದು ಅವಿಸ್ಮರಣೀಯವಾದ ಸಂದರ್ಭ. ಅಂದಿನ ಸಮಾರಂಭದಲ್ಲಿ ಅಭಿಮಾನಿಗಳು ಅವರಿಗೆ 11,11,111-00 ರೂ.ಗಳ ಹಮ್ಮಿಣಿಯನ್ನು ಪ್ರೀತಿ, ಅಭಿಮಾನಗಳಿಂದ ಅರ್ಪಿಸಿದರು. ಈ ಹಣವನ್ನು ಪ್ರೀತಿಯಿಂದಲೇ ಸ್ವೀಕರಿಸಿ ಕೃತಜ್ಞತೆಯ ನುಡಿಗಳನ್ನಾಡಿದ ಗೊ.ರು.ಚ. 'ನನ್ನ ಸೇವಾ ಜೀವನದುದ್ದಕ್ಕೂ ಸಾರ್ವಜನಿಕರಿಂದ ಪಡೆದ ಹಣವನ್ನು ಎಂದಿಗೂ ಸ್ವಂತಕ್ಕೆ ಬಳಸಿಕೊಂಡಿಲ್ಲ. ಆ ತತ್ವಕ್ಕೆ ನಾನು ಇಂದಿಗೂ ಬದ್ಧನಾಗಿಯೇ ಬದುಕುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ಇಂದು ನನಗೆ ತಾವು ನೀಡಿರುವ ಹಣ ಹಾಗೂ ಇಳಕಲ್‌ನ ಶ್ರೀ ವಿಜಯ





ಮಹಾಂತೇಶ್ವರ ಮಠದ ಆಶೀರ್ವಾದಪೂರ್ವಕ ಕೊಡುಗೆ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿಯ ಮೊತ್ತ ಇವೆಲ್ಲವನ್ನೂ ಸೇರಿಸಿ ಈಗ ನಾನು ಕರ್ತವ್ಯ ನಿರ್ವಹಿಸುತ್ತಿರುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಿಗೆ ಅರ್ಪಿಸುತ್ತಾ ಈ ಹಣವನ್ನು ಮೂಲನಿಧಿಯಾಗಿ ಇಟ್ಟು, ಪರಿಷತ್ತಿನ ಪ್ರಕಟಣೆಗಳಿಗೆ ಅದರ ಬಡ್ಡಿಯನ್ನು ಬಳಸಿಕೊಳ್ಳಿ ಎಂದರು. (ಸುಮಾರು 13 ಲಕ್ಷ ರೂ.ಗಳಿಗೂ ಹೆಚ್ಚು) ಮುಂದುವರಿದು ಅವರು ಆ ದಿನ ಬಿಡುಗಡೆಯಾದ ಕೃತಿಗಳಿಗಾಗಿ ಅವರಿಗೆ ಬಂದಿದ್ದ ಒಂದೂವರೆ ಲಕ್ಷ ರೂಪಾಯಿಗಳನ್ನೂ, ಮುಂದೆ ಕೃತಿಗಳ ಮಾರಾಟದಿಂದ ಬರುವ ಸಮಸ್ತ ಹಣವನ್ನೂ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಕಟಣೆಗಳಿಗಾಗಿ ಬಳಸಿಕೊಳ್ಳಬಹುದೆಂದು ವಿನಂತಿಸಿದರು. ಇದನ್ನು ಕೇಳಿಸಿಕೊಂಡ ಇಡೀ ಸಭೆ ಒಂದು ನಿಮಿಷ ಅಚ್ಚರಿಯ ಮಡುವಿನಲ್ಲಿ ಮುಳುಗಿತು. ಚಿಂತನಾರ್ಹ ಅಂಶವೆಂದರೆ ಗೊ.ರು.ಚ. ಬಡ ಕುಟುಂಬವೊಂದರಲ್ಲಿ ಹುಟ್ಟಿ, ಪ್ರಾಥಮಿಕ ಶಾಲೆಯ ಮೇಷ್ಟರ ಕೆಲಸ ಮಾಡುತ್ತಲೇ, ತಮ್ಮ ಪಾರದರ್ಶಕ ಚಿಂತನೆ, ಪ್ರಬುದ್ಧ ನಡವಳಿಕೆಗಳಿಂದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬೆಳೆಸಿಕೊಂಡವರು. ಹಾಗೆ ನೋಡಿದರೆ ಅವರು ಸುತ್ತೂರು ಶ್ರೀಮಠದ ಅಶನ ವಸತಿಗಳ ಫಲಾನುಭವಿಯಾಗುವ ಅವಕಾಶವನ್ನೂ ಪಡೆದವರಲ್ಲ. ಅಂತಹ ಮಹನೀಯರು, ರಾಜೇಂದ್ರ ಶ್ರೀಗಳ ದಿವ್ಯ ಚೇತನಕ್ಕೆ ಮಾರುಹೋಗಿ, ಅವರು ಸ್ಥಾಪಿಸಿದ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ, ಬಹು ದೊಡ್ಡ ಮೊತ್ತದ ಇಡುಗಂಟನ್ನು ಅರ್ಪಿಸಿದುದು ಅಸಾಮಾನ್ಯ ವಿಷಯವೇ ಸರಿ.

ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ ಉದ್ದೇಶವಿಷ್ಟೇ. ಪರಮಪೂಜ್ಯರಿಗೆ ಭಕ್ತಿ ಸಮರ್ಪಣೆ ಮಾಡುವ ಏನೆಲ್ಲ ಬಗೆಗಳು, ಆಯಾಮಗಳನ್ನು ನಾವು ಕಂಡುಕೊಳ್ಳಬೇಕಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕಾಗಿಯಲ್ಲದೆ ಬೇರೇನೂ ಅಲ್ಲ. ಪರಮಪೂಜ್ಯರು ಕಟ್ಟಿದ ಜೆಎಸ್‌ಎಸ್ ಸಂಸ್ಥೆ ಇಂದು ಸಾಗರದಾಚೆಗೂ ತನ್ನ ಜ್ಞಾನಾನ್ನ ದಾಸೋಹದ ಆಯಾಮವನ್ನು ವಿಸ್ತರಿಸಿದೆ. ನಾವೆಲ್ಲ ಅದರ ಸಾಂಸ್ಕೃತಿಕ ವಾರಸುದಾರರಾಗಿ, ಅದಕ್ಕೆ ನಮ್ಮ ನಮ್ಮ ಶಕ್ತ್ಯಾನುಸಾರ ತನುಮನಧನಗಳನ್ನು ನಿರ್ವಂಚನೆಯಿಂದ ಮತ್ತು ಧಾರಾಳತನದಿಂದ ಸಮರ್ಪಿಸಬೇಕಾಗಿದೆ. ಪ್ರಾಯಃ ಈ ತೆರನ ಮನಃಸ್ಥಿತಿಯನ್ನು ಗಟ್ಟಿಗೊಳಿಸಿಕೊಂಡು ಅವರ ಸ್ಮರಣೆ, ಪೂಜೆಗಳನ್ನು ಮಾಡುವುದು 99ನೇ ಜಯಂತಿಯ ಸಂದರ್ಭದಲ್ಲಿ ನಾವು ತೆಗೆದುಕೊಳ್ಳಬಹುದಾದ ಪ್ರತಿಜ್ಞಾವಿಧಿಯಾಗಬೇಕು. ಇದಕ್ಕೆ ನಾವು ಜಯಂತಿಯ ಆಚರಣೆಯ ಸಂದರ್ಭದಲ್ಲಿ ಪ್ರೇರಣೆಯನ್ನು ಪಡೆಯಬೇಕು ಎನ್ನುವುದು ನನ್ನ ಮನದಾಳದ ಬಯಕೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ



## ಗುರುವಾಣಿ

ಪ್ರತಿ ವರ್ಷ ಆಗಸ್ಟ್ ತಿಂಗಳು ಬಂದಾಗಲೆಲ್ಲಾ ರಾಷ್ಟ್ರದ ಪ್ರತಿಯೊಬ್ಬರಿಗೂ ಒಂದು ರೀತಿಯ ರೋಮಾಂಚನ. ನೂರಾರು ವರ್ಷಗಳ ದಾಸ್ಯತ್ವ ಹೋಗಿ ಸ್ವಾತಂತ್ರ್ಯದ ಸುಖ ಸಂತೋಷಗಳನ್ನು ತಂದುಕೊಟ್ಟ ಆಗಸ್ಟ್ ಹದಿನೈದರ ನೆನಪು ಪ್ರತಿಯೊಬ್ಬರ ಒಳಹೊರಗನ್ನೂ ಆವರಿಸಿ ಅನಿರ್ವಚನೀಯವಾದ ಸಂತಸದ ಸ್ಥಿತಿಯನ್ನು ಉಂಟುಮಾಡುತ್ತದೆ. ಅಂತಹ ಒಂದು ಆನಂದಕ್ಕೆ ಕಾರಣರಾದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹಾಗೂ ಸಹಸ್ರಾರು ಅನಾಮಿಕ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ನೆನೆದು, ಕೃತಜ್ಞತೆಯ ಭಾವವನ್ನು ತುಂಬಿಕೊಂಡು, ಗಾಂಧೀಜಿ ಕಂಡ ಆದರ್ಶ ರಾಷ್ಟ್ರದ ಕನಸನ್ನು ಸಾಕಾರಗೊಳಿಸುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವುದಕ್ಕೆ ನೈತಿಕ ಶಕ್ತಿಯನ್ನು ಪಡೆಯಲು ಸ್ವಾತಂತ್ರ್ಯೋತ್ಸವ ಒಂದು ಮಹತ್ತರ ಕಾರಣವಾಗಿ ಪರಿಣಮಿಸುತ್ತದೆ; ಪರಿಣಮಿಸಬೇಕು. ಪರಕೀಯ ಪ್ರಭುತ್ವದ ಕರಾಳ ಸ್ವರೂಪವನ್ನು ತಿಳಿದ ಹಿಂದಿನ ತಲೆಮಾರಿನವರಿಗೆ ಮಾತ್ರ ಸ್ವಾತಂತ್ರ್ಯದ ನಿಜವಾದ ಮಹತ್ವ ಅರ್ಥವಾಗುತ್ತದೆ. ಮಾತೃಭೂಮಿಯಲ್ಲಿಯೇ ಪರಕೀಯರಂತೆ ಬದುಕುವ ಸ್ಥಿತಿ ಎಂತಹ ದಾರುಣವಾದುದು ಎನ್ನುವುದನ್ನು ಪರಿಭಾವಿಸಲು ದೇಶದ ಚರಿತ್ರೆಯನ್ನು ಗಂಭೀರವಾಗಿ ಅಧ್ಯಯನ ಮಾಡಬೇಕು. ಲಾಠಿ ಏಟು ತಿಂದು ತುರಂಗವಾಸದ ನರಕಸದೃಶ ಬದುಕನ್ನು ಅನುಭವಿಸಿದವರ ಜೀವನಗಾಥೆಯನ್ನು ಮನನ ಮಾಡಬೇಕು. ಆಗ ಮಾತ್ರ ನಮಗೆ ಸ್ವಾತಂತ್ರ್ಯದ ಬೆಲೆ ಅರ್ಥವಾಗಲು ಸಾಧ್ಯ.

ಹಿರಿಯ ಜಗದ್ಗುರುಗಳವರ ಜಯಂತಿ ಮಹೋತ್ಸವ ಇದೇ ಆಗಸ್ಟ್ ತಿಂಗಳಿನಲ್ಲಿಯೇ ನಡೆಯುತ್ತಿರುವುದಕ್ಕೂ, ಸ್ವಾತಂತ್ರ್ಯೋತ್ಸವಕ್ಕೂ ಒಂದು ಅಂತಸ್ಸಂಬಂಧವಿರುವುದನ್ನು ಗಮನಿಸಬಹುದು. ಪಡೆದ ಸ್ವಾತಂತ್ರ್ಯ ಶಾಶ್ವತವಾಗಿ ಉಳಿಯಬೇಕಾದರೆ, ಅದನ್ನು ಮುನ್ನಡೆಸುವವರಲ್ಲಿ ಹಾಗೂ ಅದನ್ನು ಅನುಭವಿಸುವವರಲ್ಲಿ ಇರಬೇಕಾದುದು ಮಾನಸಿಕ ಹಾಗೂ ಬೌದ್ಧಿಕ ಪ್ರಬುದ್ಧತೆ ಎಂಬುದು ನಿರ್ವಿವಾದ. ಅದು ಎಲ್ಲರಿಗೂ ತಂದುಕೊಟ್ಟ ಹಕ್ಕುಗಳಿಗಿಂತ ಹೆಚ್ಚಾಗಿ ಎಲ್ಲರಲ್ಲಿಯೂ ಇರಬೇಕಾದ ಕರ್ತವ್ಯಪ್ರಜ್ಞೆ. ಇಂತಹ ಪ್ರಬುದ್ಧತೆ ಸಾಮೂಹಿಕವಾಗಿ ದಕ್ಕುವುದಕ್ಕೆ ಇರುವ ಪ್ರಧಾನ ದಾರಿ ಎಂದರೆ 'ಜ್ಞಾನ'; ಈ ಜ್ಞಾನಕ್ಕೆ ಇರುವ ಏಕೈಕ ಮಾರ್ಗವೆಂದರೆ 'ವಿದ್ಯೆ'. ಹಾಗೆಯೇ ಈ ವಿದ್ಯೆ ತಂದುಕೊಡಬಹುದಾದ ವಿವೇಕ.





ಸ್ವಾತಂತ್ರ್ಯಪೂರ್ವದ ದಿನಮಾನಗಳಲ್ಲಿ ಗ್ರಾಮೀಣ ಭಾರತ ಹಸಿವು, ಅವಿದ್ಯೆಗಳಿಂದ ಒಂದು ರೋಗಗ್ರಸ್ತ ಸಮಾಜವಾಗಿತ್ತು. ಹಸಿವನ್ನು ಹಿಂಗಿಸದೆ ವಿದ್ಯೆಯನ್ನು ಕಲಿಸಲು ಸಾಧ್ಯವೂ ಅಲ್ಲ, ಅದು ಸಾಧುವೂ ಅಲ್ಲ. ಇಂತಹ ಸ್ಥಿತಿಯನ್ನು ಕಂಡು ಮರುಗಿದ ಪರಮಪೂಜ್ಯರು ಗ್ರಾಮೀಣ ಮಕ್ಕಳಿಗಾಗಿ ಮೊದಲು ಉಚಿತ ಪ್ರಸಾದನಿಲಯಗಳನ್ನು ತೆರೆದರು. ಅವುಗಳನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಉಳ್ಳವರಿಂದ ಹಣ ಪಡೆದು, ಅವಕಾಶವಂಚಿತರ ತುತ್ತಿನ ಚೀಲವನ್ನು ತುಂಬಲು ಪಟ್ಟ ಶ್ರಮ, ಇಟ್ಟ ಹೆಜ್ಜೆಗಳು ಶ್ರೀಮಠದ ಚರಿತ್ರೆಯಲ್ಲಿ ಒಂದು ವಿಸ್ಮಯದ, ಸಾರ್ಥಕ್ಯದ ಅಧ್ಯಾಯ. ಅವರು ಅಂದು ಕಂಡ ದೂರದೃಷ್ಟಿಯ ಅನಂತ ಕನಸುಗಳು ಇಂದು ಸಾಕಾರಗೊಂಡು ಸಂಸ್ಥೆಯು ವಿಸ್ತಾರವಾಗಿ ಬೆಳೆದಿದೆ. ಅವರು ನೆಟ್ಟ ಅಮೃತದ ಬೀಜಗಳ ಸುತ್ತ ಶ್ರೀಮಠ ಒಂದಿಷ್ಟು ಕಟ್ಟೆ ಕಟ್ಟಿ, ನೀರೆರೆದು, ಪೋಷಿಸಿರುವುದು ನಿಜವಾದರೂ, ಅದು ಪರಮಪೂಜ್ಯರ ಕೃಪಾಶೀರ್ವಾದದ ದಿವ್ಯಶಕ್ತಿ ಎನ್ನುವ ಭಾವ ಯಾವತ್ತೂ ಸ್ಥಾಯಿಯಾಗಿದ್ದು ಎಲ್ಲರನ್ನು ಮುನ್ನಡೆಸುತ್ತಿದೆ. ಸಾವಿರ ಸಂಖ್ಯೆಯ ನೌಕರರು, ಲಕ್ಷಾಂತರ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಯಾವಾಗಲೂ ಹಿರಿಯ ಗುರುಗಳ ದಿವ್ಯ ತೇಜಸ್ಸು ಬೆಳಗುತ್ತಿರುವಂತೆ ಭಾಸವಾಗುತ್ತದೆ. ಅದೇ ಮುಂದಣ ದಾರಿಯ ಬೆಳಕೂ ಆಗಿದೆ. ಸ್ವಾತಂತ್ರ್ಯಪೂರ್ವದಷ್ಟು ಹಿಂದೆಯೇ ಒಂದು ಸಣ್ಣ ಝರಿಯಂತೆ ಪ್ರಾರಂಭವಾದ ಜ್ಞಾನಾನ್ನ ದಾಸೋಹದ ಕಾಯಕ ಪೂಜ್ಯರ ಪ್ರೇರಣೆಯಿಂದ, ಭಕ್ತಸಮುದಾಯದ ಒಲವು ಮತ್ತು ಬೆಂಬಲಗಳಿಂದ ಇಂದು ತುಂಬಿ ಹರಿಯುತ್ತಿರುವ ಜೀವಧಾರೆಯಂತೆ ಒಂದು ರೀತಿಯ ಧನ್ಯತಾಭಾವವನ್ನು ತಂದು ಕೊಡುತ್ತಿದೆ. ಶ್ರೀ ಕ್ಷೇತ್ರದ ಗುರುಪರಂಪರೆಯ ಎಲ್ಲ ಶಕ್ತಿವಿಶೇಷಗಳು ಡಾ. ರಾಜೇಂದ್ರ ಶ್ರೀಗಳಲ್ಲಿ ಘನೀಭವಿಸಿ ಈ ದಾಸೋಹದ ಮಹಾಮಣಿಹದ ಗುಪ್ತಶಕ್ತಿಯಾಗಿ ಪ್ರಕಟವಾಗಿದೆ ಎನ್ನುವುದು ಭಾವಕೋಶದಲ್ಲಿ ಸದಾ ಅನುರಣಿಸುತ್ತದೆ. ಇದು ಪೂಜ್ಯರ 99ನೆಯ ಜಯಂತಿಯಾಗಿದ್ದು, ಮುಂದೆ ಇಡೀ ವರ್ಷ ಅವರ ಶತಮಾನದ ಜಯಂತ್ಯುತ್ಸವವನ್ನು ಆಚರಿಸಲು ಪೂರ್ವಸಿದ್ಧತೆ ಪ್ರಾರಂಭವಾಗಿದೆ. ಶ್ರೀಮಠದ ಭಕ್ತಸಮೂಹ ಅದನ್ನು ಚರಿತ್ರಾರ್ಹವಾಗಿಸಬೇಕೆಂದು ಉತ್ಸಾಹಿತರಾಗಿರುವುದು ಹಿರಿಯ ಗುರುಗಳ ಬಗ್ಗೆ ಜನಸಮುದಾಯಕ್ಕೆ ಇರುವ ಭಕ್ತಿಗೌರವಗಳ ಸಂಕೇತವಾಗಿದೆ. ಸರ್ವರ ಅಂತರಾತ್ಮದಲ್ಲಿ ಸದಾ ಇದ್ದುಕೊಂಡು, ಕೈಹಿಡಿದು ನಡೆಸುತ್ತಿರುವ ಪೂಜ್ಯರ ವಿಭೂತಿಚೇತನಕ್ಕೆ ಮಣಿಯುತ್ತ, ಪೂಜ್ಯರ ಕೃಪಾಶೀರ್ವಾದಗಳು ಎಲ್ಲರಿಗೂ ಬೆನ್-ಬಲವಾಗಿರಲೆಂದು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**





## ಶ್ರೀಗುರು ವಚನ

- ಡಾ. ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ವಿವಿಧ ವೇದಿಕೆಗಳಿಂದ ನೀಡಿದ ಆಶೀರ್ವಚನ
- ಮೈಸೂರು ಆಕಾಶವಾಣಿ ಕೇಂದ್ರದಿಂದ ಪ್ರಸಾರವಾದ ಚಿಂತನೆಗಳು
- 'ಪ್ರಸಾದ' ಪತ್ರಿಕೆಗಾಗಿ ದಯಪಾಲಿಸಿದ 'ಗುರುವಾಣಿ'

# ಆಶೀರ್ವಚನ - ೧



ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ|
ನಮಸ್ಸದ್ಗುರುನಾಥಾಯ ಷಟ್‌ಸ್ಥಲಬ್ರಹ್ಮಮೂರ್ತಯೇ||

ನಮ್ಮ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತಿ ಮಹೋತ್ಸವದ ಸಮಯದಲ್ಲಿ ವ್ಯವಸ್ಥಿತವಾಗಿರುವ ಈ ಧರ್ಮಸಿಂಹಾಸನಾರೋಹಣದ ಶುಭಸಮಾರಂಭದಲ್ಲಿ ನೀವು ನಮ್ಮನ್ನು ಭಕ್ತಿಯಿಂದ ಗೌರವಿಸಿದ್ದೀರಿ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ನಿಮ್ಮೆಲ್ಲರಿಗೂ ಸಮಸ್ತ ಸನ್ಮಂಗಳಗಳನ್ನು ಕರುಣಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಈ ಲೋಕದಲ್ಲಿ ಮಾನವನಾಗಿ ಹುಟ್ಟಿದ ಬಳಿಕ ಪ್ರತಿಯೊಬ್ಬರೂ ಯಾವುದಾದರೊಂದು ಕಾಯಕವನ್ನು ಮಾಡಲೇಬೇಕು. ಭವಸಾಗರವನ್ನು ಸುಗಮವಾಗಿ ದಾಟಲು ಕಾಯಕ ಒಂದು ಉತ್ತಮವಾದ ಹರಿಗೋಲು. "ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ,

---

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1018 ನೆಯ ಜಯಂತಿ ಮಹೋತ್ಸವದಲ್ಲಿ ದಯಪಾಲಿಸಿದ ಶುಭಸಂದೇಶ (1978)





ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು; ಜಂಗಮವಾದರೂ ಕಾಯಕದಿಂದಲೇ ವೇಶದ ಪಾಶ ಹರಿವುದು" ಎಂಬ ಶರಣರ ಸೂಳ್ನುಡಿಯಂತೆ, ಕರ್ತವ್ಯ ದೃಷ್ಟಿಯಿಂದ ನಾವು ಮಾಡಿಕೊಂಡು ಬಂದಿರುವ ಕಾಯಕದಿಂದ, ಯತ್ಕಿಂಚಿತ್ ಲೋಕಕಲ್ಯಾಣವು (ಸಾಧನೆ) ಆಗಿರಬಹುದು. ಆದರಿಂದ ನಾಡಿನ ಜನತೆಯ ಧಾರ್ಮಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಭ್ಯುದಯಗಳು ಸಾಧಿತವಾಗಿದೆಯೆಂದು ನಿಮ್ಮ ಬಿನ್ನವತ್ತಳೆಯಲ್ಲಿ ನೀವು ಶ್ರದ್ಧಾಭಕ್ತಿಗಳಿಂದ ಸ್ಮರಿಸಿದ್ದೀರಿ. ರಾಷ್ಟ್ರದ ಅಭ್ಯುದಯದಲ್ಲಿ ನಮ್ಮ ಪಾಲಿನ ಸೇವೆಯನ್ನು ಸಲ್ಲಿಸುವ ಸೌಭಾಗ್ಯ ನಮಗೆ ಲಭ್ಯವಾಗಿರುವುದು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಮತ್ತು ನಮ್ಮ ಪೂಜ್ಯ ಗುರುವರ್ಯ ಶ್ರೀ ಶಿವರಾತ್ರೀಶ್ವರ ಮಹಾಸನ್ನಿಧಿಯವರ ಕೃಪಾಶೀರ್ವಾದದಿಂದಲೇ ಎನ್ನುವುದನ್ನು ನಾವು ಅರಿತುಕೊಂಡಿದ್ದೇವೆ. ಈ ನಮ್ಮ ಸೇವಾಕಾರ್ಯಗಳಿಗೆ ಮಹಾಜನತೆ ಮತ್ತು ನಮ್ಮ ಸರ್ಕಾರ ನೀಡಿರುವ ಸಹಕಾರಗಳನ್ನು ನಾವು ಈ ಸಂದರ್ಭದಲ್ಲಿ ಅಭಿಮಾನದಿಂದ ಸ್ಮರಿಸಿಕೊಳ್ಳುತ್ತೇವೆ.

ನಾವು ಸಂಸ್ಥಾಪಿಸಿರುವ ಜ್ಞಾನದೇಗುಲಗಳು ನಮ್ಮ ನಾಡಿನ ವಿದ್ಯಾರ್ಥಿಗಳ ಇನ್ನೂ ಹೆಚ್ಚಿನ ಶ್ರೇಯೋಭಿವೃದ್ಧಿಗೆ ಪ್ರೇರಕಶಕ್ತಿಕೇಂದ್ರಗಳಾಗಿ ಬೆಳೆಯಬೇಕು. ನಮ್ಮ ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಈ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಮಾರಂಭಗಳು ಜನತೆಯ ಮನೋಮಂದಿರದಲ್ಲಿ ಅಧ್ಯಾತ್ಮದ ಬೆಳಕನ್ನು ಬೆಳಗಿಸಿ ಆತ್ಮಕಲ್ಯಾಣ ಸಾಧನೆಗೆ ಪೂರಕವಾದ ನಂದಾದೀಪಗಳಾಗಬೇಕೆನ್ನುವುದು ನಮ್ಮ ಮಹತ್ತರವಾದ ಆಕಾಂಕ್ಷೆ.

ಇಂದು ನಮ್ಮ ರಾಷ್ಟ್ರದ ಜನತೆಯಲ್ಲಿ ಧಾರ್ಮಿಕ ವಿಷಯಗಳಲ್ಲಿ ಶ್ರದ್ಧೆ, ಧರ್ಮದಲ್ಲಿ ಆಸಕ್ತಿ ಅಳಿಸಿಹೋಗುತ್ತಿರುವಂತೆ ಭಾಸವಾಗುತ್ತಿದೆ ಎನ್ನುವ ಮಾತುಗಳನ್ನು ಕೇಳುತ್ತಿದ್ದೇವೆ. ಕೆಲವರಿಗೆ ಧರ್ಮದಲ್ಲಿ ಶ್ರದ್ಧೆ ಇದ್ದರೂ ನಿಜವಾದ 'ಧರ್ಮ ಎಂದರೇನು?' ಅನ್ನುವುದನ್ನು ಅರ್ಥಮಾಡಿಕೊಳ್ಳುವಷ್ಟು ಜ್ಞಾನವಾಗಲೀ ವಿದ್ಯೆಯಾಗಲೀ ಇಲ್ಲ. ಧರ್ಮ ಬೇರೆ, ಜೀವನವೆ ಬೇರೆ ಎನ್ನುವುದೇ ಅವರ ನಂಬಿಕೆ.

ಇನ್ನು ಕೆಲವರು ವಿದ್ಯಾವಂತರು, ಪದವೀಧರರು, ವಿವೇಚನಾಶಕ್ತಿಯುಳ್ಳವರು ಮನಸ್ಸು ಮಾಡಿದರೆ ಧರ್ಮಾಧರ್ಮಗಳನ್ನು ಅರಿತುಕೊಳ್ಳುವ ಸಾಮರ್ಥ್ಯವುಳ್ಳವರು ಭೌತಿಕ ಸುಖಸಾಧನಗಳೇ ಮಾನವನ ಸರ್ವಸ್ವ. ಆ ಸುಖಕ್ಕಿಂತ ಮಿಗಿಲಾದದ್ದು ಮತ್ತೇನೂ ಇಲ್ಲವೆನ್ನುವ ನಂಬಿಕೆಯುಳ್ಳವರು. ಇವರಿಗೆ ನಿಜವಾದ ಧರ್ಮವನ್ನು ತಿಳಿದುಕೊಳ್ಳುವ ಆಸಕ್ತಿ ಇಲ್ಲ. ಇನ್ನೂ ಕೆಲವರು ಧರ್ಮಾಚರಣೆ ಮಾಡುವುದನ್ನು ನೋಡಿ ಸಹಿಸಿಕೊಳ್ಳುವುದೂ ಕಷ್ಟವಾದ ಕೆಲಸ. ಧರ್ಮದಲ್ಲಿ ನಂಬಿಕೆ ಇಟ್ಟಿರುವವರನ್ನು ನೋಡಿ







ಅಪಹಾಸ್ಯ ಮಾಡಲು ಹಿಂಜರಿಯುವುದಿಲ್ಲ. ಈ ಮೇಲಿನ ಎರಡು ವಿಧದ ಜನರ ಸಂಖ್ಯೆ ಮುಂದುವರಿದರೆ ನಮ್ಮ ರಾಷ್ಟ್ರದ ಕಲ್ಯಾಣ ಕನಸಿನ ಮಾತಾಗುವುದರಲ್ಲಿ ಸಂಶಯವಿಲ್ಲ. ಜೀವನದಲ್ಲಿ ಧರ್ಮಾಚರಣೆಗಳನ್ನು ಮಾಡಲು ಅಪಾರವಾದ ವಿದ್ಯೆಯ ಅಥವಾ ಪದವಿಯ ಅವಶ್ಯಕತೆಯಾಗಲೀ ಅಥವ ಅಧಿಕವಾದ ಹಣದ ಅವಶ್ಯಕತೆಯಾಗಲೀ ಬೇಕಾಗುವುದಿಲ್ಲ ಎನ್ನುವುದನ್ನು ನಮ್ಮ ದೀನದಲಿತ ವರ್ಗ ಅರ್ಥಮಾಡಿಕೊಳ್ಳಬೇಕು. ಈ ಅನಿಷ್ಟ ನಿವಾರಣೆಯಾಗಿ 'ಧರ್ಮ' ಉದ್ಧಾರವಾಗಬೇಕಾದರೆ, ಧರ್ಮ ಬೇರೆ ಜೀವನವೇ ಬೇರೆ ಒಂದಕ್ಕೊಂದು ಸಂಬಂಧವಿಲ್ಲ ಎನ್ನುವ ಭ್ರಮೆ ನಿರಸನವಾಗಬೇಕು. ಜೀವನ ಧರ್ಮ ಒಂದಕ್ಕೊಂದು ಪೂರಕ, ಎರಡನ್ನು ಜೊತೆಜೊತೆಗೇ ಬೆಳೆಸಿಕೊಳ್ಳಬೇಕು.

ಧರ್ಮ ಮತ್ತು ಜೀವನ ಒಂದೇ ನಾಣ್ಯದ ಎರಡು ಮುಖಗಳು. ಅವು ಪ್ರಕಾಶಮಾನವಾಗಿರಬೇಕು; ಸವಕಲಾಗಬಾರದು. ಭೌತಿಕ ಅಭ್ಯುದಯ ಧರ್ಮಸಾಧನೆಗೆ ಪೂರಕವಾದಾಗಲೇ ಜೀವನದ ಪರಿಪೂರ್ಣತೆಯಾಗುವುದು. ಕಾಣದ ಮಹರ್ಷಿಗಳು ಧರ್ಮಲಕ್ಷಣಗಳನ್ನು ನಿರೂಪಣೆ ಮಾಡುತ್ತಾ 'ಯತೋಭ್ಯುದಯ ನಿಶ್ರೇಯಸಸಿದ್ಧಿಃ ಸಧರ್ಮ" ಅಂದರೆ ಯಾವ ಜೀವನಮಾರ್ಗದಿಂದ ಭೌತಿಕ ಸುಖ ಮತ್ತು ಆಧ್ಯಾತ್ಮಿಕ ಶ್ರೇಯಸ್ಸು ಸಾಧ್ಯವಾಗುತ್ತದೆಯೋ, ಅದೆ ಧರ್ಮ ಎಂದರು. ಜೀವನದಲ್ಲಿ ಅವಿರತವಾಗಿ ಯಾರು ಧರ್ಮವನ್ನು ಪರಿಪೋಷಿಸಿಕೊಂಡು ಬರುತ್ತಾರೊ ಅವರನ್ನು ಧರ್ಮವು ರಕ್ಷಿಸುತ್ತದೆ ಎಂಬ ಅರ್ಥವನ್ನು ಹೇಳುತ್ತದೆ.

"ಧರ್ಮೋ ರಕ್ಷತಿ ರಕ್ಷಿತಃ"

ಜೀವನ ಧರ್ಮಗಳು ಮಾನವರ ಆತ್ಮ ಮೇಲೇರಲು ಅವಶ್ಯಕವಾದ ಎರಡು ರೆಕ್ಕೆಗಳಿದ್ದ ಹಾಗೆ. ಒಂದು ರೆಕ್ಕೆಯ ಬಡಿತದಿಂದ ಮೇಲೇರಲು ಸಾಧ್ಯವಿಲ್ಲ. ಆದ್ದರಿಂದ ಜೀವಿಕೆಯ ಜೊತೆಗೇ ಧರ್ಮಸಂಚಯನವನ್ನೂ ಮಾಡಿಕೊಳ್ಳಬೇಕು. ಧರ್ಮಸಂಚಯವಾದಾಗಲೇ ಈ ಜೀವ ದೇಹಗಳ ಪಶುಭಾವ ನಿವಾರಣೆಯಾಗುತ್ತದೆ. ಈ ಧರ್ಮಸಂಚಯನ ಲಿಂಗದ ಮುಖಾಂತರವಾಗಬಹುದು; ಮತ್ತಾವುದಾದರೂ ಇಷ್ಟದೈವದ ಆರಾಧನೆಯಿಂದಲಾದರೂ ಆಗಬಹುದು. ಭಕ್ತಿ, ಧ್ಯಾನ, ಪೂಜೆ ಮಾನವರನ್ನು ಈ ಭವಸಾಗರದಿಂದ ದಾಟಿಸುವ ಸೇತುವೆಗಳು, ಪರಿಪೂರ್ಣತೆಯನ್ನು ದೊರಕಿಸಿಕೊಡುವ ಚಿಂತಾರತ್ನಗಳು, ಶ್ರದ್ಧೆಯಿಂದ ಮಾಡಿದ ಭಕ್ತಿ, ಧ್ಯಾನ, ಪೂಜೆ, ಶಾಶ್ವತ ಸುಖವನ್ನು ಕೊಡುತ್ತದೆ. ಕೇವಲ ಇನ್ನೊಬ್ಬರ ಮೆಚ್ಚಿಕೆಗೆ ಮಾಡುವುದು ಧರ್ಮವಲ್ಲ. ನಮ್ಮ ಪೀಠದ ಗುರುಗಳಲ್ಲೊಬ್ಬರಾದ ಶ್ರೀ ಘನಲಿಂಗಿದೇವರು ಹೇಳುವ "ಪಂಚಭೂತಂಗಳ ಕುಟಿಲವ್ಯಾಪಾರಗಳೆಂಬ ಬಲೆಗೆ ತಾನು ಸಿಕ್ಕಿ ಭಕ್ತಿ ಜ್ಞಾನ ವೈರಾಗ್ಯಮಂ ಸುಟ್ಟುರುಹಿ, ಉಪಾಧಿಕೆಯಲ್ಲಿ ಒಡವೆರೆದು ಹೊಟ್ಟೆಯ ಕಿಚ್ಚಿಗೆ ಇಷ್ಟಲಿಂಗಮಂ ಕರದಲ್ಲಿ





ಪಿಡಿದು ಇದಿರ ಮಚ್ಚಿಸುವೆನೆಂದು ಆ ಲಿಂಗಮಂ ನೋಡುವ ನೋಟವೆಂತಿಪ್ಪುದೆಂದಡೆ ಹೊತ್ತು ಹೋಗದ ಕೋಡಗ ತಿರುಗಾಟಕ್ಕೆ ಬಂದು ಮಾಣಿಕ್ಯಮಂ ಕಂಡು ಆ ಮಾಣಿಕ್ಯಮಂ ಕರದಲ್ಲಿ ಪಿಡಿದು ಮೂಸಿ, ನೆಕ್ಕಿ, ನೋಡಿ, ಹಲ್ಲುಕಿರಿದು ನೋಡಿ ನೋಡಿ ಕಾಲಮಂ ಕಳೆವ ತೆರನಂತಾಯಿತ್ತಯ್ಯ ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ" ಎನ್ನುವ ವಚನದಲ್ಲಿ ಪೂಜೆ ಧ್ಯಾನ ಭಕ್ತಿ ಮಾಡುವ ರೀತಿಯನ್ನೂ ಮನಮುಟ್ಟುವಂತೆ ವಿವರಿಸುವುದನ್ನೂ ಅರಿತು ಆತ್ಮಕಲ್ಯಾಣವನ್ನು ಸಾಧಿಸಿಕೊಳ್ಳಬೇಕು.

ಜೀವನ ಧರ್ಮಗಳನ್ನು ಜೊತೆ ಜೊತೆ ಕೂಡಿಸಿಕೊಂಡು, ಬಾಳಿದ ಜನತೆ, ಸಮಾಜ, ರಾಷ್ಟ್ರ ನಿಜವಾಗಿಯೂ ಅಭ್ಯುದಯವನ್ನು ಸಾಧಿಸುತ್ತದೆ. ಸುದೈವದಿಂದ ಇಂದು ನಮ್ಮ ರಾಷ್ಟ್ರನಾಯಕರು ಧರ್ಮಶ್ರದ್ಧಾಳುಗಳಾಗಿರುವುದು ನಮಗೆ ಸಮಾಧಾನದ ವಿಷಯವಾಗಿದೆ. ನಮ್ಮ ರಾಷ್ಟ್ರದ ಭವಿಷ್ಯ ಇಂದಿನ ನಮ್ಮ ವಿದ್ಯಾರ್ಥಿಗಳು ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡುವುದರ ಜೊತೆಗೇ ಸಚ್ಚಾರಿತ್ರ್ಯವನ್ನು ಬೆಳೆಸಿಕೊಂಡು ನಮ್ಮ ಸಂಸ್ಕೃತಿ ಮತ್ತು ಧಾರ್ಮಿಕಮೌಲ್ಯಗಳನ್ನು ಮೈಗೂಡಿಸಿಕೊಂಡು ಶಿಸ್ತಿನ ಪಾಲಕರಾಗುವ ಸದ್ಗುಣ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಹಾಗಾದಾಗ ಮಾತ್ರ ನಮ್ಮ ರಾಷ್ಟ್ರ ಉದ್ಧಾರವಾಗುತ್ತದೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರವರ ಕೃಪಾಶೀರ್ವಾದಗಳಿಂದ ನಮ್ಮ ರಾಷ್ಟ್ರದಲ್ಲಿ ಸಮಸ್ತ ಆಗುಹೋಗುಗಳೂ ಶಾಂತಿ ಸಮರಸದಿಂದ ನಡೆಯುವಂತಾಗಿ ಜನತೆಯ ಸುಖಸಮೃದ್ಧಿಗೆ ಕಾರಣವಾಗಲೆಂದು ಹಾರೈಸುತ್ತೇವೆ. □

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು,
ನಿಷ್ಪತ್ತಿಯೆಂಬ ಹಣ್ಣಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

- **ಬಸವಣ್ಣ**



## ಆಶೀರ್ವಚನ - ೨



ಪರಕೆ ಪರವಾಗಿರ್ದ ಪರತತ್ವಮೂರ್ತಿಯ ನಿಜ
ದಿರವೆ ರೂಪಾಗಿ, ಧರೆಯೊಳಗೆ ಚರಿಸುತಿಹ
ಪರಮ ಶ್ರೀ ಗುರುವೇ ಕೃಪೆಯಾಗು||

ಉಪಮಿಸಬಾರದ ಉಪಮಾತೀತರೂ, ಕಾಲಕರ್ಮರಹಿತರೂ, ನಿಜವನರಿದ ನಿಶ್ಚಿಂತರೂ, ಪರಮನೊಳಕೊಂಡ ಪರಿಣಾಮಿಗಳೂ ಆಗಿ, ಮಾನವಕೋಟಿಗೆ ಕಲ್ಯಾಣವನ್ನೆಸಗಿ ನಿಜಶಾಂತಿಯನ್ನನುಗ್ರಹಿಸಿದವರು ನಮ್ಮ ಆದಿ ಶ್ರೀಗುರು ಶಿವರಾತ್ರೀಶ್ವರ ಭಗವತ್ಪಾದರು.

ಧರ್ಮಗ್ಲಾನಿಯಾದಾಗ ಧರ್ಮಸಂಸ್ಥಾಪನೆ ಮಾಡಿ, ಜಗತ್ಕಲ್ಯಾಣವನ್ನೆಸಗಲು ಮಹಾತ್ಮರುದಿಸಿ ಬರುವುದು ವಿಶ್ವದ ಇತಿಹಾಸದಿಂದ ವ್ಯಕ್ತವಾಗುವುದು. ಸನಾತನ

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1020ನೆಯ ಜಯಂತಿ ಮಹೋತ್ಸವದಲ್ಲಿ ಅನುಗ್ರಹಿಸಿದ ಆಶೀರ್ವಾದಪೂರ್ವಕ ಸಂದೇಶ. (1980)





ಋಷಿಗಳು, ರೇಣುಕಾದ್ಯಾಚಾರ್ಯರು, ಏಸುಕ್ರಿಸ್ತ, ಕನ್‌ಫ್ಯೂಸಿಯಸ್, ಬುದ್ಧ, ಮಹಾವೀರ, ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು, ಶಂಕರ, ರಾಮಾನುಜ, ಬಸವಾದಿ ಶಿವಶರಣರು, ಮಧ್ವಾಚಾರ್ಯ ಮೊದಲಾದ ಮಹಾನುಭಾವರು ಧರ್ಮಜಾಗೃತಿಯನ್ನುಂಟುಮಾಡಿ, ಮರ್ತ್ಯವನ್ನು ಮಹವನ್ನಾಗಿಸಲು ಮಹತ್ಪ್ರಯತ್ನ ಮಾಡಿದರು. ಅವರು ಅರುಹಿದ ಮಹಾತತ್ವಗಳನ್ನು ನೆನೆದು ಅವುಗಳನ್ನು ಅನುಷ್ಠಾನದಲ್ಲಿ ತಂದು ಜೀವನವನ್ನು ಪಾವನ ಮಾಡಿಕೊಳ್ಳುವುದಕ್ಕಾಗಿ ಆ ಮಹಾತ್ಮರ ದಿವ್ಯ ಜಯಂತಿಯನ್ನು ಭಕ್ತ ಮಹಾಶಯರು ಏರ್ಪಡಿಸುವರು. ಅಂತೆಯೇ ಪ್ರತಿ ವರ್ಷವೂ ಆದಿಗುರುಗಳ ಜಯಂತಿ ಮಹೋತ್ಸವವನ್ನೇರ್ಪಡಿಸಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳ ಮೂಲಕ ಮಹಾಜನತೆಯಲ್ಲಿ ಧರ್ಮಶ್ರದ್ಧೆಯನ್ನುಂಟುಮಾಡಿತ್ತಿರುವ ಈ ಉತ್ಸವ ಸಮಿತಿಯವರ ಕಾರ್ಯ ಅಭಿನಂದನೀಯವಾದುದು.

ಭಾರತ ದೇಶವು, ಧರ್ಮ ಮತ್ತು ಸಂಸ್ಕೃತಿಗೆ ವಿಖ್ಯಾತವಾದುದು. ಆದರೆ, ಅವು ಇಂದು ಮಸಕುಮಸಕಾಗಿವೆ. ಧರ್ಮವನ್ನು ನಿರ್ಲಕ್ಷಿಸಿದ ಮಾನವನು ನಿಜಸುಖ ಶಾಂತಿಗಳನ್ನು ಹೊಂದಲಾರ. ಯಾವುದು ವಿಶ್ವವನ್ನು, ಸಕಲ ಚರಾಚರವಸ್ತುಗಳನ್ನು ಪೋಷಿಸಿ, ರಕ್ಷಿಸಿ, ಅವುಗಳ ಸರ್ವತೋಮುಖ ಪ್ರಗತಿಗೆ ಕಾರಣವಾಗಿ, ಆತ್ಯಂತಿಕ ಕಲ್ಯಾಣವನ್ನುಂಟುಮಾಡುವುದೋ ಅದೇ ಧರ್ಮ.

"ಯತೋಽಭ್ಯುದಯ ನಿಶ್ರೇಯಸಿದ್ಧಿಃ ಸ ಧರ್ಮಃ" ಎಂಬ ಮಾತು ಈ ಭಾವವನ್ನು ಸಮರ್ಥಿಸುತ್ತದೆ. ಇಲ್ಲಿ-ಅಲ್ಲಿ, ಇಹ-ಪರಗಳಲ್ಲಿ ಸಲ್ಲುವಂತಹ ಪರಿಪೂರ್ಣ ಜೀವನಕ್ಕೆ ಸಾಧಕವಾದುದೇ ಧರ್ಮ. ಇಂತಹ ಪರಿಪೂರ್ಣ ಜೀವನಕ್ಕೆ ಮಾರಕವಾದುದೇ ಅಧರ್ಮ. ಮಾನವನ ಪರಿಪೂರ್ಣ ಜೀವನಕ್ಕೆ ಅಡ್ಡಿ ಬರುವ ಆಸೆ, ಆಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಇತ್ಯಾದಿಗಳನ್ನು ನಿವಾರಿಸಬೇಕು. ಜೀವನು ದೇವನಾಗಲು ಪ್ರತಿಬಂಧಕಗಳಾಗಿರುವ ಆಸುರೀಪ್ರವೃತ್ತಿಯನ್ನು ನೀಗುವುದು ಮಾತ್ರವೇ ಅಲ್ಲದೆ, ದೇವನಾಗಲು ಸಹಾಯವೆಸಗುವ ಸತ್ಯ, ಅಹಿಂಸೆ, ಅಸ್ತೇಯ, ದಯೆ, ದಾನ, ಮೊದಲಾದ ದೈವೀಗುಣಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸಿಕೊಳ್ಳಬೇಕು.

ಭಾರತೀಯ ತತ್ತ್ವಜ್ಞಾನವು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಕ್ರಮವಾಗಿ ಹೇಳಿ, ಅವುಗಳಲ್ಲಿ ಧರ್ಮಕ್ಕೆ ಅಗ್ರಸ್ಥಾನವನ್ನು ಕೊಟ್ಟು, ಉಳಿದ ಮೂರು ಪುರುಷಾರ್ಥಗಳೂ ಧರ್ಮಸಮ್ಮತವಾಗಬೇಕೆಂದರುಹಿದೆ. ಅರ್ಥವನ್ನು ಆರ್ಜಿಸಬೇಕಾದರೂ ಅದು ಧರ್ಮಕ್ಕೆ ಅನುಗುಣವಾಗಿರಬೇಕು. ಒಟ್ಟಿನಲ್ಲಿ ಭೌತಿಕ ಸಂಪತ್ತು, ಆಧ್ಯಾತ್ಮಿಕ ಸಂಪತ್ತಿನೊಡನೆ ಧರ್ಮಸಮ್ಮತವಾಗಿ ಸಮರಸ ಹೊಂದಿ, ಅದರ ವಿತರಣೆಯಾದಾಗ ಮಾತ್ರ ನಿಜಸುಖ ಸಾಧ್ಯವಾಗುತ್ತದೆ.







ಆದುದರಿಂದಲೇ ಪಾಶ್ಚಾತ್ಯರು ಬೌದ್ಧಿಕ ಮತ್ತು ವೈಜ್ಞಾನಿಕ ಸಾಧನೆಗಳ ಸಿದ್ಧಿಯಿಂದ ಅಪಾರ ಭೌತಿಕ ಸಂಪತ್ತನ್ನು ಹೊಂದಿದ್ದರೂ, ಸುಖಸಂತೃಪ್ತಿಯ ಶಾಂತಜೀವನದಿಂದ ವಂಚಿತರಾಗಿದ್ದಾರೆ. ಆರ್ಥಿಕ ಅಸಮಾನತೆ ಅಳಿದು, ಬಡವ ಬಲ್ಲಿದನೆಂಬ ಭೇದ ತೊಲಗಿ, ಸಮಾನತೆ ನೆಲೆಸಿದಾಗ ಮಾತ್ರ ವಿಶ್ವದಲ್ಲಿ ನಿಜಶಾಂತಿ ನೆಲಸುತ್ತದೆ.

ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಂ|
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್||

- ಎಂಬ ಸನಾತರ ವಾಣಿ

'ನಿನ್ನ ನೆರೆಹೊರೆಯವರನ್ನು ನಿನ್ನಂತೆಯೇ ಕಾಣು' ಎಂಬ ಏಸುವಿನ ನುಡಿ, ಇವುಗಳ ಭಾವದಲ್ಲಿ ಆವ ಅಂತರವೂ ಇಲ್ಲ. ಧರ್ಮದ ಮೂಲಭೂತ ಅಂಶಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲದೆ ಎಲ್ಲಾ ಧರ್ಮಗಳೂ ಮಾನವ ಕಲ್ಯಾಣಕ್ಕೆ ಸಾಧಕವಾಗಿರುವುದನ್ನು ಗಮನಿಸಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ವಿಷಯದಲ್ಲಿ ಇತರರು ಸೌಜನ್ಯ ಸದ್ಭಾವದಿಂದ ವರ್ತಿಸಬೇಕೆಂದು ಹೇಗೆ ಆಶಿಸುವನೋ ಅವನೂ ಸಹ ಅದೇ ರೀತಿ ಪರರೊಡನೆ ಸೌಜನ್ಯದಿಂದ ವರ್ತಿಸಿದರೆ ಸಭ್ಯಸುಂದರ ಸುಸಂಸ್ಕೃತ ಮಾನವ ಸಮಾಜವು ರೂಪುಗೊಳ್ಳುವುದು.

ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಲ್ಲಿಯೂ ಇಂದು ಕಂಡುಬರುವ ಅಶಾಂತಿ ಮತ್ತು ಅಶಿಸ್ತಿಗೆ ಧರ್ಮಶ್ರದ್ಧೆಯ ಅಭಾವವೇ ಕಾರಣ.

ಭಾರತ ದೇಶವನ್ನು ಪ್ರಗತಿಪಥದತ್ತ ಮುನ್ನಡೆಸಿ, ಸಮೃದ್ಧ ರಾಷ್ಟ್ರವನ್ನಾಗಿ ರೂಪಿಸಲು ನಮ್ಮ ದೇಶದ ರಾಷ್ಟ್ರನಾಯಕರು ಮತ್ತು ತಜ್ಞರು ಅನೇಕ ಯೋಜನೆಗಳನ್ನು ಹಾಕಿಕೊಂಡರು. ಆದರೆ, ಇನ್ನೂ ಜನರ ಬಡತನ ಪೂರ್ಣವಾಗಿ ನಿವಾರಣೆಯಾಗಿಲ್ಲ.

ಶರಣರು ಕಾಯಕತತ್ವವನ್ನು ಅನುಷ್ಠಾನಕ್ಕೆ ತಂದು, ಎಲ್ಲ ವೃತ್ತಿಗಳು ಸಮಾನವಾದುವೆಂದೂ, ಅವುಗಳಲ್ಲಿ ತರತಮಭಾವವನ್ನು ಕಲ್ಪಿಸುವುದು ಸರಿಯಲ್ಲವೆಂದೂ ಘೋಷಿಸಿ ಆಚರಣೆಯಿಂದ ಅರುಹಿದರು.

ಕೃಷಿಕೃತ್ಯ ಕಾಯಕವಾದಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮಸದ್‌ಭಕ್ತನ ಪಾದವ ತೋರಯ್ಯ ಎನಗೆ, ಅದೆಂತೆನೆ
ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ಶುದ್ಧ, ಆತನ ನುಡಿಯೆಲ್ಲ ಪಾವನ

ಎಂಬ ಬಸವಣ್ಣನವರ ನುಡಿ ತ್ರಿಕರಣಶುದ್ಧಿಯಿಂದ ಕಾಯಕ ಮಾಡುವ ವ್ಯಕ್ತಿಯ





ಹಿರಿಮೆಗೆ ಸಾಕ್ಷಿಯಾಗಿದೆ. ಸತ್ಯಶುದ್ಧ ಕಾಯಕದಲ್ಲಿ ನಿರತನಾದಾಗ ಪರವಸ್ತುವೇ ಮುಂದೆ ಬಂದರೂ ವಿಮುಖನಾಗದೆ ಕಾಯಕ ಮಾಡು, 'ಕಾಯಕವೇ ಕೈಲಾಸ' ಎಂದರುಹಿದರು ಶರಣರು. ಭಾರತೀಯರ ಬಡತನದ ನಿವಾರಣೆಗೆ ತ್ರಿಕರಣಪೂರ್ವಕವಾಗಿ ಮಾಡುವ ಸತ್ಯಶುದ್ಧ ಕಾಯಕವೇ ತಾರಕಮಂತ್ರ.

ಆಧುನಿಕ ಶಿಕ್ಷಣಕ್ರಮದಲ್ಲಿ ತಜ್ಞರು ಅನೇಕ ಸುಧಾರಣೆಗಳನ್ನು ಮಾಡಿದ್ದರೂ ಅದರಲ್ಲಿ ಇನ್ನೂ ಕೆಲವು ಅಂಶಗಳನ್ನು ಸಂಯೋಜಿಸಬೇಕಾಗಿದೆ. ಪ್ರಸಕ್ತ ವಿದ್ಯಾಭ್ಯಾಸ ಕ್ರಮದಲ್ಲಿ ನೈತಿಕ ಮೌಲ್ಯವನ್ನರುಹಲು ಅವಕಾಶ ಕಲ್ಪಿಸಿ, ಉದ್ಯೋಗಪ್ರಧಾನವಾದ ಶಿಕ್ಷಣವನ್ನು ರೂಪಿಸಬೇಕು. ಇದರಿಂದ ನೈತಿಕ ಮೌಲ್ಯದ ಮಾಹಿತಿಯನ್ನರಿತು ಶಿಸ್ತು, ಸಂಯಮ, ಸಚ್ಚಾರಿತ್ರ್ಯದಿಂದ ಕೂಡಿದ ವಿದ್ಯಾರ್ಥಿಗಳು ಅಭ್ಯಾಸದ ನಂತರ ಸ್ವಾವಲಂಬಿಗಳಾಗಿ ಉದ್ಯೋಗಶೀಲರಾಗಿ ಸತ್ಪ್ರಜೆಗಳಾಗಲು ಸಹಾಯವಾಗುವುದು. ಗುರುಶಿಷ್ಯ ಸಂಬಂಧವೂ ಉತ್ತಮವಾಗುವುದು. ಇಂದಿನ ನಮ್ಮ ವಿದ್ಯಾರ್ಥಿಗಳು ನಮ್ಮ ನಾಡಿನ ಸಂಸ್ಕೃತಿ ಮತ್ತು ಮಹತಿಯನ್ನು ಅರಿಯಲು ಜೊತೆಗೆ ತಮ್ಮ ಶ್ರೇಯಸ್ಸನ್ನು ಸಾಧಿಸಿಕೊಳ್ಳಲು ದಯಾಮಯರಾದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಕರುಣಿಸಲಿ.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಪವಿತ್ರ ನಾಮಾಂಕಿತದಲ್ಲಿ ಸಂಸ್ಥಾಪಿಸಲ್ಪಟ್ಟಿರುವ, ವಿದ್ಯಾಕ್ಷೇತ್ರಗಳು, ಪ್ರಸಾದನಿಲಯಗಳು, ಧಾರ್ಮಿಕ ಕಾರ್ಯಗಳು ಇವುಗಳನ್ನು ನೀವು ಬಿನ್ನವತ್ತಳೆಯಲ್ಲಿ ಶ್ರದ್ಧಾಭಕ್ತಿಗಳಿಂದ ಪ್ರಶಂಸಿಸಿರುವಿರಿ. ಈ ಸಂಸ್ಥೆಗಳ ಮೂಲಕ ಮಹಾಜನತೆಗೆ ಅಭ್ಯುದಯವಾಗಲು ಆದಿ ಶ್ರೀ ಗುರುವರ್ಯರ ಕೃಪೆಯೇ ಕಾರಣ 'ತೇನ ವಿನಾ ತೃಣಮಪಿ ನ ಚಲತಿ'. ಶ್ರೀ ಗುರು ಕೃಪೆಯಿಂದ ನಿಮಿತ್ತ ಮಾತ್ರವಾಗಿ ಸೇವೆ ಮಾಡುವ ಸದವಕಾಶ ಲಭಿಸಿದುದಕ್ಕೆ ಸಂತಸ ಪಡುತ್ತೇವೆ. ಈ ಸೇವಾಕಾರ್ಯಗಳಿಗೆ ಅಭಿಮಾನಿಗಳಾದ ಮಹಾಜನತೆ ಮತ್ತು ಸರ್ಕಾರ ನೀಡಿರುವ ಸಹಾಯ ಸಹಕಾರಗಳನ್ನು ವಿಶ್ವಾಸದಿಂದ ಸ್ಮರಿಸುತ್ತೇವೆ. ಆದಿ ಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಸರ್ವರಿಗೂ ಸಂತೃಪ್ತಿ, ಶಾಂತಿ ಮತ್ತು ಆನಂದವನ್ನು ಅನುಗ್ರಹಿಸಲೆಂದು ಹಾರೈಸಿ ವಿರಮಿಸುತ್ತೇವೆ.

'ಲೋಕಾಸ್ಸಮಸ್ತಾಸ್ಸುಖಿನೋ ಭವಂತು'

□



## ಆಶೀರ್ವಚನ - ೩



ಅವಾಚ್ಯಾತ್ಮಸ್ವರೂಪಾಯ ಶಿವಭಾವ ಪ್ರದಾಯಿನೇ|
ನಮಸ್ಸದ್ಗುರುನಾಥಾಯ ಷಟ್‌ಸ್ಥಲ ಬ್ರಹ್ಮಮೂರ್ತಯೇ||

ನಮ್ಮೆಲ್ಲರ ಕಾರ್ಯಕ್ಷೇತ್ರಕ್ಕೆ ಕಾರಣೀಭೂತರಾಗಿದ್ದು, ಮಾನವಕೋಟಿಗೆ ತಮ್ಮ ತಪಃಶಕ್ತಿಯಿಂದ ಮಂಗಳವನ್ನುಂಟುಮಾಡುತ್ತಿರುವ ನಮ್ಮ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರನ್ನು ಸಂಸ್ಮರಿಸುತ್ತೇವೆ. ಅವರ ಕೃಪಾಶೀರ್ವಾದದ ಫಲವೇ ನಾವಿಂದು ಇಲ್ಲಿ ಸಮಾವೇಶಗೊಂಡಿರುವುದು ಮತ್ತು ಪೂಜ್ಯಪಾದರ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ನಾಮಸ್ಮರಣೆ ಮಾಡುತ್ತಿರುವುದು. ಅವರ ನಾಮಸ್ಮರಣೆ ನಮ್ಮೆಲ್ಲರ ಬದುಕಿಗೆ ತಾರಕಮಂತ್ರವಾಗಲೆಂಬುದೇ ನಮ್ಮ ಬಯಕೆ.

ಜಗತ್ತಿನ ಇತಿಹಾಸವನ್ನು ಅವಲೋಕಿಸಿದಾಗ ಅನೇಕ ಮಹಾನುಭಾವರು ಉದಯಿಸಿ ಧರ್ಮಜಾಗೃತಿಯನ್ನುಂಟುಮಾಡಿ ಮಾನವನ ಸರ್ವತೋಮುಖ ಅಭ್ಯುದಯಕ್ಕೆ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1021 ನೆಯ ಜಯಂತಿ ಮಹೋತ್ಸವದಲ್ಲಿ ದಯಪಾಲಿಸಿದ ಶುಭಸಂದೇಶ (1981)





ಕಾರಣೀಭೂತರಾಗಿರುವುದು ತಿಳಿದುಬರುತ್ತದೆ. ಆ ಮಹಾನುಭಾವರು ವಿವಿಧ ಮಾರ್ಗಗಳನ್ನು ಲೋಕಕ್ಕೆ ತೋರಿದ್ದರೂ ಮೂಲ ಗುರಿ ಒಂದೇ. 'ದೇವನೊಬ್ಬ ನಾಮ ಹಲವು' ಎಂಬಂತೆ ಯಾವ ಭಾಷೆಯಲ್ಲಿ, ಯಾವ ಹೆಸರಿನಲ್ಲಿ ಕರೆದರೂ ದೇವರು ಒಬ್ಬನೇ. ಪರಮಾತ್ಮನಿಗೆ ಬೇಕಾಗಿರುವುದು ಭಾಷೆಯಲ್ಲ, ಹೆಸರಲ್ಲ, ಬೇಕಾಗಿರುವುದು ಹೃದಯ ಭಾಷೆ, ಅದುವೇ ಭಕ್ತಿ. ಅಂತಹ ಭಕ್ತಿಭಾವವನ್ನು ಬೆಳೆಸಿಕೊಂಡು ತನ್ಮೂಲಕ ಉತ್ತಮವಾಗಿ ಬಾಳುವುದಕ್ಕೆ ಉಪದೇಶಾಮೃತವನ್ನು ಮಹಾನುಭಾವರು ಲೋಕಕ್ಕೆ ಬಿಟ್ಟು ಹೋಗಿದ್ದಾರೆ. ಆ ಸಾಲಿನಲ್ಲಿಯೇ ಬಂದ ನಮ್ಮ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಜಯಂತ್ಯುತ್ಸವವನ್ನು ಉತ್ಸವ ಸಮಿತಿಯವರು, ಭಕ್ತ ಜನತೆ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳು ಪ್ರತಿವರ್ಷವೂ ಶ್ರದ್ಧಾಭಕ್ತಿಗಳಿಂದ ನಡೆಸಿಕೊಂಡು ಬರುತ್ತಿರುವುದು ನಮಗೆ ತುಂಬ ಸಂತೋಷವನ್ನುಂಟುಮಾಡಿದೆ. ನೀವೆಲ್ಲರೂ ಶ್ರೀ ಶಿವರಾತ್ರೀಶ್ವರರ ಕೃಪೆಗೆ ಪಾತ್ರರಾದವರೆಂದೇ ನಮ್ಮ ನಂಬಿಕೆ.

ಧರ್ಮ ಮಾನವನನ್ನು ಇಹದಿಂದ ಪರಕ್ಕೆ ಕರೆದುಕೊಂಡು ಹೋಗುವ ನಿಚ್ಚಣಿಕೆ. ನಮ್ಮ ಎಲ್ಲ ಕಾರ್ಯಕಲಾಪಗಳೂ ಧರ್ಮಯುಕ್ತವಾದಾಗಲೇ ನಿಜವಾದ ಶ್ರೇಯಸ್ಸು ಪಡೆಯಲು ಸಾಧ್ಯ. ಸಕಲ ಜೀವಾವಳಿಗೆ ಲೇಸನೇ ಬಯಸಬೇಕಾದ ಮಾನವ ಧರ್ಮ ಬುದ್ಧಿಯುಳ್ಳವನಾಗಿ ದಯೆಯುಳ್ಳವನಾಗಿರಬೇಕು. ಬಸವಣ್ಣನವರು ಹೇಳುವಂತೆ 'ದಯವಿಲ್ಲದ ಧರ್ಮ ಅದಾವುದಯ್ಯಾ, ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ, ದಯವೇ ಧರ್ಮದ ಮೂಲವಯ್ಯಾ' ಆಗಬೇಕು. ಪತಿತರನ್ನು, ದೀನ-ದಲಿತರನ್ನು ಮೇಲೆತ್ತಬೇಕೆಂಬ ಕಳಕಳಿಯೇ ಧರ್ಮದ ಸೋಪಾನ. ಇದರ ಆಧಾರದ ಮೇಲೆ ಎಲ್ಲರನ್ನೂ ಸಮಾನರೆಂದು ಕಾಣುವ ಮನೋಭಾವನೆ ಜನರಲ್ಲಿ ಬೆಳೆಯಬೇಕಾಗಿದೆ. ಪರಮಾತ್ಮನ ದೃಷ್ಟಿಯಲ್ಲಿ ನಾವೆಲ್ಲಾ ಒಂದೇ ಸಂತಾನ. ಪರಸ್ಪರ ವೈಷಮ್ಯ, ದ್ವೇಷ ಭಾವನೆಗಳನ್ನು ಬಿಟ್ಟು ಮಾನವ ಧರ್ಮವನ್ನು ಅರ್ಥಮಾಡಿಕೊಂಡು ಸನ್ನಡತೆಯಲ್ಲಿ ನಡೆಯಬೇಕು. ಆಗ ಮಾತ್ರ ವ್ಯಕ್ತಿಗೆ, ಸಮಾಜಕ್ಕೆ ದೇಶಕ್ಕೆ ಏಕೆ ಪ್ರಪಂಚಕ್ಕೆ ಕಲ್ಯಾಣವಾಗುವುದರಲ್ಲಿ ಸಂಶಯವಿಲ್ಲ. ಇಹ-ಪರಗಳೆರಡೂ ಮಾನವನ ಬದುಕಿನ ನಾಣ್ಯದ ಎರಡು ಮುಖಗಳಿದ್ದಂತೆ. ಇಹವನ್ನು ತ್ಯಾಜ್ಯ ಮಾಡಬೇಕಾಗಿಲ್ಲ. ಇಲ್ಲಿ ಸಲ್ಲುವವನು ಮಾತ್ರ ಅಲ್ಲಿ ಸಲ್ಲುತ್ತಾನೆ. ಇಲ್ಲಿ ಮತ್ತು ಅಲ್ಲಿ ಸಲ್ಲುವಂತಹ ಸಮೃದ್ಧಿಯನ್ನು, ಶಕ್ತಿಯನ್ನು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರು ನಿಮ್ಮೆಲ್ಲರಿಗೂ ಕರುಣಿಸಲೆಂದು ಹಾರೈಸುತ್ತೇವೆ.

ಇಂದು ನಮ್ಮ ದೇಶದಲ್ಲಿ ಅನೇಕ ಜಟಿಲ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಜನಸಂಖ್ಯೆ ಸಮಸ್ಯೆ, ನಿರುದ್ಯೋಗ ಸಮಸ್ಯೆ, ಅನ್ನದ ಸಮಸ್ಯೆ ಮುಂತಾದ







ಸಮಸ್ಯೆಗಳಿದ್ದರೂ, ಸಂಪದ್ಭರಿತವಾದ ಹಾಗೂ ಭೌತಿಕ ಜ್ಞಾನಕ್ಕೆ ಮೀಸಲಾಗಿರುವ ಪಾಶ್ಚಾತ್ಯ ದೇಶಗಳು ಶಾಂತಿಯಿಲ್ಲದೆ ತತ್ತರಿಸುತ್ತ ನಮ್ಮ ಭಾರತದ ಕಡೆಗೇ ಕೈತೋರಿಸುತ್ತಿವೆ. ಇದಕ್ಕೆ ಭಾರತ ಹಿಂದಿನಿಂದಲೂ ಬೆಳೆಸಿಕೊಂಡು ಬಂದಿರುವ ಧಾರ್ಮಿಕ ಶಕ್ತಿ ಹಾಗೂ ದೈವತ್ವದಲ್ಲಿರುವ ನಂಬಿಕೆಯೇ ಕಾರಣ. ಇದನ್ನು ಉಳಿಸುವ-ಬೆಳೆಸುವ ಮಹತ್ಕಾರ್ಯ ತಮ್ಮೆಲ್ಲರನ್ನೂ ಅವಲಂಬಿಸಿದೆ.

'ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವು' ಎಂಬ ಅಣ್ಣನವರ ನುಡಿಯಂತೆ ಈ ವರ್ಷವೂ ಅನೇಕ ಮಠಾಧಿಪತಿಗಳು ಸಮಾರಂಭಕ್ಕೆ ದಯಮಾಡಿಸಿದ್ದು ತುಂಬ ಸಂತೋಷವನ್ನುಂಟುಮಾಡಿದೆ. ಒಂದು ಮಠದ ಪೀಠಾಧಿಪತಿಯವರು ಇನ್ನೊಂದು ಮಠಕ್ಕೆ ದಯಮಾಡಿಸಿದಾಗ ಪ್ರೀತ್ಯಾದರಗಳಿಂದ ಸನ್ಮಾನಿಸಿ ಆಹ್ವಾನಿಸುವುದು ಸಮಾಜದ ಐಕ್ಯತೆಯ ದೃಷ್ಟಿಯಿಂದ ಮಹತ್ವವಾದುದು. ಇದನ್ನು ನಾವು ಮಾಡಿದ್ದೇವೆಂಬ ನಂಬಿಕೆ ನಮಗಿದೆ. ಸಮಾರಂಭಕ್ಕೆ ದಯಮಾಡಿಸಿದ್ದ ಎಲ್ಲ ಪೀಠಾಧಿಪತಿಗಳನ್ನು ನಾವು ಇಲ್ಲಿ ಸ್ಮರಿಸುತ್ತೇವೆ.

ಇಂದಿನ ವಿದ್ಯಾರ್ಥಿಗಳ ಬಗ್ಗೆ ನಮಗಿನ್ನೂ ಪೂರ್ಣ ಆಶಾಭಾವನೆ ಮೂಡಿಬಂದಿಲ್ಲ. ಇದಕ್ಕೆ ಶಿಕ್ಷಣಕ್ರಮದಲ್ಲಿರುವ ನ್ಯೂನತೆಯೇ ಕಾರಣವೆಂದು ನಮ್ಮ ಭಾವನೆ. ನೈತಿಕ ತಳಹದಿಯ ಮೇಲೆ ಶಿಕ್ಷಣಕ್ರಮ ರೂಪಿತವಾದರೆ ಈ ಎಲ್ಲ ಅರೆ-ಕೊರೆಗಳೂ ತಪ್ಪುವುದರಲ್ಲಿ ಸಂಶಯವಿಲ್ಲ. ವಿದ್ಯಾರ್ಥಿಗಳು ಪದವಿಗಳನ್ನು ಪಡೆದ ಮೇಲೆ ನೌಕರಿಗೇ ಹೋಗಬೇಕೆಂಬ ಗೀಳನ್ನು ಬಿಟ್ಟು ಯಾವುದಾದರೂ ಕಾರ್ಯವನ್ನು ಹಿಡಿದು ಅದನ್ನೇ ಆಧುನಿಕ ದೃಷ್ಟಿಯಿಂದ ನವೀಕರಿಸಿದರೆ ಜೀವನವನ್ನು ಸುಸೂತ್ರವಾಗಿ ನಡೆಸಬಹುದು. ಕಾಯಕ ಯಾವುದಾದರೇನು? ಮಾಡುವ ಮನಸ್ಸಿರಬೇಕು. ಭಾವೀ ಭಾರತದ ಪ್ರಜೆಗಳಾಗಿರುವ ನಿಮ್ಮ ಮೇಲೆ ನಮಗೆ ಹೆಚ್ಚು ಆಸಕ್ತಿ. ನಿಮ್ಮ ಬಾಳು ಹಸನಾಗಲೆಂದು ನಾವು ಶಿವರಾತ್ರೀಶ್ವರರನ್ನು ಪ್ರಾರ್ಥಿಸುತ್ತೇವೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ದಿವ್ಯ ನಾಮಾಂಕಿತದಲ್ಲಿ ಸಂಸ್ಥಾಪಿಸಲ್ಪಟ್ಟಿರುವ ಪ್ರಸಾದನಿಲಯಗಳು, ಶಾಲಾ ಕಾಲೇಜುಗಳು, ಧಾರ್ಮಿಕ ಕಾರ್ಯಗಳು ಮುಂತಾದುವನ್ನು ನೀವು ಬಿನ್ನವತ್ತಳೆಯಲ್ಲಿ ಭಕ್ತಿಪೂರ್ವಕವಾಗಿ ಸ್ಮರಿಸಿರುವಿರಿ. 'ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ' ಎನ್ನುವಂತೆ ನಮ್ಮ ಪಾಲಿನ ಕರ್ತವ್ಯವನ್ನು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಆಶೀರ್ವಾದದಿಂದ ಮಾಡಿದ್ದೇವಷ್ಟೆ. ನಮ್ಮ ಈ ಅಲ್ಪ ಕಾರ್ಯಕ್ಕೆ ನೆರವಾದ ಘನ ಸರ್ಕಾರ ಮತ್ತು ಭಕ್ತಜನತೆ ಅಭಿನಂದನಾರ್ಹರು. ಎಲ್ಲಕ್ಕು ಮಿಗಿಲಾಗಿ ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವವರೆಲ್ಲರೂ ನಮ್ಮ ಕಾರ್ಯಕ್ಷೇತ್ರದಲ್ಲಿ ಸಹಕರಿಸುತ್ತಿರುವುದು ನಮಗೆ ಮಹದಾನಂದವನ್ನುಂಟುಮಾಡಿದೆ. ತಮ್ಮ ಬಿನ್ನವತ್ತಳೆಯಲ್ಲಿ ಜಗದ್ಗುರು ಶ್ರೀ



## ಪ್ರಸಾದ

ಶಿವರಾತ್ರೀಶ್ವರ ವಿದ್ಯಾಪೀಠದ ಆಶ್ರಯದಲ್ಲಿ ಈ ವರ್ಷ ಪ್ರಾರಂಭಿಸಿದ ಮೂರು ಪ್ರೌಢಶಾಲೆಗಳು, ಮಹಿಳಾ ಪಾಲಿಟೆಕ್ನಿಕ್ ಹಾಗೂ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉನ್ನತ ಶಿಕ್ಷಣದ ವ್ಯವಸ್ಥೆ ಮಾಡಿರುವುದನ್ನು ಅಭಿಮಾನದಿಂದ ಪ್ರಸ್ತಾಪಿಸಿರುವಿರಿ. ಭಗವತ್ಪಾದರ ಕೃಪೆಯಿಂದ ನಮ್ಮ ವಿದ್ಯಾಸಂಸ್ಥೆಗಳು ಅಂತಾರಾಷ್ಟ್ರೀಯ ವಿದ್ಯಾಕೇಂದ್ರವಾಗಬೇಕೆಂಬುದು ನಮ್ಮ ಅಭಿಲಾಷೆ. ಈ ದಿಸೆಯಲ್ಲಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಚ್ಚ ಶಿಕ್ಷಣಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲು ಒಂದು ಲಕ್ಷ ರೂಪಾಯಿಗಳ ದತ್ತಿಯನ್ನು ಈ ವರ್ಷ ನೀಡಲು ನಮಗೆ ಸಂತೋಷವೆನಿಸಿದೆ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ನಿಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ.

|| ಸರ್ವೇ ಜನಾಃ ಸುಖಿನೋ ಭವಂತು ||

□

ಜಂಗಮವ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಭಕ್ತಂಗೆ.
ಆ ಭಕ್ತನ ಕೂಡಿಕೊಂಡು
ಲಿಂಗಾರ್ಚನೆಯ ಮಾಡುವುದು ಲೇಸಯ್ಯಾ ಜಂಗಮಕ್ಕೆ.
ಆ ಜಂಗಮದ ಕರ್ತವ್ಯವೇ ಆ ಭಕ್ತಂಗೆ ದಾಸೋಹ !
ಆ ಭಕ್ತನ ಕಿಂಕಲವೆ ಆ ಜಂಗಮಕ್ಕೆ ದಾಸೋಹ !
ಆ ಭಕ್ತನೊಳಗೆ ಜಂಗಮವಡಗಿ,
ಆ ಜಂಗಮದೊಳಗೆ ಭಕ್ತನಡಗಿ –
ಇದನೇನೆಂದು ಹವಣಿಸುವೆನಯ್ಯಾ, ಎರಡೊಂದಾದ ಘನವ ?
ಇದನೇನೆಂದುಪಮಿಸುವೆನಯ್ಯಾ, ತೆಱಹಿಲ್ಲದ ಘನವ ?
ಈ ಎರಡಕ್ಕೆ ಭವವಿಲ್ಲೆಂದು ಕೂಡಲಸಂಗಯ್ಯಾ,
ನಿಮ್ಮ ಶ್ರುತಿಗಳು ಹೇಳಿದುವಾಗಿ
ನಿಮ್ಮ ಕರುಣವೆನಗಾಯಿತ್ತು.

- **ಬಸವಣ್ಣ**



# ಆಶೀರ್ವಚನ - ೪



ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ |
ನಮಸ್ಸದ್ಗುರುನಾಥಾಯ ಪಟ್ಟಸ್ಥಲಬ್ರಹ್ಮಮೂರ್ತಯೇ ||

ನಮ್ಮೆಲ್ಲ ಕಾರ್ಯಕ್ಷೇತ್ರಕ್ಕೆ ಕಾರಣೀಭೂತರಾಗಿದ್ದು ತಮ್ಮ ತಪಃಪ್ರಭಾವದಿಂದ ಇಡೀ ಜಗತ್ತಿಗೇ ಮಂಗಲವನ್ನುಂಟುಮಾಡುತ್ತಿರುವ ನಮ್ಮ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರನ್ನು ನಾವು ಮನಸಾರ ಸಂಸ್ಮರಿಸುತ್ತೇವೆ. ಆ ಪೂಜ್ಯರ ಕೃಪಾಶೀರ್ವಾದದ ಫಲವೇ ನಾವಿಂದು ಇಲ್ಲಿ ಸಮಾವೇಶಗೊಂಡು ಪೂಜ್ಯಪಾದರ ಜಯಂತಿ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತ ಸ್ಮರಣೆ ಮಾಡುತ್ತಿರುವುದು. ಅವರ ನಾಮಸ್ಮರಣೆ ನಮ್ಮೆಲ್ಲರ ಬದುಕಿನ ತಾರಕ ಮಂತ್ರವಾಗಲೆಂಬುದೇ ನಮ್ಮ ಆಸೆ.

---

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1022 ನೆಯ ಜಯಂತಿ ಮಹೋತ್ಸವದಲ್ಲಿ ದಯಪಾಲಿಸಿದ ಶುಭಸಂದೇಶ (1982)





ಪ್ರಪಂಚದ ಚರಿತ್ರೆಯ ಪುಟಗಳನ್ನು ತಿರುವಿಹಾಕಿದಾಗ ಅನೇಕ ಪೂಜ್ಯರು ಅವತರಿಸಿ ಮಾನವರ ಅಸುರೀಪ್ರವೃತ್ತಿಯನ್ನು ತೊಲಗಿಸಿ ಧರ್ಮಜಾಗೃತಿಯನ್ನುಂಟುಮಾಡಿ ಜಗತ್ತಿನ ಸರ್ವತೋಮುಖ ಅಭ್ಯುದಯ ಹಾಗೂ ಶ್ರೇಯಸ್ಸಿಗೆ ಕಾರಣಕರ್ತರಾಗಿದ್ದಾರೆ. ಅನೇಕ ಮಹಾನುಭಾವರ ಮಾರ್ಗಗಳು ಬೇರೆಬೇರೆಯಾಗಿದ್ದರೂ ಗುರಿ ಒಂದೇ. ಅಂದರೆ ಪರಮಾತ್ಮನ ಸಾಕ್ಷಾತ್ಕಾರ. ಆ ಪರಮಾತ್ಮನನ್ನು ಪರಬ್ರಹ್ಮನೆಂದೂ, ಶಿವನೆಂದೂ, ವಿಷ್ಣುವೆಂದೂ, ಶಕ್ತಿ ಎಂದೂ ಬೇರೆ ಬೇರೆ ಹೆಸರಿನಿಂದ ಬೇರೆ ಬೇರೆ ಧರ್ಮಗಳು ಸಂಬೋಧಿಸಿದ್ದರೂ ಸಹ ಆ ಪರಾತ್ಪರ ಸತ್ಯವೊಂದೇ. 'ಏಕಂ ಸತ್ ವಿಪ್ರಾ ಬಹುಧಾ ವದಂತಿ' ಎಂಬುದಾಗಿ ಈ ಆಶಯವನ್ನು ವೇದ ಉದ್ಘೋಷಿಸಿದೆ. 'ದೇವನೊಬ್ಬ ನಾಮ ಹಲವು' ಎಂಬುದಾಗಿ ಬಸವಣ್ಣನವರು ಬಹಳ ಅರ್ಥಗರ್ಭಿತವಾಗಿ ಸಾಮಾನ್ಯ ಜನರಿಗೂ ತಿಳಿಯುವಂತೆ ಅರುಹಿದ್ದಾರೆ. ಧರ್ಮದ ಬಗೆಗೆ ಮೇಲು - ಕೀಳುಗಳನ್ನು ಕಲ್ಪಿಸಿ, ಜಗತ್ತಿನಲ್ಲಿ ಮಾನವ-ಮಾನವರನ್ನು ಸಂಹರಿಸುತ್ತಿರುವ ಮತ್ತು ಶೋಷಿಸುತ್ತಿರುವ ನೂರಾರು ನಿದರ್ಶನಗಳನ್ನು ನಿತ್ಯವೂ ಕೇಳುತ್ತಿದ್ದೇವೆ. ಧರ್ಮವು ಮಾನವರಲ್ಲಿ ಸ್ನೇಹವನ್ನೂ, ಸೌಹಾರ್ದವನ್ನೂ ಮೂಡಿಸಿ ಸರ್ವರ ಉದ್ಧಾರಕ್ಕಾಗಿ ಮೀಸಲಾದ ಜೀವನ ದರ್ಶನ ಎಂಬುದನ್ನು ಜನತೆ ಮರೆತಂತೆ ಕಾಣುತ್ತದೆ. ಧರ್ಮದ ಬಲದಿಂದ ಸುಖಮಯವಾಗಬೇಕಾದ ಜೀವನ ದಿನದಿನಕ್ಕೆ ಧಾರುಣ ಸ್ಥಿತಿಯನ್ನು ಮುಟ್ಟುತ್ತಿದೆ. ಇದರಿಂದ ಜೀವನದಲ್ಲಿ ಅಶಾಂತಿ ತಲೆದೋರಿದೆ. ಮಾನವರು ಧರ್ಮದ ಹೆಸರಿನಲ್ಲಿ ವೈಷಮ್ಯವನ್ನು ಬೆಳೆಸುವುದನ್ನು ಬಿಟ್ಟು ಪರಸ್ಪರ ಸ್ನೇಹ ಸೌಹಾರ್ದಗಳನ್ನು ಬೆಳೆಸಿ ಜೀವನವು ಸುಖಮಯವಾಗಿರುವಂತೆ ಮಾಡಲು ಶ್ರಮಿಸಬೇಕೆಂದೂ ಈ ಸಮಯದಲ್ಲಿ ಸೂಚಿಸುತ್ತೇವೆ.

ಇಂದಿನ ಧರ್ಮದ ಅವನತಿಗೆ ಜೀವನದಲ್ಲಿ ಬೆಳೆದುಬಂದಿರುವ ಕಾಮಕ್ರೋಧಾದಿ ಅರಿಷಡ್ವರ್ಗಗಳೇ ಕಾರಣ. ಭಾರತೀಯರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಜೀವನದ ಗುರಿಯಾಗಿ ಅವಲಂಬಿಸಿದವರು. ಆದರೆ ಧರ್ಮದ ನೆಲೆಗಟ್ಟಿನ ಮೇಲೆಯೇ ಉಳಿದ ಮೂರು ಪುರುಷಾರ್ಥಗಳನ್ನು ಸಾಧಿಸಬೇಕೆಂದೂ ಪ್ರತಿಯೊಂದೂ ಧರ್ಮಸಮ್ಮತವಾಗಿರಬೇಕೆಂದೂ ಮಹಾನುಭಾವರು ಪ್ರತಿಪಾದಿಸಿದ್ದಾರೆ.

ಜಗತ್ತು ಸತ್ಯ, ಶಿವ, ಸುಂದರ, ಎನ್ನಿಸಬೇಕಾದರೆ - ನಾವೆಲ್ಲ ಧರ್ಮಪರಾಯಣರಾಗ ಬೇಕು. ಸತ್ಯನಿಷ್ಠರಾಗಿ, ಅಹಿಂಸಾವಲಂಬಿಗಳಾಗಬೇಕು. ದಯಾನಿಧಿಗಳಾಗಬೇಕು. "ಪರೋಪಕಾರಾರ್ಥಮಿದಂ ಶರೀರಮ್" ಎನ್ನಿಸಬೇಕು. ತನ್ನಂತೆ ಪರರ ಬಗೆಯಬೇಕು. ಸಕಲ ಜೀವಾವಳಿಗೆ ಲೇಸನೇ ಬಯಸುವವರಾಗಬೇಕು. ಇದು ನಮ್ಮ ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ಬರಬೇಕು. ಭಾರತ ಜಗತ್ತನ್ನೇ ಎಚ್ಚರಿಸಬಲ್ಲ ಭವ್ಯ ಪರಂಪರೆಯನ್ನು



ಪ್ರಸಾದ



ಪಡೆದ ರಾಷ್ಟ್ರ. ಈ ದೇಶದ ವೈಭವಕ್ಕೆ ಮನಸೋತು ಅನೇಕ ರಾಷ್ಟ್ರಗಳು ನಮ್ಮ ಭವ್ಯ ಸಂಪತ್ತನ್ನೆಲ್ಲಾ ಸೂರೆಗೊಂಡವು. ಆದರೂ ನಮ್ಮ ಪರಂಪರೆಯನ್ನು ರಾಷ್ಟ್ರ ಉಳಿಸಿಕೊಂಡು ಬಂದಿದೆ. ಇಂದು ನಮ್ಮ ರಾಷ್ಟ್ರದ ಧಾರ್ಮಿಕ ಹೃದಯವನ್ನೇ ಕಿತ್ತು ಧರ್ಮವನ್ನು ದುರ್ಬಲಗೊಳಿಸುವ ದುಷ್ಟ ಪ್ರಯತ್ನ ನಡೆಯುತ್ತಿದೆ. ಜನತೆ ಎಚ್ಚೆತ್ತು ರಾಷ್ಟ್ರಾಭಿಮಾನದ ಸನಾತನ ಧರ್ಮವನ್ನು ಸ್ಥಿರಗೊಳಿಸಲು ಶ್ರಮಿಸಬೇಕೆಂದು ಸೂಚಿಸಬಯಸುತ್ತೇವೆ.

ಇಂತಹ ಸಂದರ್ಭದಲ್ಲಿ ಮಹಾನುಭಾವರ ಸ್ಮರಣೆಯ ಮೂಲಕ ಜನತೆಯನ್ನು ಎಚ್ಚರಗೊಳಿಸಬೇಕಾಗಿದೆ. ಜನತೆ ತನ್ನತನವನ್ನು ಅರಿತು ತಮ್ಮ ಮುಂದಿನ ಪೀಳಿಗೆಗೆ ಸತ್‌ಸಂಪ್ರದಾಯವನ್ನು ಸ್ಥಿರಗೊಳಿಸಬೇಕಾಗಿದೆ. ಆದಿ ಜಗದ್ಗುರುಗಳವರ ಜಯಂತಿ ಉತ್ಸವವು ಈ ದಿಶೆಯಲ್ಲಿ ನೆರವಾಗುತ್ತಿದೆ. ನಮ್ಮ ಭಕ್ತಮಂಡಲಿಯವರು, ವಿದ್ಯಾರ್ಥಿ ಬಳಗದವರು ಈ ಉತ್ಸವವನ್ನು ಲೋಕಕಲ್ಯಾಣಕಾರ್ಯ ಪ್ರಬೋಧನೆಯ ಮಾಧ್ಯಮವಾಗಿ ರೂಪಿಸಿಕೊಂಡು ಅತ್ಯಂತ ಭಕ್ತಿಭಾವದಿಂದ ನೆರವೇರಿಸಿಕೊಂಡು ಬರುತ್ತಿರುವುದು ನಮಗೆ ಹೆಚ್ಚಿನ ಸಂತಸದ ಸಂಗತಿಯಾಗಿದೆ.

ಈ ಪುಣ್ಯ ಸಂದರ್ಭದಲ್ಲಿ ಉತ್ಸವ ಸಮಿತಿಯವರು ನಮ್ಮ ಸೇವೆಯ ಬಗ್ಗೆ ಅಭಿಮಾನದಿಂದ ಬಿನ್ನವತ್ತಳೆಯಲ್ಲಿ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ. ಇದು ನಮ್ಮ ಕರ್ತವ್ಯವೆಂದೂ ಪರಮಾತ್ಮನ ಸೇವೆಯೆಂದೂ ಭಾವಿಸಿ ಆದಿಜಗದ್ಗುರುಗಳವರು ಕೃಪೆ ಇಟ್ಟು ನಮ್ಮನ್ನು ಕೈಹಿಡಿದು ನಡೆಸಿದಂತೆ ನಡೆದಿದ್ದೇವೆ. ನಮ್ಮ ಕಾರ್ಯದಲ್ಲಿ ಭಕ್ತಮಂಡಳಿಯವರು, ಅಭಿಮಾನಿಗಳು, ಸರ್ಕಾರದವರು ಅನೇಕ ರೀತಿಯಿಂದ ನೆರವಾಗಿರುವುದನ್ನು ಸಂತೋಷದಿಂದ ಸಂಸ್ಮರಿಸುತ್ತೇವೆ. ಈ ಸಂದರ್ಭದಲ್ಲಿ ನಾವು ಸಂಕಲ್ಪಿಸಿದ ಅಖಿಲ ಭಾರತ ವ್ಯಾಪ್ತಿಯ ಶರಣ ಸಾಹಿತ್ಯ ಪರಿಷತ್ತು ರೂಪುಗೊಳ್ಳುತ್ತಿರುವುದನ್ನು ಉಲ್ಲೇಖಿಸಲಾಗಿದೆ.

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ, ನಿಮ್ಮ
ಶರಣರ ಸೂಳ್ನುಡಿಯ ಒಂದರಗಳಿಗೆ
ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥ

ಎಂದು ಶರಣ ದಾಸಿಮಾರ್ಯರು ಹೇಳಿದ್ದಾರೆ. ಶಿವಶರಣರ ನುಡಿಗಡಣ ಜನಜೀವನದ ಪಾವನತೆಗೆ ಕಾರಣವಾಗಲೆಂದು ಈ ಸಂಸ್ಥೆಯನ್ನು ಶ್ರೀಗುರುವಿನ ಪ್ರೇರಣೆಯಂತೆ ಸಂಸ್ಥಾಪಿಸಲು ಪ್ರಯತ್ನಿಸಲಾಗಿದೆ. ಜಗತ್ತಿಗೆ ಕಲ್ಯಾಣಪ್ರದವಾದ ಈ ಸಂಸ್ಥೆಯನ್ನು ಭಕ್ತಾಭಿಮಾನಿಗಳು ಬೆಳೆಸಿ - ಪೋಷಿಸಿಕೊಂಡು ಬರಬೇಕೆಂದು ಆಶಿಸುತ್ತೇವೆ.



## ಪ್ರಸಾದ

ಈ ಸಂದರ್ಭದಲ್ಲಿ ನಮ್ಮ ನಾಡ ಜನತೆಗೂ ವಿದ್ಯಾರ್ಥಿ ವೃಂದಕ್ಕೂ ಶ್ರೇಯಸ್ಸನ್ನು ಹಾರೈಸುವುದಲ್ಲದೆ, ದೇಶದಲ್ಲಿ ಸುಖ, ಶಾಂತಿಗಳು ನೆಲಸುವಂತೆ ಶ್ರೀಗುರುಗಳನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ. ನಮ್ಮ ಭಕ್ತ ವೃಂದದವರು ಧರ್ಮ ಸಂರಕ್ಷಣೆಗೆ, ರಾಷ್ಟ್ರ ಕಲ್ಯಾಣಕ್ಕೆ ತನು ಮನ ಧನಗಳನ್ನು ಅರ್ಪಿಸಿ ಶ್ರಮಿಸಿ ಧನ್ಯರಾಗಲೆಂದು ಹಾರೈಸುತ್ತೇವೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ನಮ್ಮೆಲ್ಲರಿಗೂ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

- ಶಿವಂ ಭೂಯಾತ್ -

□

ಭಕ್ತನೆಂತೆಂಬೆನಯ್ಯಾ
ಭವಿಯ ಸಂಗ ಬಿಡದನ್ನಕ್ಕ ?
ಮಾಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀ ಪರರರ್ಥದಾಸೆ ಬಿಡದನ್ನಕ್ಕ ?
ಪ್ರಸಾದಿಯೆಂತೆಂಬೆನಯ್ಯಾ
ಆಧಿವ್ಯಾಧಿ ನಷ್ಟವಾಗದನ್ನಕ್ಕ ?
ಪ್ರಾಣಲಿಂಗಿಯೆಂತೆಂಬೆನಯ್ಯಾ
ಪ್ರಾಣ ಸ್ವಸ್ಥಿರವಾಗದನ್ನಕ್ಕ ?
ಶರಣನೆಂತೆಂಬೆನಯ್ಯಾ
ಪಂಚೇಂದ್ರಿಯ ನಾಶವಾಗದನ್ನಕ್ಕ ?
ಐಕ್ಯನೆಂತೆಂಬೆನಯ್ಯಾ
ಜನನಮರಣವಿರಹಿತವಾಗದನ್ನಕ್ಕ ?
ಇಂತಪ್ಪ ಭಾಷೆ ವ್ರತ ವೇಷಂಗಳ ನಾನರಿಯೆನಯ್ಯಾ,
ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯಾ,
ನಿಮ್ಮ ಶರಣರ ತೊತ್ತು – ಭೃತ್ಯಾಚಾರವ ಮಾಡುವೆ,
ಕೂಡಲಸಂಗಮದೇವಾ.

- ಬಸವಣ್ಣ



## ಆಶೀರ್ವಚನ - ೫



ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ |
ನಮಸ್ಸದ್ಗುರುನಾಥಾಯ ಷಟ್ಸ್ಥಲಬ್ರಹ್ಮಮೂರ್ತಯೇ ||

ನಮ್ಮೆಲ್ಲ ಕಾರ್ಯಕ್ಷೇತ್ರಕ್ಕೆ ಕಾರಣೀಭೂತರಾಗಿದ್ದು ಜ್ಯೋತಿಸ್ವರೂಪರಾಗಿ ಹರಸಿ ಆಶೀರ್ವದಿಸುತ್ತಿರುವ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರನ್ನು ಈ ಸಂದರ್ಭದಲ್ಲಿ ಭಕ್ತಿಪೂರ್ವಕವಾಗಿ ಸ್ಮರಿಸಿ ನಮಿಸುತ್ತೇವೆ. ಇಂತಹ ದಿವ್ಯ ಸ್ವರೂಪರ ಅನುಗ್ರಹದ ಬಲದಿಂದಲೇ ಈ ಸಂಸ್ಥೆ ತನ್ನ ಯಥಾಶಕ್ತಿ ಸೇವೆಯನ್ನು ಮಾಡಿಕೊಂಡು ಬರುತ್ತಿರುವುದು ನಿಮ್ಮೆಲ್ಲರ ಗಮನಕ್ಕೆ ಬಂದಿದೆ.

ಇಡೀ ವಿಶ್ವದಲ್ಲಿ ನಮ್ಮ ಭರತಖಂಡಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಅದನ್ನು ಗಳಿಸಿಕೊಂಡಿರುವುದು ಧರ್ಮದ ಆಧಾರದಿಂದ. ಧರ್ಮವೇ ಈ ನಾಡಿನ ಆತ್ಮ, ಜಗತ್ತಿನ ಯಾವ ದೇಶದವನೇ ಆಗಲಿ ಅವನಿಗೆ ಸುಖ ಶಾಂತಿ ಲಭಿಸುವುದು ಧರ್ಮಮಾರ್ಗದಿಂದ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1023 ನೆಯ ಜಯಂತಿ ಮಹೋತ್ಸವದಲ್ಲಿ ದಯಪಾಲಿಸಿದ ಶುಭಸಂದೇಶ (1983)

ಮಾತ್ರ. ಧರ್ಮಕ್ಕೆ ಸಂಕುಚಿತವಾದ ಅರ್ಥವನ್ನು ಕಲ್ಪಿಸದೆ ವಿಶಾಲವಾದ ದೃಷ್ಟಿಯಲ್ಲಿ ಅರ್ಥೈಸಿದಾಗ ಅದು ಸಕಲ ಮಾನವರನ್ನು ಒಂದುಗೂಡಿಸುವ ಸಾಧನ ಹಾಗೂ ಧ್ಯೇಯವಾಗಿ ಪರಿಣಮಿಸುತ್ತದೆ. ಆದರೆ ಬದಲಾಗುತ್ತಿರುವ ಇಂದಿನ ನಮ್ಮ ದೇಶದ ಪ್ರಕ್ಷುಬ್ಧ ಹಾಗೂ ಸಂಘರ್ಷಮಯ ಪರಿಸ್ಥಿತಿಯಲ್ಲಿ ಧಾರ್ಮಿಕ ಹಾಗೂ ನೈತಿಕ ತತ್ವಗಳನ್ನು ಉದಾಸೀನದಿಂದ ಕಾಣುತ್ತಿರುವುದು ಶೋಚನೀಯ ಸಂಗತಿ. ಇಡೀ ಮಾನವಕುಲದ ಅಭ್ಯುದಯಕ್ಕೋಸುಗ ತಮ್ಮ ಬದುಕನ್ನು ಸವೆಸಿದ, ನಮ್ಮ ಸಂಸ್ಕೃತಿಯ ಸಾಕಾರರೂಪಾಗಿರುವ ಋಷಿ-ಮುನಿಗಳ, ಸಾಧು ಸಂತರ, ಜ್ಞಾನಿಗಳ ಅನುಭಾವಿಗಳ ಆದರ್ಶವನ್ನು ನಾವು ಎಂದೂ ಮರೆಯಬಾರದು. ಅವರ ಸಂದೇಶಗಳು ಬಾಳಿಗೆ ಸ್ಥೈರ್ಯ-ಧೈರ್ಯವನ್ನು, ಶಾಂತಿಯನ್ನು, ಓಜಸ್ಸನ್ನು ತಂದುಕೊಡಬಲ್ಲದು.

ಈ ವಿಚಾರವಾಗಿ ನಾವು ಹೆಚ್ಚಿಗೆ ಹೇಳಬಯಸುವುದಿಲ್ಲ. ವಿಚಾರಶಕ್ತಿಯುಳ್ಳ ಮಾನವರಿಗೇ ಧರ್ಮ ಮೀಸಲಾಗಿರುವುದು ನಿಮಗೆ ತಿಳಿದಿದೆ. ಇಂದು ಜಗತ್ತಿನಲ್ಲಿ ಹಿಂದೆಂದೂ ಕಂಡರಿಯದ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಯಿಂದಾಗಿ ಭೌತಿಕ ಸಂಪತ್ತನ್ನು ರೂಢಿಸಿಕೊಳ್ಳುವಲ್ಲಿ ಮಾನವನು ಹೊಸ ದಾಖಲೆಯನ್ನು ನಿರ್ಮಿಸಿದ್ದಾನೆ. ಇದು ಪ್ರಾಪಂಚಿಕ ಸುಖಕ್ಕೆ ಅವಶ್ಯಕವಾಗಿ ಬೇಕಾದುದೇನೋ ನಿಜ. ಆದರೆ ಜೊತೆಯಲ್ಲೇ ಅತ್ಯಂತ ಪ್ರಬಲ ಮಾರಕ ಅಸ್ತ್ರಗಳನ್ನು ನಿರ್ಮಿಸಿಕೊಂಡಿದ್ದಾನೆ. ಇದರ ಪರಿಣಾಮವಾಗಿ ಮಾನವ ತನಗೆ ಮಿತ್ರನಾಗದೆ ತನಗೆ ತಾನೇ ಹಗೆಯಾಗಿದ್ದಾನೆ. ಇದಕ್ಕೆ ಹಲವು ಕಾರಣಗಳನ್ನು ಕೊಡಬಹುದು. ಸಾವು ಬರುವುದು ಕಟುಸತ್ಯವೆಂದು ಅರಿತಿದ್ದರೂ ಮಾನವ ಐಹಿಕ ಬಾಳಿಗೇ ಬಹುವಾಗಿ ಅಂಟಿಕೊಳ್ಳುತ್ತಾನೆ. ಹೀಗೆ ಅಂಟಿಕೊಳ್ಳುವ ಪ್ರಯತ್ನ ಮುಂದುವರಿದಂತೆಲ್ಲ ಅವನು ಸ್ವಾರ್ಥಿಯಾಗುತ್ತಾನೆ; ಕ್ರೂರಿಯಾಗುತ್ತಾನೆ, ಲೋಭಿಯಾಗುತ್ತಾನೆ ಮತ್ತು ಪರರಿಗೆ ಮಾರಕನಾಗುತ್ತಾನೆ. ಇದಕ್ಕೆ ಪರಿಹಾರವನ್ನು ಒಂದೆರಡು ಮಾತುಗಳಲ್ಲಿ ಹೇಳಬಹುದು. ನಾವು ಬಾಳುತ್ತಿರುವ ಭೌತಿಕ ಬದುಕೇ ಶಾಶ್ವತವೆಂದು ನಂಬಿ ಪಾರಮಾರ್ಥಿಕ ಬಾಳಿನತ್ತ ಕೊಂಚವು ಲಕ್ಷ್ಯ ನೀಡದೆ ಇದ್ದಾಗ, ಜೀವನದಲ್ಲಿ ಅನೇಕ ಕಷ್ಟಕಾರ್ಪಣ್ಯಗಳು ಉಂಟಾಗುತ್ತವೆ. ಇದರಿಂದ ಬದುಕಿನಲ್ಲಿ ಅಶಾಂತಿ ಉಂಟಾಗಿ ಜೀವನ ದುರ್ಭರವಾಗುತ್ತದೆ. ಅದಕ್ಕೋಸ್ಕರ ಲೌಕಿಕ-ಪಾರಮಾರ್ಥಿಕಗಳು ಒಂದೇ ನಾಣ್ಯದ ಎರಡು ಮುಖಗಳು ಎಂಬುದನ್ನು ಚಿಂತಿಸಬೇಕು. 'ಜಾಣರು ಲೌಕಿಕ-ಪಾರಮಾರ್ಥವನ್ನು ಮಾಣದೆ ನಡೆಸುವರು' ಎಂದು ನಿಜಗುಣ ಶಿವಯೋಗಿಗಳು ಅಪ್ಪಣೆ ಕೊಡಿಸಿದ್ದಾರೆ.

ಇಂದಿನ ಯುವ ಪೀಳಿಗೆಯೇ ನವಭಾರತದ ನಿರ್ಮಾಪಕರು. ಅವರು ನೈತಿಕ ಹಾಗೂ ಧಾರ್ಮಿಕ ನೆಲಗಟ್ಟಿನ ಮೇಲೆ ನಿಲ್ಲಬಲ್ಲ ಸದೃಢ, ಸುಂದರ ಸಮಾಜವನ್ನು ನಿರ್ಮಾಣ ಮಾಡಬೇಕಾಗಿದೆ. ವಿಶ್ವದಲ್ಲಿ ನಮ್ಮ ದೇಶದ ಸ್ಥಾನಮಾನ ಯಾವುದು ಎಂಬುದನ್ನು





ದೀರ್ಘವಾಗಿ ಚಿಂತಿಸಬೇಕು. ಆಧ್ಯಾತ್ಮದಲ್ಲಿ ಗೌರವ ಹಾಗೂ ಮಾನವತೆಯಲ್ಲಿ ಶ್ರದ್ಧೆಯನ್ನು ತಾಳಿದಾಗ ಬದುಕು ಹಸನಾಗುತ್ತದೆ. ಅದರಿಂದ ಇಹಪರಗಳ ಸುಖ ಪ್ರಾಪ್ತಿಯಾಗುವುದೆಂದು ಬೇರೆ ಹೇಳಬೇಕಾಗಿಲ್ಲ. ಈ ದಿಕ್ಕಿನಲ್ಲಿ ನೀವೆಲ್ಲ ಗಾಢವಾಗಿ ಆಲೋಚಿಸಬೇಕಾಗಿದೆ.

ಪರಮಾತ್ಮನನ್ನು ನಂಬಿರುವವರು ಅವರವರ ನಂಬಿಕೆಯನ್ನು ಇನ್ನೂ ಬಲಪಡಿಸಿಕೊಳ್ಳಬೇಕು. ಆತ್ಮಶ್ರದ್ಧೆಯಿಂದ ಮಾಡಿದ ಕಾರ್ಯ ಬದುಕಿನಲ್ಲಿ ಅದ್ಭುತವಾದ ಫಲವನ್ನೀಯುತ್ತದೆ. ಭಗವಂತನಲ್ಲಿ ಶ್ರದ್ಧೆ ಇಟ್ಟು ಕಾರ್ಯ ಮಾಡಿದಾಗ ಜೀವನಕ್ಕೆ ಒಂದು ಅರ್ಥ ಬರುತ್ತದೆ. ಇದನ್ನೇ ಶರಣರು ಅರಿವು ಎಂದು ಕರೆದರು. ಈ ಅರಿವು ನಮ್ಮಲ್ಲಿ ಸದಾ ಜಾಗ್ರತವಾಗಿರಲು ಪ್ರಯತ್ನಿಸಬೇಕು... 'ಸಂಗಚ್ಛಧ್ವಂ, ಸಂವದಧ್ವಂ ಸಂವೋಮನಾಂಸಿ ಜಾನತಾಂ' ಎಂಬ ವೇದವಾಣಿಯಂತೆ, ಮಾನವರೆಲ್ಲರೂ, ಪರಸ್ಪರ ಮೈತ್ರಿ, ಸಹಾಯ, ಸಹಕಾರ, ಪ್ರೇಮದಿಂದ ಬಾಳಬೇಕು.

ಎಂದಿನಂತೆಯೂ ಈ ವರ್ಷವೂ ಆದಿಜಗದ್ಗುರುಗಳವರ ಜಯಂತಿ ಮಹೋತ್ಸವವನ್ನು ಆಚರಿಸುವ ನಿಮಿತ್ತ ವಿಶೇಷ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದ್ದೀರಿ. ಇದು ಪರಮಾತ್ಮನ ಪ್ರೀತ್ಯರ್ಥವಾಗಿ ನೀವು ಮಾಡಿರುವ ಕಾರ್ಯ ಎಂದೇ ಭಾವಿಸುತ್ತೇವೆ. ಇಲ್ಲಿ ನಡೆಸುವ ಕಾರ್ಯಕ್ರಮಗಳು ಧಾರ್ಮಿಕ ಚಿಂತನೆಯತ್ತ ನಿಮ್ಮನ್ನು ಕೊಂಡೊಯ್ಯಲು ಅನುಕೂಲವಾಗುತ್ತದೆಂದು ಭಾವಿಸುತ್ತೇವೆ. ನೀವು ನಮ್ಮನ್ನು ಕುರಿತು ಮೆಚ್ಚುಗೆಯ ಹಲವು ನುಡಿಗಳನ್ನಾಡಿ ಈ ಸಂಸ್ಥೆಯ ಸೇವಾಕಾರ್ಯವನ್ನು ಕುರಿತು ಶ್ಲಾಘಿಸಿದ್ದೀರಿ. ನಿಮ್ಮ ಕೃತಜ್ಞತೆ ಹಾಗೂ ಪ್ರೇಮಭಾವದ ಈ ನುಡಿಗಳು ನಮ್ಮ ಇಂದಿನ ಮತ್ತು ಮುಂದಿರುವ ಕರ್ತವ್ಯವನ್ನು ನೆನಪಿಸುತ್ತವೆ. ಇದೇ ರೀತಿ ಮುಂದೆಯೂ ನಿಮ್ಮೆಲ್ಲರ ಅವ್ಯಾಹತವಾದ ಪ್ರೀತಿ ಸಹಾಯ-ಸಹಕಾರಗಳು ದೊರೆಯುವುದೆಂದು ಆಶಿಸುತ್ತಾ ದಯಾಮಯನಾದ ಭಗವಂತನು ಸರ್ವರಿಗೂ ಒಳಿತನ್ನುಂಟುಮಾಡಲಿ ಎಂದು ಹಾರೈಸುತ್ತೇವೆ.

|| ಸರ್ವೇ ಜನಾಃ ಸುಖಿನೋ ಭವಂತು ||

□

## ಆಶೀರ್ವಚನ - ೬

ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ|
ನಮಸ್ಸದ್ಗುರುನಾಥಾಯ ಷಟ್‌ಸ್ಥಲಬ್ರಹ್ಮಮೂರ್ತಯೇ||

ಹರಗೂರು ಚರಮೂರ್ತಿಗಳೇ, ಕರ್ನಾಟಕ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಖಾತೆ ಸಚಿವರಾದ ಶ್ರೀಮಾನ್ ಎಸ್.ಆರ್. ಬೊಮ್ಮಾಯಿ ಅವರೇ, ಕರ್ನಾಟಕ ಸರ್ಕಾರದ ಲೋಕೋಪಯೋಗಿ ಮತ್ತು ನೀರಾವರಿ ಖಾತೆ ಸಚಿವರಾದ ಶ್ರೀಮಾನ್ ಹೆಚ್.ಡಿ. ದೇವೇಗೌಡ ಅವರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವರಾದ ಶ್ರೀಮಾನ್ ಪಿ.ಜಿ.ಆರ್. ಸಿಂಧ್ಯಾ ಅವರೇ, ಮಾತೆಯರೇ ಮತ್ತು ಭಕ್ತ ಮಹಾಶಯರೇ ಹಾಗೂ ಅಧಿಕಾರವರ್ಗದವರೆ.

ನಮ್ಮ ಶ್ರೀಮಠದ ಸಂಸ್ಥಾಪನಾಚಾರ್ಯರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತಿ ಮಹೋತ್ಸವದ ಅಂಗವಾಗಿ ವ್ಯವಸ್ಥಿತವಾಗಿರುವ

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1024ನೆಯ ಜಯಂತಿ ಮಹೋತ್ಸವದಲ್ಲಿ ದಯಪಾಲಿಸಿದ ಶುಭಸಂದೇಶ (1984)







ಈ ಧರ್ಮಸಿಂಹಾಸನಾರೋಹಣ ಶುಭಸಂದರ್ಭದಲ್ಲಿ ನೀವು ನಮಗೆ ಅನನ್ಯ ಭಕ್ತಿ ಗೌರವಗಳನ್ನು ತೋರಿಸಿರುವಿರಿ. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ನಿಮ್ಮೆಲ್ಲರಿಗೂ ಸಮಸ್ತ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಪವಿತ್ರ ನಾಮಾಂಕಿತದಲ್ಲಿ ಸಂಸ್ಥಾಪಿಸಲ್ಪಟ್ಟಿರುವ ವಿದ್ಯಾಕೇಂದ್ರಗಳು, ಪ್ರಸಾದನಿಲಯಗಳು, ಧಾರ್ಮಿಕ ಕೇಂದ್ರಗಳು ಮುಂತಾದವುಗಳನ್ನು ನೀವು ಬಿನ್ನವತ್ತಳೆಯಲ್ಲಿ ಶ್ರದ್ಧಾ-ಭಕ್ತಿಗಳಿಂದ ಪ್ರಶಂಸಿಸಿರುವಿರಿ. ಸಮಾಜಕ್ಕೆ ಯತ್ಕಿಂಚಿತ್ ಸೇವೆಯನ್ನು ಸಲ್ಲಿಸುವ ಸೌಭಾಗ್ಯ ನಮಗೆ ಲಭಿಸಿರುವುದು ಆದಿ ಗುರುಗಳ ಹಾಗೂ ನಮ್ಮ ಹಿಂದಿನ ಗುರುಗಳಾದ ಮಂತ್ರ ಮಹರ್ಷಿ ಪೂಜ್ಯ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರ ಅನುಗ್ರಹದಿಂದಲೇ ಎಂಬುದನ್ನು ನಾವು ಅರಿತುಕೊಂಡಿದ್ದೇವೆ. ಈ ನಮ್ಮ ಸಮಾಜ ಸೇವಾಕಾರ್ಯಗಳು ಸುಗಮವಾಗಿ ನಡೆದುಕೊಂಡು ಬರಲು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಮಹಾ ಜನತೆ, ವಿದ್ಯಾಪೀಠದ ನೌಕರ ವರ್ಗ ಮತ್ತು ವಿದ್ಯಾರ್ಥಿವೃಂದದವರು ನೀಡಿದ ಸಹಕಾರವನ್ನು ಅತ್ಯಂತ ಅಭಿಮಾನದಿಂದ ನಾವಿಲ್ಲಿ ಸ್ಮರಿಸುತ್ತೇವೆ. ವಿದ್ಯಾರ್ಥಿಗಳು ಈ ದೇಶದ ಮುಂದಿನ ಭವಿಷ್ಯನಿರ್ಮಾಪಕರು. ಅವರು ತಮ್ಮ ಅಭ್ಯಾಸದಲ್ಲಿ ಆಸಕ್ತಿಯಿಟ್ಟು ದೇಶದ ಸ್ವಾತಂತ್ರ್ಯ ರಕ್ಷಣೆಯಲ್ಲಿ, ದೇಶದ ಅಭ್ಯುದಯ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸಬೇಕೆಂದು ಬಯಸುತ್ತೇವೆ.

ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬ ಮಾನವನೂ ಒಂದಲ್ಲ ಒಂದು ಕಾಯಕವನ್ನು ಮಾಡಿಯೇ ಬದುಕಬೇಕು. "ಕುರ್ವನ್ನೇವೇಹ ಕರ್ಮಾಣಿಜಿಜೀವಿಷೇತ್ ಶತ ಗುಂ ಸಮಾಃ" ಎನ್ನುವ ತತ್ವವನ್ನು ಅರಿತುಕೊಂಡು ಜ್ಞಾನದೇಗುಲಗಳನ್ನು ಆದಿ ಜಗದ್ಗುರುಗಳವರ ದಿವ್ಯ ನಾಮಾಂಕಿತದಲ್ಲಿ ಸಂಸ್ಥಾಪಿಸಿ ಪೋಷಿಸಿಕೊಂಡು ಬರುತ್ತಿದ್ದೇವೆ. ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತ. 'ಕಾಯಕವೇ ಕೈಲಾಸ' ಎಂಬ ಶರಣರ ಸೂಳ್ನುಡಿಗಳು ನಮಗೆಲ್ಲಾ ಜೀವನದಲ್ಲಿ ಪ್ರೇರಕಶಕ್ತಿಯಾಗಿರಬೇಕು. ಕಾಯಕದಲ್ಲಿ ನಿಷ್ಠೆ ಇಲ್ಲದೇ ಇರುವುದೇ ಇಂದಿನ ಸಮಾಜದ ಎಲ್ಲ ಸಮಸ್ಯೆಗಳಿಗೆ ಕಾರಣವಾಗಿರುತ್ತೆ. ದುಡಿಯದೆ ಸುಖ ಬಯಸುವ ಮನೋಭಾವವನ್ನು ಬಿಟ್ಟು ಪ್ರತಿಯೊಬ್ಬರೂ ತಮ್ಮ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದರು ಸಮಸ್ಯೆಗಳು ಉದ್ಭವಿಸುವುದಿಲ್ಲ. "ಸೋಮಾರಿಯ ಮನಸ್ಸು ಸೈತಾನನ ಕಾರ್ಖಾನೆ" ಎಂಬಂತೆ ನಿರುದ್ಯೋಗಿಯ ಮನಸ್ಸು ಅನ್ಯ ವಿಷಯಗಳಿಗೆ ಎಡೆಕೊಟ್ಟು ಸಮಾಜದಲ್ಲಿ ಗೊಂದಲ ಏರ್ಪಡಲು ಸಹಕಾರಿ ಯಾಗುತ್ತದೆ. ಕಾಯಕದಲ್ಲಿ ತಾರತಮ್ಯ, ಹೆಚ್ಚುಕಡಿಮೆ ಉಚ್ಚನೀಚ ಭಾವನೆಯನ್ನು ಮಾಡಬಾರದು. ಕೊಟ್ಟಕುದುರೆಯನೇರಲರಿಯದವನು ವೀರನೂ ಅಲ್ಲ, ಧೀರನೂ ಅಲ್ಲ. ಪಾಲಿಗೆ ಬಂದ ಕರ್ತವ್ಯವನ್ನು ಸಮರ್ಪಣ ಭಾವದಿಂದ, ಸತ್ಯ-ಶುದ್ಧತೆಯಿಂದ





ಮಾಡಬೇಕು. ಆಗಲೇ 'ಕಾಯಕ ಕೈಲಾಸ'ವಾಗುವುದು. ನಮ್ಮ ಭೌತಿಕ ಸಂಪತ್ತೆಲ್ಲವೂ ಧರ್ಮ ಮಾರ್ಗದಿಂದಲೇ ಆರ್ಜನೆಯಾಗಬೇಕು. ಆರ್ಜನೆಯಾದ ಸಂಪತ್ತು ಗುರು-ಲಿಂಗ-ಜಂಗಮಕ್ಕೆ ಅರ್ಪಿತವಾಗಬೇಕು. ಅವಶ್ಯಕತೆಯಿರುವ ದೀನದಲಿತರಿಗೆ ವಿನಿಯೋಗವಾಗಬೇಕು. ತಾನು ಕಾಯಕನಿರತನಾಗಿ ಬಂದ ಸಂಪತ್ತನ್ನು ತನ್ನ ಭೋಗಕ್ಕೇ ಬಳಸಿಕೊಳ್ಳುವುದು ಧರ್ಮವಲ್ಲ. ದುಃಖಿತಪ್ತರನ್ನು ಉದ್ಧರಿಸುವುದಕ್ಕೆ ಅದು ಮೀಸಲಾದರೆ ಗಳಿಸಿದ ಅರ್ಥ ಸಾರ್ಥಕವಾಗುತ್ತದೆ. ವ್ಯಕ್ತಿಗಿಂತ ಸಮಷ್ಟಿ ದೊಡ್ಡದು ಎಂಬುದನ್ನು ನಾವೆಲ್ಲರು ನೆನಪಿಟ್ಟುಕೊಳ್ಳಬೇಕು. ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಎಂದೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಎಂಬ ಬಸವಣ್ಣನವರ ಉಕ್ತಿಯನ್ನು ಇಲ್ಲಿ ಸ್ಮರಿಸಬಹುದು.

ಭಾರತದೇಶ ಅನೇಕ ಪುಣ್ಯಪುರುಷರಿಗೆ ಮಹಾನುಭಾವರಿಗೆ ಜನ್ಮವಿತ್ತ ನಾಡು. ಧರ್ಮಕ್ಕಾಗಿ ನಾಡಿಗಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡಿರುವ ಮಹಾತ್ಮರ ಪುಣ್ಯಸ್ಮರಣೆಯನ್ನು ನಾವಿಂದು ಮಾಡಬೇಕಾಗಿದೆ. ಪುಣ್ಯ ಸ್ಮರಣೆಯೊಂದೇ ಸಾಲದು. ಅವರು ನಾಡಿನ ಅಭ್ಯುದಯಕ್ಕಾಗಿ ತೋರಿಸಿರುವ ಮಾರ್ಗದಲ್ಲಿ ನಾವು ನಡೆಯಬೇಕಾಗಿದೆ. ನಮ್ಮ ಬದುಕು ಸ್ತುತ್ಯವಾಗಿ ಇಹಪರ ಎರಡೂ ಸಾಧಿತವಾಗಬೇಕು. ಇದೇ ಮಾನವಧರ್ಮ. ಆದ್ದರಿಂದಲೇ ಋಷಿಗಳು-ಯತೋಭ್ಯುದಯ ನಿಶ್ರೇಯಸ ಸಿದ್ಧಿಃ ಸಧರ್ಮ ಎಂದರು. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನಯ್ಯಾ, ಇಲ್ಲಿ ಸಲ್ಲದವನು ಅಲ್ಲಿ ಸಲ್ಲನಯ್ಯಾ ಎಂಬ ಆದ್ಯರ ಮಾತು ಅಕ್ಷರಶಃ ಸತ್ಯ.

ಭಕ್ತ ಮಹಾಶಯರೇ,

ಅಧಿಕಾರ, ಸಂಪತ್ತು, ಯೌವನ ಇವಾವುದೂ ಶಾಶ್ವತವಲ್ಲ. ಇವೆಲ್ಲ ನೀರಿನ ಮೇಲಿನ ಗುಳ್ಳೆಗಳಂತೆ. ನಾವು ಮಾಡುವ ಸಮಾಜದ ಅಭ್ಯುದಯ ಕಾರ್ಯಗಳು ಎಂದೆಂದಿಗೂ ಉಳಿಯುತ್ತವೆ. ಇದನ್ನರಿತು ಎಲ್ಲರೂ ತಮ್ಮ ಪಾಲಿನ ಕರ್ತವ್ಯಗಳನ್ನು ಸೇವಾ ಮನೋಭಾವನೆಯಿಂದ ನೆರವೇರಿಸಬೇಕು.

ಇಂದಿನ ಜಗದ ವಾತಾವರಣವನ್ನು ನೋಡಿದರೆ ಮಾನವತೆಯ ವಿನಾಶಕ್ಕೆ ಸರ್ವಸಿದ್ಧತೆಗಳು ನಡೆಯುತ್ತಿರುವಂತೆ ಕಾಣುತ್ತಿದೆ. ಒಂದೆಡೆ ಅನ್ನವಿಲ್ಲದೆ ಕೋಟಿ ಜೀವಿಗಳು ಹಂಬಲಿಸುತ್ತಿದ್ದರೆ ಮತ್ತೊಂದು ಕಡೆ ಸರ್ವನಾಶಕವಾದ ಅಣ್ವಸ್ತ್ರ ರೂಪಿಸಲು ಕೋಟ್ಯಾಂತರ ಧನಸಂಪತ್ತು, ದೈವದತ್ತವಾದ ಜ್ಞಾನಸಂಪತ್ತು ವ್ಯರ್ಥವಾಗಿ ವ್ಯಯವಾಗುತ್ತಿದೆ. ಮಾನವ ತನ್ನನ್ನು ತಾನು ಅರ್ಥಮಾಡಿಕೊಂಡಿದ್ದರೆ ಅನ್ಯರನ್ನೂ ತನ್ನಂತೆ ಭಾವಿಸುತ್ತಿದ್ದ. ತನ್ನ ಅರಿವು ತನಗಿಲ್ಲವಾಗಿ ಅನ್ಯರ ಬಗೆಗೆ ದ್ವೇಷ, ಅಸೂಯೆ ಬೆಳೆದು ಬಂದು ದೈವದತ್ತವಾದ ನೈಸರ್ಗಿಕ ಸಂಪತ್ತನ್ನು ಸರ್ವರ ಸುಖಕ್ಕಾಗಿ ಬಳಸದೆ ಅನ್ಯರ







ವಿನಾಶಕ್ಕೆ ಬಳಸಲು ಪ್ರಯತ್ನ ನಡೆಯುತ್ತಿದೆ. ಧರ್ಮಪೀಠಗಳು ಇಂತಹ ವಿಪತ್ಕಾರಿ ಪ್ರವೃತ್ತಿಯನ್ನು ಅಳಿಸಿ ಮಾನವತ್ವದ ಮೌಲ್ಯವನ್ನು ಅರಿವು ಮಾಡಿಕೊಡಲು ಶ್ರಮಿಸುತ್ತಾ ಬಂದಿವೆ. ಅದೇ ಪರಂಪರೆಯಲ್ಲಿ ಬಂದ ನಮ್ಮ ಧರ್ಮಪೀಠವು ನಡೆಸಿರುವ ಕಾರ್ಯಗಳೆಲ್ಲಾ ಕರ್ತವ್ಯ ದೃಷ್ಟಿಯಿಂದ ಮಾಡಿದವುಗಳು. ವಿಶ್ವದ ಇಂದಿನ ಪರಿಸ್ಥಿತಿಯಲ್ಲಿ ಧರ್ಮಜಾಗೃತಿಯೊಂದೇ ಸರ್ವರನ್ನು ಸಂರಕ್ಷಿಸುವ ಮಾರ್ಗ. ಆದುದರಿಂದ ನಮ್ಮ ಭಕ್ತರೂ, ಅಭಿಮಾನಿಗಳೂ, ವಿದ್ಯಾರ್ಥಿಗಳೂ ಧರ್ಮಜೀವಿಗಳಾಗಬೇಕೆಂಬುದೇ ನಮ್ಮ ಪೀಠವು ಕೊಡುವ ಧರ್ಮದೀಕ್ಷೆ. ಅದೇ ಮುಂದಿನ ಜನಾಂಗಕ್ಕೆ ಶ್ರೀರಕ್ಷೆ. ಜನಜೀವನದಲ್ಲಿ ಮತ್ತೊಮ್ಮೆ ಧರ್ಮಜಾಗೃತಿಯನ್ನುಂಟುಮಾಡಲು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ನಮ್ಮ ನಿಮ್ಮೆಲ್ಲರಿಗೂ ಸರ್ವಶಕ್ತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ನಿಮ್ಮೆಲ್ಲರಿಗೆ ಸನ್ಮಂಗಳವನ್ನು ಹಾರೈಸುತ್ತೇವೆ.

ಭದ್ರಂ-ಶುಭಂ-ಮಂಗಳಂ

□

ಹೊನ್ನ ಹಾವುಗೆಯ ಮೆಟ್ಟಿದವನ,
ಮಿಡಿಮುಟ್ಟಿದ ಕೆಂಜೆಡೆಯವನ,
ಮೈಯಲ್ಲಿ ವಿಭೂತಿಯ ಧರಿಸಿದವನ,
ಕರದಲ್ಲಿ ಕಪಾಲವ ಪಿಡಿದವನ,
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ,
ನಂಬಿಗೆ ಕುಂಟಣಿಯಾದವನ,
ಚೋಳಂಗೆ ಹೊನ್ನ ಮಳೆಯ ಕರೆದವನ,
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯದಲ್ಲಿಪ್ಪವನ,
ಮಾಡಿದ ಪೂಜೆಯಲೊಪ್ಪುವನ,
ಕೂಡಲಸಂಗಯ್ಯನೆಂಬವನ.

- ಬಸವಣ್ಣ

## ಆಶೀರ್ವಚನ - ೭



ಹರಗುರುಚರಮೂರ್ತಿಗಳೆ, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಹೆಗ್ಗಡೆಯವರೆ, ಈ ಸಮ್ಮೇಳನವನ್ನು ಉದ್ಘಾಟಿಸಿದ ಮಾನ್ಯ ಮಂತ್ರಿಗಳಾದ ಶ್ರೀ ಸಿಂಧ್ಯ ರವರೆ, ಈ ಕ್ಷೇತ್ರದಲ್ಲಿಯೇ ಕಳೆದ 30 ವರ್ಷಗಳಿಂದ ಸೇವಾತತ್ಪರರಾಗಿರುವ ಪರಮಹಂಸ ಶ್ರೀ ಭಾಸ್ಕರಂ ಶೇಷಾಚಾರ್ಯರೆ, ಪತ್ರಕರ್ತರೆ ಮತ್ತು ಅಪಾರ ಸಂಖ್ಯೆಯಲ್ಲಿ ಇಲ್ಲಿ ನೆರೆದಿರುವ ಮಹನೀಯರೆ.

ಕಳೆದ ಐವತ್ತು ವರ್ಷಗಳಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬರುತ್ತಿರುವ ಈ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವುದು ನಮಗೆ ಅತೀವ ಸಂತೋಷ ಮತ್ತು ಸಂತೃಪ್ತಿಯನ್ನು ತಂದಿದೆ. ಲಕ್ಷದೀಪೋತ್ಸವದೊಂದಿಗೆ ನಡೆಯುತ್ತಿರುವ ಈ ಧರ್ಮಸಮ್ಮೇಳನದ ಕಾರ್ಯಕ್ರಮಗಳು ನಿಜಕ್ಕೂ ಅರ್ಥಪೂರ್ಣವೆನಿಸಿವೆ. ಅಜ್ಞಾನ-ಅಂಧಕಾರಗಳೆಂಬ ಮೋಡಗಳು ಕವಿಯುತ್ತಿರುವ ತತ್ಕಾಲದ ಈ ಸಂದರ್ಭಗಳಲ್ಲಿ ಲಕ್ಷ

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನದಲ್ಲಿ ಪೂಜ್ಯ ಜಗದ್ಗುರುಗಳವರು ನೀಡಿದ ಆಶೀರ್ವಚನ (1984)







ದೀಪಗಳನ್ನು ಹಚ್ಚಿ ದೀಪವನ್ನೆ ಅಂದರೆ ಬೆಳಕನ್ನೇ ಆರಾಧಿಸುವುದು ಅದೆಷ್ಟು ಔಚಿತ್ಯ ಪೂರ್ಣವೆಂಬುದನ್ನು ಎಲ್ಲರೂ ಮನಗಾಣಬಹುದು. ಈಗೀಗ ಧರ್ಮದಲ್ಲಿ ನಿರಾಸಕ್ತಿ, ದೇವರಲ್ಲಿ ಭಕ್ತಿ ಸಂಪೂರ್ಣವಾಗಿ ನಶಿಸಿ ಹೋಗುತ್ತಿರುವುದರಿಂದ ಈ ದಿಕ್ಕಿನಲ್ಲಿ ಚಿಂತಿಸುವವರನ್ನೆಲ್ಲಾ ಒಂದುಗೂಡಿಸುವಂತೆ ಮಾಡಿ ಧರ್ಮದ ಪುನರುತ್ಥಾನಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೇ ಈ ಸಮ್ಮೇಳನದ ಬಹು ಮುಖ್ಯ ಅಂಗವೆಂದು ನಮ್ಮ ಭಾವನೆ. ಅರ್ಧಶತಮಾನದಷ್ಟು ಹಿಂದೆಯೇ ಅಂದಿನ ಧರ್ಮಾಧಿಕಾರಿಗಳಾದ ಶ್ರೀ ಮಂಜಯ್ಯ ಹೆಗ್ಗಡೆಯವರಿಂದ ಸಂಸ್ಥಾಪಿಸಿ ಆರಂಭಗೊಂಡು ಶ್ರೀ ರತ್ನವರ್ಮ ಹೆಗ್ಗಡೆಯವರ ಕಾಲದಲ್ಲಿ ವಿಶೇಷ ಪ್ರಾಮುಖ್ಯತೆಯನ್ನು ಗಳಿಸಿಕೊಂಡು, ಈಗ ಶ್ರೀ ವೀರೇಂದ್ರ ಹೆಗ್ಗಡೆಯವರ ಕಾಲದಲ್ಲಿ ವಿಶಾಲ ತತ್ವ ಮತ್ತು ಆದರ್ಶಗಳನ್ನು ಹೊಂದಿ ನಡೆದುಕೊಂಡು ಬರುತ್ತಿರುವ ಈ ಸಮ್ಮೇಳನ ನಿಜಕ್ಕೂ ಎಲ್ಲರ ಪ್ರಶಂಸೆಯನ್ನು ಗಳಿಸುವಂಥದು. ಇದರಲ್ಲಿ ಈ ಕ್ಷೇತ್ರದ ಧರ್ಮಾಧಿಕಾರಿಗಳ ಸರ್ವಧರ್ಮ ಸಮನ್ವಯ ದೃಷ್ಟಿ ಎದ್ದು ಕಾಣುವ ಅಂಶ.

ಇಂದಿನ ಸಾಮಾಜಿಕ ಅಧಃಪತನಕ್ಕೆ ಧಾರ್ಮಿಕ ಮೌಲ್ಯಗಳ ಕಡೆಗಾಣಿಸುವಿಕೆಯೇ ಬಹು ಮುಖ್ಯ ಕಾರಣವೆಂದು ಈಗಾಗಲೇ ಮಾತನಾಡಿದವರೆಲ್ಲರೂ ಒತ್ತಿ ಒತ್ತಿ ಹೇಳಿದ್ದಾರೆ. ಈ ಅಭಿಪ್ರಾಯವನ್ನು ಇಂದು ಯಾರೂ ಕಡೆಗಾಣಿಸುವಂತಿಲ್ಲ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕೀಳರಿಮೆಗಳು ಇಂದು ಸಮಾಜದ ಪ್ರಗತಿಪರ ಶಕ್ತಿಗಳನ್ನು ಕುಗ್ಗಿಸಿ ಬಗ್ಗಿಸಿವೆ. ಧರ್ಮವನ್ನು ಹೆಚ್ಚು ಕಡಿಮೆ ಎಲ್ಲರೂ ತಪ್ಪಾಗಿ ಅರ್ಥಮಾಡಿಕೊಂಡಂತಿದೆ. ಅಂದರೆ ಕಳ್ಳನಿಗೆ ಕಳ್ಳತನವೇ ಧರ್ಮ, ಮೋಸಗಾರನಿಗೆ ಮೋಸ ಮಾಡುವುದೇ ಧರ್ಮ, ಭ್ರಷ್ಟಾಚಾರಿಗೆ ಭ್ರಷ್ಟ ಜೀವನವೇ ಒಂದು ಧರ್ಮ - ಹೀಗೆ ಧರ್ಮದ ನಿಜವಾದ ಪರಿಕಲ್ಪನೆ ಮತ್ತು ಅರ್ಥಗಳು ಸಂಕುಚಿತಗೊಂಡು ಅರಿವು ಮಾಯವಾಗಿ ರಾಕ್ಷಸೀ ಪ್ರವೃತ್ತಿಗಳು ದಿನೇ ದಿನೇ ಹೆಚ್ಚುತ್ತಿವೆ. ಇದನ್ನು ಒಂದು ಉದಾಹರಣೆಯನ್ನು ಕೊಟ್ಟು ಹೇಳಬೇಕೆಂದರೆ - ನಿಮಗೆಲ್ಲ ಆನೆಯನ್ನು ನೋಡಲು ಹೋದ ಕುರುಡರ ಕಥೆ ಗೊತ್ತಿದೆ. ಆ ಕುರುಡರಿಗೆ ಆನೆ ಹೇಗೆ ಕಂಡಿತು? ಕಂಬದಂತೆಯೊ, ಗೋಡೆಯಂತೆಯೊ ಅಥವಾ ಹಗ್ಗದಂತೆಯೊ ಕಂಡಿತು. ಹೀಗೆ ಕುರುಡರಿಗೆ ಆನೆಯ ಸ್ವರೂಪದ ಪೂರ್ಣ ಚಿತ್ರ ಹೇಗೆ ದೊರೆಯಲಿಲ್ಲವೊ ಹಾಗೆಯೇ ನಮಗೂ ಇಂದು ಧರ್ಮದ ಸ್ವರೂಪ ಹಗ್ಗವೊ - ಹಾವೊ ಆಗಿದೆ. ಇದಕ್ಕೆ ಮುಖ್ಯ ಕಾರಣ ವ್ಯಕ್ತಿ ತನ್ನನ್ನು ತಾನು ಅರಿಯದಿರುವುದು. ಧಾರ್ಮಿಕ ಮೌಲ್ಯಗಳನ್ನು ಒತ್ತಟ್ಟಿಗಿಟ್ಟು ಲೌಕಿಕಲೋಲುಪ್ತತೆಯಲ್ಲಿ ತಲ್ಲೀನನಾಗಿರುವುದು.

ಅವರವರಿಗವರ ಮನವೊಲಿದುದೇ ಬ್ರಹ್ಮ
ಸುವಿವೇಕಿಗಳಿಗಾತ್ಮ ತತ್ತ್ವವೇ ಬ್ರಹ್ಮ
ಚೋರರಿಗೆ ಪರಪದಾರ್ಥಾಪಹೃತಿಯೇ ಬ್ರಹ್ಮ।

ಜಾರರಿಗೆ ಮನವಾರೆ ಸುರತವೇ ಬ್ರಹ್ಮ|
ಶೂರರಿಗೆ ನಿಜಶತ್ರು ಸಂಹರಣವೇ ಬ್ರಹ್ಮ|
ದಾರಿದ್ರರಿಂಗಶನವಸನವೇ ಬ್ರಹ್ಮ|

ಬಲು ಲೋಭಿಗಳಿಗೆ ಗಳಿಸಿರುವ ಧನವೇ ಬ್ರಹ್ಮ|
ಖಲ ಜನರಿಗನ್ಯರ ಶ್ರೇಯವೇ ಬ್ರಹ್ಮ|
ಒಲಿದ ಲೌಕಿಕರಗೆ ಸತಿಪುತ್ರರೇ ಬ್ರಹ್ಮ |
ಛಲವಂತರಿಗೆ ವಾಕ್ಯ ವಿಜಯವೇ ಬ್ರಹ್ಮ |

ತ್ಯಾಗಿಗಳಿಗಾತ್ಮನುತಿಮಯ ಕೀರ್ತಿಯೆ ಬ್ರಹ್ಮ |
ರೋಗಪೀಡಿತರಿಗಾರೋಗ್ಯವೇ ಬ್ರಹ್ಮ|
ರಾಗಿಗಳಿಗೀ ಸ್ವರ್ಣಮುಖ ವಿಷಯವೇ ಬ್ರಹ್ಮ |
ಭೋಗಿಗಳಿಗಂಗ ಸುಖಲಬ್ಧಿಯೇ ಬ್ರಹ್ಮ |

ವಿತತ ಶಾಸ್ತ್ರಜ್ಞರಿಗೆ ಜನದ ಮೆಚ್ಚೇ ಬ್ರಹ್ಮ
ವ್ರತಶೀಲ ಪರರ್ಗೆ ಸತ್ಕರ್ಮವೇ ಬ್ರಹ್ಮ
ನತಭಕ್ತಿಯುತರ್ಗಿಷ್ಟವಹ ದೈವವೇ ಬ್ರಹ್ಮ
ಯತಿಗಳಿಗೆ ಕಳೆಬಿಂದು ನಾದವೇ ಬ್ರಹ್ಮ

ವರಮುಮುಕ್ಷುಗಳಿಂಗೆ ತತ್ವಾರ್ಥವೇ ಬ್ರಹ್ಮ -
ವರಿತರ್ಗೆ ಪೂರ್ಣಗುರುಸಿದ್ಧನೇ ಬ್ರಹ್ಮ |
ಪರವಸ್ತು ತಾವಾವೆಂಬುಭಯ ಮುಖದ ಮನವರತ
ಪರವಶರ್ಗೆ ತಾವೆ ತಾವಾದುದೇ ಬ್ರಹ್ಮ |

ಯಾವುದು ಶಾಶ್ವತ ಯಾವುದು ಅಲ್ಲ ಎಂಬ ಈ ವಚನದ ಅರ್ಥವನ್ನು ವಿವರಿಸಿ ಹೇಳುವ ಅಗತ್ಯವಿಲ್ಲವೆಂದು ಭಾವಿಸುತ್ತೇವೆ. ಅಂದರೆ ಧರ್ಮವನ್ನು ಅಲ್ಲಿ ಇಲ್ಲಿ ಹುಡುಕುವ ಅಗತ್ಯವಿಲ್ಲ. ತನ್ನಲ್ಲಿಯೇ ತನ್ನ ಆಚರಣೆಯಲ್ಲಿಯೇ ಮತ್ತು ತನ್ನ ಅರಿವಿನಲ್ಲಿಯೇ ಧರ್ಮದ ಸೆಲೆ ಮತ್ತು ನೆಲೆಯಿರುವುದು "ಧಾರಣಾತ್ ಧರ್ಮ ಇತ್ಯಹುಃ" ಭೌತಿಕ ಸುಖ ದುಃಖಗಳನ್ನು ಅನುಭವಿಸುವಲ್ಲಿ ಪಶುಪಕ್ಷಿಗಳಿಗೂ ಏನು ವ್ಯತ್ಯಾಸ ?

"ಧರ್ಮೇಣ ವಿ ನಾ ಪಶುಭಿಸ್ಸಮಾನಃ" ಹೀಗೆಂದು ಆಗಲೆ ಶೇಷಾಚಾರ್ಯರು ಹೇಳಿದುದನ್ನು ಇಲ್ಲಿ ಸ್ಮರಿಸಬಹುದು. ಭೌತಿಕ ಸುಖವೊಂದೇ ಜೀವನದ ಪರಮ ಧ್ಯೇಯ ಎಂದುಕೊಳ್ಳುವುದಾದರೆ ಪಶುಪಕ್ಷಿಗಳು ದೋಷರಹಿತ ಮತ್ತು ಪ್ರಕೃತಿಗನುಗುಣವಾದ ಸ್ವಚ್ಛಂದ ಜೀವನವನ್ನೇ ನಡೆಸುತ್ತವೆ. ಮಾನವರಾದರೂ ಜೀವನಕ್ಕಾಗಿ ಮೋಸ ವಂಚನೆ ಮುಂತಾದ ತತ್ವಬಾಹಿರ ಮಾರ್ಗಗಳನ್ನು ಅನುಸರಿಸುವುದುಂಟು. ಇದನ್ನು ನಾವು ಪಶುಪಕ್ಷಿಗಳಲ್ಲಿ ಕಾಣುವುದಿಲ್ಲ. ನಾವು ಪಶುಪಕ್ಷಿಗಳಿಂದ ಭಿನ್ನರು ಎಂದುಕೊಂಡಾಗಲೇ ಜೀವನದಲ್ಲಿ ಧರ್ಮದ ಪಾತ್ರವೇನೆಂದು ಅರಿವಾಗತೊಡಗುವುದು. ಈ ಅರಿವಿನ





ಅಭಾವವೇ ಧರ್ಮದ ಅವನತಿಯ ಆರಂಭ.

ಅನುಸರಿಸುವ ದೃಷ್ಟಿಯಿಂದ ಧರ್ಮವನ್ನು ಸಾಮಾನ್ಯ ಧರ್ಮವೆಂದು ಮತ್ತು ವಿಶೇಷ ಧರ್ಮವೆಂದು ಇಲ್ಲಿಯ ಅಗತ್ಯಕ್ಕಾಗಿ ವಿಭಾಗಿಸಿಕೊಳ್ಳಬಹುದು. ಮಾನವರೆಲ್ಲರೂ ಒಂದೆಂದು ತಿಳಿದು ಸಹಯೋಗ ಮತ್ತು ಸಹಬಾಳ್ವೆ ನಡೆಸುವಂತೆ ಪ್ರೇರಿಸುವುದೇ ಸಾಮಾನ್ಯ ಧರ್ಮ. ಈ ಸಾಮಾನ್ಯ ಧರ್ಮದ ಮೂಲತತ್ವವೇ 'ದಯೆ'. 'ದಯೆಯೆ ಧರ್ಮದ ಮೂಲವಯ್ಯ' ಎಂದು ಬಸವಣ್ಣನವರು ಹೇಳಿದರು. ಇದನ್ನೇ 'ಕರುಣೆ' ಯೆಂದು ಬೋಧಿಸಿದರು ಬುದ್ಧದೇವ. 'ಅಹಿಂಸಾ ಪರಮೋಧರ್ಮಃ' ಎಂದರು ವರ್ಧಮಾನ ಮಹಾವೀರರು. ಮಾನವರಲ್ಲಿ ಅನುಕಂಪವನ್ನು ತೋರುವುದೇ ಅಲ್ಲಾನ ಪೂಜೆಯೆಂದು ಪೈಗಂಬರ್ ತಿಳಿದಿದ್ದರು. ಹೀಗೆ ಎಲ್ಲಾ ದಾರ್ಶನಿಕರು ಮತ್ತು ಮಹಿಮಾ ಪುರುಷರು ದಯೆಯ ಮಹತ್ವವನ್ನು ಒತ್ತಿ ಒತ್ತಿ ಹೇಳಿರುತ್ತಾರೆ. ಸಮಾಜವೆಂಬ ಕಟ್ಟಡ ಸುಸ್ಥಿರವಾಗಿರಬೇಕಾದರೆ ಅದಕ್ಕೆ ದಯೆಯೆಂಬ ಸಾಮಾನ್ಯ ಧರ್ಮಾಚರಣೆಯ ತತ್ತ್ವ ಅಡಿಗಳಾಗಿರಬೇಕು. ಇನ್ನು ವಿಶೇಷ ಧರ್ಮವನ್ನು ಕುರಿತು ಹೇಳಬೇಕಾದರೆ ಧರ್ಮದ ಸೂಕ್ಷ್ಮಾತಿ ಸೂಕ್ಷ್ಮಗಳ ವಿವರಣೆಯನ್ನು ಕೊಡಬೇಕಾಗುತ್ತದೆ. ಇದರ ಅಗತ್ಯ ಇಲ್ಲಿ ಇಲ್ಲವೆಂದು ಭಾವಿಸಿ, ಯಾವ ಧರ್ಮವೇ ಆಗಲಿ, ಯಾವುದೇ ಧರ್ಮದ ಮಾರ್ಗಗಳೇ ಇರಲಿ, ಗುರಿ ಮಾತ್ರ ಒಂದೆ - ಮಾನವ ಕಲ್ಯಾಣ. ಧರ್ಮದ ಮತ್ತು ಧರ್ಮವನ್ನೇ ನಂಬಿದವರ ಗುರಿಯೂ ಸಹ ಇದೇ ಎಂದು ನಾವು ಭಾವಿಸಿದ್ದೇವೆ.

ಇನ್ನು ಧರ್ಮಸ್ಥಳದಲ್ಲಿ ಈಗ ಶ್ರೀ ವೀರೇಂದ್ರ ಹೆಗ್ಗಡೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಧರ್ಮ ಸಮ್ಮೇಳನಗಳು ನಾಡಿನಾದ್ಯಂತ ಪ್ರಶಂಸೆಗೊಳಗಾಗಿವೆ. ಹೆಗ್ಗಡೆಯವರ ಸೃಜನಶೀಲತೆ ಸೌಜನ್ಯದೊಂದಿಗೆ ಕೂಡಿ ಅಪೂರ್ವವಾದುದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ - ಎಂದು ಧಾರಾಳವಾಗಿ ಹೇಳಬಹುದು. ಅವರು "ಇದರಲ್ಲಿ ನಮ್ಮದೇನೂ ಇಲ್ಲ... ಎಲ್ಲ ಮಂಜುನಾಥನ ಕೃಪೆ" ಎಂದು ಹೇಳುವಾಗ ಅವರು ಪರಮಾತ್ಮನಲ್ಲಿ ಇಟ್ಟಿರುವ ಅಚಲ ವಿಶ್ವಾಸ ಮತ್ತು ಧರ್ಮಶ್ರದ್ಧೆಗಳು ಎದ್ದು ಕಾಣುತ್ತವೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ಹೆಗ್ಗಡೆಯವರು ಮಂಜುನಾಥನ ಕೃಪೆಗೆ ಪಾತ್ರವಾದ ಶಕ್ತಿಯೆಂದರೆ ತಪ್ಪಾಗದು. ಶ್ರೀ ಕ್ಷೇತ್ರದಲ್ಲಿ ಈಗಾಗಲೇ ಕೈಗೊಂಡಿರುವ ವಿವಿಧ ಅಭಿವೃದ್ಧಿಶೀಲ ಕಾರ್ಯಕ್ರಮಗಳಲ್ಲಿ ಬಡವರ, ದೀನದಲಿತರ ಸಮಸ್ಯೆಗಳ ಪರಿಹಾರಕ್ಕೆ ಒತ್ತುಕೊಟ್ಟಿರುವುದು ನಿಜಕ್ಕೂ ಶ್ಲಾಘನೀಯವಾದ ವಿಚಾರ. ಇಲ್ಲಿ ಮಂಜುನಾಥನ ಪ್ರಸಾದ ಪವಾಡಗಳನ್ನೇ ಮಾಡುತ್ತಿದೆ ಎನ್ನಬಹುದು.

"ಕುಕ್ಷೌ ತಿಷ್ಠತಿ ಯಸ್ಯಾನ್ನಂ ತಸ್ಯ ಬುದ್ಧಿಃ ಪ್ರಜಾಯತೇ" ಎನ್ನುವಂತೆ ಇಲ್ಲಿಯ ಪವಿತ್ರ ಪ್ರಸಾದವನ್ನು ಸ್ವೀಕರಿಸಿದವರೆಲ್ಲ ಪುಣ್ಯಜೀವಿಗಳಾಗುತ್ತಾರೆಂಬುದರಲ್ಲಿ ಸಂಶಯವಿಲ್ಲ. 'ಧರ್ಮೋ ಧರ್ಮಸ್ಥಳಾಂತತರ್ಗತಃ' ಎನ್ನುವಂತೆ ಇಲ್ಲಿ ಧರ್ಮ





ನೆಲೆಯೂರಿ ನಿಂತಿದೆ. ಇದರ ಬಹುಮುಖ ಪ್ರಕಾಶವೇ ಶ್ರೀ ಹೆಗ್ಗಡೆಯವರು ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳು. ಧರ್ಮದ ಅವನತಿ ಮತ್ತು ಧಾರ್ಮಿಕ ಮನೋಭಾವದ ಅಭಾವವನ್ನು ಕುರಿತು ಮಾನ್ಯ ಮಂತ್ರಿಗಳು ಹೇಳುತ್ತಾ ಧರ್ಮಪೀಠಗಳು ಮತ್ತು ಮಠಮಾನ್ಯಗಳು ಈ ದಿಕ್ಕಿನಲ್ಲಿ ಈಗ ಮಾಡಬೇಕಾದುದು ಬಹಳವಿದೆ ಎಂದರೆ ಈ ಮಾತನ್ನು ನಾವು ಸ್ವಾಗತಿಸುತ್ತೇವೆ. ಅವರು ಕೇಳಿಕೊಂಡಂತೆ ಗುರು ವರ್ಗದವರು ಈ ಜವಾಬ್ದಾರಿಯನ್ನು ಹೊರುವಲ್ಲಿ ಎಲ್ಲರೂ ಒಂದಾಗಿ ಮುಂದೆ ಬರುತ್ತಾರೆಂದು ಭಾವಿಸುತ್ತೇವೆ. ಧರ್ಮದ ಪುನರುತ್ಥಾನಕ್ಕೆ ಎಲ್ಲರೂ ಅವರವರ ಕೆಲಸಕಾರ್ಯಗಳನ್ನು ಶ್ರದ್ಧೆ, ನಿಷ್ಠೆಯಿಂದ ಮಾಡುವುದು ಮೊದಲ ಹೆಜ್ಜೆ. "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ" ಕೆಲಸ ಮಾಡಿಯೇ ನೂರು ವರುಷ ಬದುಕಬೇಕು. ಈ ನಶ್ವರ ಬಾಳಿನಲ್ಲಿ ಧರ್ಮವೊಂದನ್ನು ಬಿಟ್ಟರೆ ಮಿಕ್ಕೆಲ್ಲ ಸಂಗ್ರಹಣೆಯೂ ವ್ಯರ್ಥ.

"ಅನಿತ್ಯಾನಿ ಶರೀರಾಣಿ ವಿಭವೊ ನೈವ ಶಾಶ್ವತಃ ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ" ಎನ್ನುವಂತೆ ಅಶಾಶ್ವತವಾದುದನ್ನು ಬಿಟ್ಟು ಶಾಶ್ವತವಾದುದರ ಕಡೆಗೆ ಮನ ಒಲಿಯಬೇಕು.

ಧನಾನಿ ಭೂಮೌ ಪಶವಶ್ಚೈಗೋಷ್ಠೇ
ಭಾರ್ಯಾ ಗೃಹದ್ವಾರಿ. ಜನಸ್ಮಶಾನೇ
ದೇಹಶ್ಚಿತಾಯಂ ಪರಲೋಕ ಮಾರ್ಗೇ
ಕರ್ಮಾನುಗೋ ಗಚ್ಛತಿ ಜೀವ ಏಕಃ

ಧನಕನಕ ಪತಿ-ಪತ್ನಿ, ಬಂಧು ಬಳಗ ಮತ್ತು ಕೊನೆಗೆ ಈ ದೇಹವೂ ನಮ್ಮದಾಗಿ ಉಳಿಯುವುದಿಲ್ಲ. ಉಳಿಯುವುದಾದರೆ ವ್ಯಕ್ತಿ ತಾನು ನಡೆಸಿದ ಉತ್ತಮೋತ್ತಮ ಜೀವನ ಮತ್ತು ಸಂಗ್ರಹಿಸಿದ ಧರ್ಮ.

ಇದೇ ಸಂದರ್ಭದಲ್ಲಿ ಬಿಡುಗಡೆಗೆಂದು ರಚಿತವಾಗಿರುವ 'ಧರ್ಮಸ್ಥಳದ ಮಂಜುನಾಥ', 'ಧರ್ಮವೀರ ರತ್ನವರ್ಮ ಹೆಗ್ಗಡೆ' ಮತ್ತು ಇಲ್ಲಿ ನಡೆಯುವ ಧರ್ಮ ಸಮ್ಮೇಳನಗಳ 'ಭಾಷಣಗಳ ಸಂಗ್ರಹ' - ಈ ಕೃತಿಗಳನ್ನು ಬಿಡುಗಡೆ ಮಾಡಲು ನಮಗೆ ಅತೀವ ಸಂತೋಷವಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಈ ಮೂರು ಕೃತಿಗಳು ಶ್ರೀ ಕ್ಷೇತ್ರ ಧರ್ಮಸ್ಥಳದ ವಿವಿಧ ಮುಖಗಳನ್ನು ಬಿಂಬಿಸುತ್ತವೆ. ರಸಿಕ ಪುತ್ತಿಗೆಯವರ "ಧರ್ಮಸ್ಥಳ ಮಂಜುನಾಥ" ನಿಜಕ್ಕೂ ಅರ್ಥಪೂರ್ಣ ಕೃತಿ. ಈ ಕ್ಷೇತ್ರದ ಇತಿಹಾಸ ದೊಂದಿಗೆ ಇಲ್ಲಿಯ ದೈವೀಶಕ್ತಿಯ ಮತ್ತು ದೇವತೆಗಳ ಸಮಗ್ರ ಪರಿಚಯವನ್ನು ಈ ಕೃತಿ ಮಾಡಿಕೊಡುತ್ತದೆ. ಇಲ್ಲಿ ಕಾರ್ಯಸೂತ್ರಗಳನ್ನು ಹಿಡಿದ ಹೆಗ್ಗಡೆಯವರಿಗೆ ಮಂಜುನಾಥನ ಮತ್ತು ದೇವತೆಗಳ ಪೂರ್ಣ ಅನುಗ್ರಹವಿರುವುದು ಎಷ್ಟು ನಿಜವೊ, ಅವರು ಅಂದರೆ ಹೆಗ್ಗಡೆಯವರೂ ಸಹ ಧರ್ಮನಿಷ್ಠರಾಗಿರಬೇಕೆಂಬ ದೇವತೆಗಳ







ಆದೇಶವೂ ಅಷ್ಟೇ ನಿಜ. ಈ ಕೃತಿಯಲ್ಲಿ ಒಂದೆಡೆ ಬರುವ, "ಕಡಿದ ಶಬ್ದ ಕೇಳಲಿಕ್ಕಿಲ್ಲ, ಮರ ಬಿದ್ದದ್ದೇ ಗೊತ್ತಾದೀತು..." ಎನ್ನುವ ನುಡಿಗಳು ಎಷ್ಟು ಅರ್ಥಪೂರ್ಣವೊ ಅಷ್ಟೇ ಎಚ್ಚರಿಕೆಯ ಧ್ವನಿಪೂರ್ಣವೂ ಹೌದು. ಹೆಗ್ಗಡೆಯವರು ಹಲವು ಹತ್ತು ಸದ್ಗುಣಗಳು ಸೇರಿ ಧರ್ಮವನ್ನು ಪ್ರತಿನಿಧಿಸುವವರಾಗಿದ್ದಾರೆ. ಒಟ್ಟಿನಲ್ಲಿ ಈ ಕೃತಿ ನಿಜಕ್ಕೂ ಓದಿ ಮನನ ಮಾಡಬೇಕಾದ ಒಂದು ರಚನೆ. ಶ್ರೀ ರತ್ನವರ್ಮ ಹೆಗ್ಗಡೆಯವರನ್ನು ಕುರಿತ ಎರಡನೇ ಕೃತಿಯೂ ಒಬ್ಬ ಅಪೂರ್ವ ಸಾಧಕನನ್ನು ಕುರಿತ ರಚನೆ. ಶ್ರೀ ಕೆ.ಎನ್. ಭಟ್‌ರವರ ಈ ಹೊತ್ತಿಗೆ ದಿವಂಗತ ರತ್ನವರ್ಮ ಹೆಗ್ಗಡೆಯವರ ಜೀವನವನ್ನು ಇಂದಿನವರಿಗೆ ಉಪಯೋಗವಾಗುವಂತೆ ರಚನೆಯಾಗಿರುವುದು ಒಂದು ವಿಶೇಷ. ಇಲ್ಲಿ ಭಗವಾನ್ ಬಾಹುಬಲಿಯ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ನಡೆದ ಘಟನೆಗಳ ವಿವರಣೆ ಕಣ್ತೆರೆಸುವಂತವು. ಹೀಗೆ 'ಭಾಷಣಗಳ ಸಂಗ್ರಹ' ವೂ ಸೇರಿದಂತೆ ಈ ಮೂರೂ ಕೃತಿಗಳು ಅಭ್ಯಾಸಯೋಗ್ಯವಾದುವುಗಳು. ಇವುಗಳಿಂದ ಜನತೆಗೆ ಉಪಯೋಗವಾಗುತ್ತದೆಂದು ನಾವು ಭಾವಿಸುತ್ತೇವೆ.

ಕಡೆಯದಾಗಿ ನಡೆಯಲ್ಲಿ, ನುಡಿಯಲ್ಲಿ ಸತ್ಯನೀತಿಗಳು ಎಲ್ಲರ ಜೀವನದಲ್ಲಿ ತುಂಬಿರಲಿ. ಧರ್ಮವು ಯಾರನ್ನೂ ಕೈಬಿಡದಿರಲಿ ಎಂದು ಹಾರೈಸಿ ನಮ್ಮ ಎರಡು ಮಾತುಗಳನ್ನು ಮುಗಿಸುತ್ತೇವೆ.

☐

ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ,
ಹಿಂಗಿತ್ತು ಶಿವಲೋಕ ಇನ್ನೆಲ್ಲಿಯದಯ್ಯಾ.
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಸಮಯೋಚಿತವನಱಿಯದೆ ಉದರ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ ಕೂಡಲಸಂಗಮದೇವ.

- ಬಸವಣ್ಣ

# ಮಾನವ ಕಲ್ಯಾಣದ ಕುಲದೀಪ ಬಸವಣ್ಣ



ಬಸವಣ್ಣನವರ ಎಂಟನೆಯ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಮಹತ್ತರವಾದ ಸಮಾರಂಭದಲ್ಲಿ ನಾವು ಸಮಾವೇಶಗೊಂಡಿದ್ದೇವೆ. ಬಸವಣ್ಣನವರು ಎಂಟುನೂರು ವರ್ಷಗಳ ಹಿಂದೆ ಕರ್ಣಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಸಾಮಾಜಿಕ ಮತ್ತು ಧಾರ್ಮಿಕ ರಂಗಗಳಲ್ಲಿ ಅಭೂತಪೂರ್ವವಾದ ಕ್ರಾಂತಿಯನ್ನು ಸಾಧಿಸಿದರು. ಬಸವಣ್ಣನವರ ಆ ಸಾಧನೆಯಲ್ಲಿ ಈ ಸಂಗಮ ಕ್ಷೇತ್ರವು ಬಹಳ ಮಹತ್ವಪೂರ್ಣವಾದ ಸ್ಥಾನವನ್ನು ಪಡೆದಿದೆ. ಅವರು ಕಲ್ಯಾಣದಲ್ಲಿ ಸಾಧಿಸಿದ ಅದ್ಭುತ ಸಾಧನೆಗೆ ಇಲ್ಲಿ ಭದ್ರವಾದ ತಳಹದಿಯನ್ನು ಹಾಕಿಕೊಂಡರು. ಅವರ ಸಾಧನೆಯು ಇಲ್ಲಿ ಪ್ರಾರಂಭವಾಯಿತು. ಕೃಷ್ಣ-ಮಲಪ್ರಭೆಯರ ಈ ಪವಿತ್ರ ಸಂಗಮದ ಸನ್ನಿವೇಶದಲ್ಲಿ ಈಶಾನ್ಯ ಗುರುಗಳ ನೇತೃತ್ವದಲ್ಲಿ ಅವರ ವಿದ್ಯಾಭ್ಯಾಸ ಸಾಧನೆ, ತಪಸ್ಸುಗಳು ಬೆಳೆದು ಉಜ್ವಲ ನೂತನ ಜೀವನ ದರ್ಶನವು ರೂಪುಗೊಂಡಿತು.

---

ಕೂಡಲಸಂಗಮದಲ್ಲಿ ನಡೆದ ಬಸವಣ್ಣನವರ ಎಂಟನೇ ಶತಮಾನೋತ್ಸವ ಸಮಾರಂಭದಲ್ಲಿ ಮಾಡಿದ ಆಶೀರ್ವಚನ







ಅಂದಿನ ಸಮಾಜವನ್ನು ಪೀಡಿಸುತ್ತಿದ್ದ ಸಮಸ್ಯೆಗಳನ್ನು ಕಂಡು ಮರುಗುತ್ತಾ ಈ ನದಿಗಳ ದಡದ ಮೇಲೆ ಬಸವಣ್ಣನವರೇ ಓಡಾಡಿರಬೇಕು. ಸಂಗಮನ ಎದುರಿನಲ್ಲಿ ತಮ್ಮ ದುಃಖವನ್ನು ತೋಡಿಕೊಂಡಿರಬೇಕು. ಗುರುಗಳ ಮಾರ್ಗದರ್ಶನದಿಂದ ಮುಂದುವರಿದಿರಬೇಕು. ಅಂತಹ ಪವಿತ್ರವಾದ ಈ ಕ್ಷೇತ್ರದಲ್ಲಿ ಆ ಮಹಾಮಹಿಮಸ್ಮರಣೆಯ ಶರಣ ಸಂಪ್ರದಾಯದಲ್ಲಿ ಅಂಗಗುಣಗಳನ್ನು ಬಯಲು ಮಾಡಿ ಲಿಂಗಗುಣ ಹೊಂದಿ ಲಿಂಗದೇಹಿಗಳಾದ ಮಹಾಶರಣರು ಬಯಲು ಬಯಲಿನೊಳು ಬೆರೆತಂತೆ, ಲಿಂಗದೊಳು ಐಕ್ಯವಾದ ಸ್ಥಾನಕ್ಕೆ ಬಹು ವಿಶೇಷವಾದ ಸ್ಥಾನಮಾನಗಳನ್ನು ಹಾಗೂ ಪಾವಿತ್ರ್ಯವನ್ನು ಕೊಟ್ಟಿರುತ್ತಾರೆ. ಇವುಗಳನ್ನು ಜಾಗ್ರತ ಸ್ಥಾನಗಳೆಂದು ಪಾರಿಭಾಷಿಕ ಶಬ್ದದಿಂದ ಗೌರವಿಸಿದ್ದಾರೆ. ನಿದರ್ಶನಕ್ಕೆ ಮಹಾಜಂಗಮ ಪುಂಗವರಾದ ಶ್ರೀ ಶ್ರೀ ಸಿದ್ಧಲಿಂಗೇಶ್ವರರು ಲಿಂಗದೊಳಗಾದ ಎಡೆಯೂರು, ಮಹಾನುಭಾವಿಗಳಾದ ಶ್ರೀ ಚನ್ನಬಸವಣ್ಣನವರು ಲಿಂಗದೊಳಗಾದ ಪರಮ ಪವಿತ್ರ ಸ್ಥಳವಾದ ಉಳವಿ- ಇವುಗಳು ಸುಕ್ಷೇತ್ರಗಳು ಹಾಗೂ ಜಾಗ್ರತಸ್ಥಾನಗಳೆಂದು ಸುಪ್ರಸಿದ್ಧವಾಗಿವೆ. ಅಂತೆಯೆ ಭಕ್ತಿಭಂಡಾರಿಯವರೂ ವೀರಶೈವ ಧರ್ಮ ವಿಶ್ವಧರ್ಮವಾಗುವಂತಹ ಶ್ರೇಷ್ಠತತ್ತ್ವಗಳನ್ನು ನಡೆಯಿಂದ ಅರುಹಿದ ಅಣ್ಣನವರು ಲಿಂಗದೇಹಿಗಳಾಗಿ ಕೂಡಲ ಸಂಗಮದಲ್ಲಿ ಐಕ್ಯವಾದ ಈ ಪರಮಪವಿತ್ರ ಸ್ಥಾನ ಸುಕ್ಷೇತ್ರವಾಗಿದೆ, ಜಾಗ್ರತ ಸ್ಥಾನವಾಗಿದೆ. ಇಂದಿನ ಸಮಾರಂಭವು ಈ ಮಹಾಸ್ಥಾನದಲ್ಲಿ ನಡೆಯುವುದು ಔಚಿತ್ಯಪೂರ್ಣವಾಗಿದೆ.

ಶರಳರ ದೃಷ್ಟಿಯಲ್ಲಿ ಈ ಉತ್ಸವವನ್ನು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಆಚರಿಸುತ್ತಿರುವುದು ದೈವಯೋಗವೆಂದೇ ನಾವು ಭಾವಿಸಿದ್ದೇವೆ. ಸತ್ವಶಾಲಿಯಾದ ದೈವಿಕ ಭಾವನೆಗಳಿಗೆ ಅಳಿವಿಲ್ಲವೆಂಬುದಕ್ಕೆ ಮತ್ತು ಬಸವಣ್ಣನವರ ಜೀವನದರ್ಶನ ಸಾಧನೆ, ತತ್ವಗಳು ಅಂದಿಗೆ ಮಾತ್ರವಲ್ಲ; ಇಂದಿಗೂ ಮಾರ್ಗದರ್ಶಕವಾಗಬಲ್ಲುವು ಎಂಬುದಕ್ಕೆ ಇಂದಿನ ಈ ಉತ್ಸವವು ಉಜ್ವಲವಾದ ಸಾಕ್ಷಿಯಾಗಿದೆ.

ಶರಣರ ದೃಷ್ಟಿಯಲ್ಲಿ ಬಸವಣ್ಣನವರು ಬೇರೆಯಲ್ಲ, ಶಿವನು ಬೇರೆಯಲ್ಲ. ಅವರು ನಿಜವಾಗಿಯೂ "ಕಲಿಯುಗದ ಎರಡನೆ ಮುಕ್ಕಣ್ಣ."

> ಅಸಮ ನೇತ್ರನೆ ಬಸವನಾಮದಿ ಎಸೆದನಲ್ಲದೆ
> ಬಸವನು ಇಳೆಗೆ ಉದಯಿಸಿದ ಮಾತ್ರದೊಳು
> ಆತನಂ ನರಜಾತನೆನಬಹುದೆ?

ಶಿವನಿಗೂ ಬಸವನಿಗೂ ಅಂತರವಿಲ್ಲ. ಲೋಕಕಲ್ಯಾಣಕ್ಕಾಗಿ ಶಿವನು ಕೈಕೊಂಡ ಲೀಲೆಯೇ ಬಸವೇಶ್ವರನು ಎಂದು ಹೇಳಬಹುದು.





ವ್ಯಕ್ತಿಯಾಗಿ ಬಸವಣ್ಣನವರು ಒಂದು ನಾಡಿನ ಪರಿಮಿತಿಗೆ ಒಳಗಾಗಿದ್ದರೂ ಆಧ್ಯಾತ್ಮಿಕ ಶಕ್ತಿಯಾಗಿ ಅವರು ಇಡೀ ವಿಶ್ವಕ್ಕೆ ಸೇರಿದವರು. ಅವರ ಆಚಾರ-ವಿಚಾರಗಳು, ನಡೆ-ನುಡಿಗಳು, ತತ್ತ್ವಬೋಧೆಗಳು ಯಾವ ಒಂದು ಜನಾಂಗಕ್ಕೂ ದೇಶಕ್ಕೂ ಸೀಮಿತವಾಗದೆ, ಸಂಪ್ರದಾಯದ ಸಂಕೋಲೆಯಿಂದ ಬಂಧಿತವಾಗದೆ, ವಿಶ್ವದ ಎಲ್ಲರಿಗೂ ಅನುಸರಣೀಯವಾದುವುಗಳು.

'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್|

ಎಂದು ಹೇಳಿರುವಂತೆ ಬಸವಣ್ಣನವರು ಅವತರಿಸಿದ ಹನ್ನೆರಡನೆಯ ಶತಮಾನದಲ್ಲಿ ಭರತಖಂಡದ ಧಾರ್ಮಿಕ-ಸಾಮಾಜಿಕ ಸ್ಥಿತಿಗತಿಗಳು ಅವರ ಕಾರ್ಯಕ್ಕೆ ಪ್ರತಿಕೂಲಗಳಾಗಿಯೇ ಇದ್ದುವು. ಹಿಂದೂ ಸಮಾಜದಲ್ಲಿನ ಬಹುದೇವತ್ವ, ಜಾತೀಯತೆ, ಮೂರ್ತಿಪೂಜೆ, ಸಂಕುಚಿತ ದೃಷ್ಟಿ-ಇತ್ಯಾದಿಗಳನ್ನು ತೀವ್ರವಾಗಿ ಪ್ರತಿಭಟಿಸಿ ಸ್ವಾತಂತ್ರ್ಯದ, ಸಹಿಷ್ಣುತೆಯ, ಏಕೇಶ್ವರವಾದದ ಸರ್ವಸಮಾನತೆಯ ಹೊಸ ಮೌಲ್ಯಗಳನ್ನು ಆಚರಣೆಗೆ ತರುವುದೇ ವಿಶ್ವಧರ್ಮದ ತಿರುಳೆಂದು ದಿವ್ಯವಾದ ಸಂದೇಶವನ್ನು ಸಾರಿದೆ. ವಿಶ್ವಬಂಧು ಬಸವೇಶ್ವರರ ಸ್ಥಾನವು ವಿಶ್ವದ ವಿಭೂತಿಗಳ ಸಾಲಿನಲ್ಲಿ ಉನ್ನತವಾಗಿದೆ.

ಬಸವಣ್ಣನವರಿಗೆ ಅನುಭಾವವೇ ಪ್ರವೃತ್ತಿಯಾಗಿ, ಸಾಧನೆಯೇ ವೃತ್ತಿಯಾಗಿ, ವಾದಗಳನ್ನು ಹೂಡಿ ಸಿದ್ಧಾಂತಗಳನ್ನು ಸ್ಥಾಪಿಸುವ ಪಂಡಿತಪ್ರತಿಷ್ಠೆಯು ನಿವೃತ್ತಿಯಾಗಿತ್ತು. ಅದರಿಂದಾಗಿ ಬಸವಣ್ಣನವರು ಮಂಡಿಸಿದ ಸಿದ್ಧಾಂತಗಳು ಗ್ರಾಂಥಿಕ ರೂಪದಿಂದ ನಮಗೆ ದೊರೆಯದೇಹೋದರೂ- ಅವರ ಜೀವನವನ್ನೂ ಆ ಜೀವನದ ಸೂತ್ರಗಳಂತಿರುವ ಅವರ ವಚನಗಳನ್ನೂ ಅವಲೋಕಿಸಿದರೆ ನಮಗೆ ಅವರ ತತ್ತ್ವದ ಬಗ್ಗೆ ಒಂದು ಸ್ಪಷ್ಟವಾದ ಕಲ್ಪನೆ ಮೂಡುವುದು ಸಹಜ.

ದೇವನೊಬ್ಬ-ನಾಮ ಹಲವು
ಕಾಯಕವೇ ಕೈಲಾಸ
ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ
ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ,
ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ದಯವೇ ಧರ್ಮದ, ಮೂಲವಯ್ಯಾ!
ದ್ವಿಜ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರನ್ನೆಲ್ಲಾ ಒಂದೇ ಎಂಬೆ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು
ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ







ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ
ಆಚಾರವೇ ಸ್ವರ್ಗ, ಅನಾಚಾರವೇ ನರಕ
ಅರಿದರೆ ಶರಣ, ಮರೆದರೆ ಮಾನವ

ಎಂದು ಮುಂತಾಗಿ ಬೋಧಿಸಿ ಲೋಕಕಲ್ಯಾಣವನ್ನೆಸಗಿ ಲೋಕಮಾನ್ಯ ವ್ಯಕ್ತಿಯಾಗಿದ್ದಾರೆ. ವಿಶ್ವಧರ್ಮದ ಸಾರವನ್ನು ತಮ್ಮ ಭವ್ಯಬಾಳಿನಲ್ಲಿ ಅಳವಡಿಸಿಕೊಂಡು ಅದನ್ನು ಸರಳವಾಗಿ ಪರಿಣಾಮಕಾರಿಯಾಗಿ ಜನತೆಗೆ ಉಪದೇಶಿಸಿ ಮಾನವಕಲ್ಯಾಣದ ಹಾದಿಯನ್ನು ತೋರಿಸಿ ಜನಮನದ ಅಚ್ಚುಮೆಚ್ಚಿನ ಅಣ್ಣನಾಗಿ ನೆಲಸಿ ಅಮರರಾಗಿದ್ದಾರೆ.

ಸ್ವಾತಂತ್ರ್ಯ-ಸರ್ವಸಮಾನತೆಗಳು ಬಸವಣ್ಣನವರು ಸಾಧಿಸಿದ ಮಹಾ ಸಾಧನೆಗಳು. ಸಾಮಾಜಿಕ ಸಮಾನತೆ ಹಾಗೂ ಧಾರ್ಮಿಕ ಸಮಾನತೆಗಳು ಬಸವಣ್ಣನವರ ಕ್ರಾಂತಿಯ ಕಿಡಿಗಳು, ಮೇಲೇರುವವರನ್ನು ಧರ್ಮದ ನಿಚ್ಚಣಿಗೆಯಿಂದ ಮೇಲಕ್ಕೆ ಎತ್ತಿಕೊಳ್ಳುವ ಉದಾತ್ತ ದೃಷ್ಟಿಯ ಸಮಾನತೆ ಅದು, ಧಾರ್ಮಿಕ ಆಚರಣೆಗಳಲ್ಲಿಯೂ ಸ್ತ್ರೀಪುರುಷರಾದಿಯಾಗಿ ಸರ್ವರೂ ಸಮಾನರೆಂದು ಎಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ತಂದುಕೊಟ್ಟರು. ಒಬ್ಬೊಬ್ಬರೂ ತಮ್ಮ ತಮ್ಮ ಆಧ್ಯಾತ್ಮಿಕ ಸಾಧನೆಯನ್ನೂ ಪೂಜಾದಿ ಕಾರ್ಯಗಳನ್ನೂ ತಾವೇ ಮಾಡಿಕೊಳ್ಳಬೇಕು, ಪೂಜೆ ಮಾಡುವುದೇ ಒಂದು ವರ್ಗವಾದಾಗ ಧಾರ್ಮಿಕ ತಾರತಮ್ಯ ಏರ್ಪಡುತ್ತದೆ. ಪೂಜೆಯು ವೈಯಕ್ತಿಕವಾದ ಧಾರ್ಮಿಕ ವಿಧಿ. ದುಡಿಮೆ, ವಿಶ್ರಾಂತಿ ಮತ್ತು ಪೂಜೆ ಇವು ಎಲ್ಲರಿಗೂ ಆವಶ್ಯಕ. ದುಡಿಯದೇ ತಿನ್ನುವ ಹಕ್ಕು ಯಾರಿಗೂ ಇಲ್ಲ. ದುಡಿಯುವುದೇ ಒಂದು ವರ್ಗ, ದುಡಿಸುವುದೇ ಇನ್ನೊಂದು ವರ್ಗ, ಪೂಜೆ ಮಾಡುವುದೇ ಮತ್ತೊಂದು ವರ್ಗ ಹೀಗಾಗಬಾರದು. ಇದೇ ಸಮಾಜದಲ್ಲಿ ವಿಷಮತೆಗೆ ಕಾರಣವಾಗುತ್ತದೆ ಎಂದು ಹೇಳಿ ಒಂದೇ ಸೂತ್ರದಿಂದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಮಾನತೆಗಳ ಸಾಧನೆಗೆ ಮಾರ್ಗವನ್ನು ತೋರಿಸಿದರು. "ಕಾಯಕವೇ ಕೈಲಾಸ" ಎಂಬ ಮಾತು ಈ ಎಲ್ಲ ಅರ್ಥಗಳನ್ನೂ ಒಳಗೊಂಡಿದೆ ಎಂಬುದನ್ನು ಅವರ ವಚನಗಳನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಿದವರು ಅರಿಯಬಹುದಾಗಿದೆ.

ಇನ್ನೊಬ್ಬರಿಗೆ ಆದರ್ಶವನ್ನು ಹೇಳುವವೆನ್ನುವವನು ತಾನು ಮೊದಲು ಉನ್ನತ ಧ್ಯೇಯಗಳಿಂದ-ವಿನಯ ಸಂಪತ್ತಿಯಿಂದ ಆದರ್ಶನೀಯನಾಗಬೇಕು. ಆಗ ಅವನ ಕಡೆ ಜನ ಭಕ್ತಿ ಗೌರವಗಳಿಂದ ತಿರುಗುವರು. ಕ್ರಮವಾಗಿ ಅವನ ಆದರ್ಶಗಳನ್ನು ಶ್ರದ್ಧೆಯಿಂದ ತಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳುವ ವಿಶ್ವಾಸವನ್ನು ತೋರುವರು. ಹನ್ನೆರಡನೆಯ ಶತಮಾನದಲ್ಲಿ ಸಾಹಿತ್ಯ-ಸಾಮಾಜ-ಆಧ್ಯಾತ್ಮ ಮುಂತಾದ ನಾನಾ ಕ್ಷೇತ್ರಗಳಲ್ಲಿ ಕ್ರಾಂತಿಕಾರಿಯಾದ ಸುಧಾರಣೆಗಳನ್ನು ತಂದ ಬಸವಣ್ಣನವರು ವಿನಯದ ಸಾಕಾರಮೂರ್ತಿಗಳಾಗಿದ್ದರು. ಅವರು ಆಡಿರುವ ಈ ಮುಂದಣ ವಚನ ಸಮಾಜ ಧುರೀಣರನ್ನೇ ಕುರಿತು ಹೇಳಿದಂತಿದೆ.

"ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ
ಒಳಗೆ ಕೆಚ್ಚಿಲ್ಲದಿರಬೇಕು,
ಮೇಲಾದ ಫಲವ ನಮ್ಮವರು ಬೀಜಸಹಿತ ನುಂಗಿದರು"

ಮಹಾಕಾರ್ಯಗಳನ್ನು ಈಡೇರಿಸಬೇಕಾದರೆ ನಯ-ವಿನಯಗಳು ಮಹತ್ಪ್ರಮಾಣದಲ್ಲಿ ಇರಬೇಕೆನ್ನುವುದು-ಯಾವ ವ್ಯವಹಾರ ವಿಚಕ್ಷಣನಿಗಾದರೂ ಹೊಳೆಯದಿರದು. ಆದರೆ ಅದು ತ್ರಿಕರಣಪೂರ್ವಕವಾಗಿರಬೇಕಷ್ಟೆ. ಬಸವಣ್ಣನವರು ಜೀವನದಲ್ಲಿ ಉನ್ನತ ಧ್ಯೇಯಗಳನ್ನು ಅನುಸರಿಸಿಕೊಂಡು ಹೋಗುವಾಗ ಬರಬಹುದಾದ ಕಷ್ಟ ಕಾರ್ಪಣ್ಯಗಳಿಗೆ ಅಂಜಿ ಧೈರ್ಯದಿಂದ ಹಿಂಜರಿದವರಲ್ಲ. ಕಾರ್ಯನಿರತನಾಗಿರುವಾಗ ಶಿರ-ಹರಿದು ಬಿದ್ದರು ಶಿವ ನಿನಗರ್ಪಿತ ಎಂಬ ಹೃದಯಪಾಕ-ನಿಶ್ಚಲ ನಿರ್ಭೀತಿ ಅವರದು. ಈ ವಿಧವಾದ ವಿನಯ-ಧೈರ್ಯಗಳ ಹದವನ್ನು ಜೀವನದಲ್ಲಿ ಯಾರು ಸಾಧಿಸಿಕೊಂಡಿರುವರೋ ಅಂತಹವರಿಗೆ ಬಸವಣ್ಣನವರ ಸಂದೇಶವನ್ನು ಪ್ರಚಾರ ಮಾಡಲಾಗಲಿ, ಅವರ ಸಂದೇಶದಂತೆ ಆಚರಿಸಲಾಗಲಿ ಸಾಧ್ಯವಾದೀತು.

ಮಹಾನುಭಾವಿ ಬಸವಣ್ಣನವರು ಕಲ್ಯಾಣಪಟ್ಟಣದ ಪ್ರಧಾನಿಯಾಗಿ ಸಮರ್ಥ ಆಡಳಿತಗಾರರಾಗಿದ್ದರು. ಅವರನ್ನು ಬಸವ ದಂಡಾಧೀಶ, ಬಸವ ದಂಡೇಶ, ದಂಡನಾಥಚೂಡಾಮಣಿ-ಎಂದು ಕರೆದಿದ್ದರೂ ಅವರೂ ಯುದ್ಧಪ್ರಿಯರಾಗಿರಲಿಲ್ಲ. ಶಾಂತಿಪ್ರಿಯರಾಗಿದ್ದರು. ಅಹಿಂಸಾಚರಣೆಯುಳ್ಳವರಾಗಿದ್ದರು.

ದಯವಿಲ್ಲದ ಧರ್ಮವದಾವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ

ಎಂದು ಅಹಿಂಸಾಧರ್ಮದ ಪತಾಕೆಯನ್ನು ಎತ್ತಿ ಹಿಡಿದರು. ಜಾತಿಭೇದವನ್ನು ಅಲ್ಲಗಳೆದಂತೆಯೇ ಗಂಡು-ಹೆಣ್ಣು, ಮೇಲು-ಕೀಳು, ಬಡವ-ಬಲ್ಲಿದ ಎಂಬ ಭೇದವನ್ನೂ ತೊಡೆದುಹಾಕಿ ವಿಶ್ವಭ್ರಾತೃತ್ವದ ಸೌಹಾರ್ದ ವಾತಾವರಣವನ್ನು ಕಲ್ಪಿಸಿದರು. ದೇವಭಾಷೆಯ ಜನವಾಣಿಯಾಗಿ ಸಾಮಾನ್ಯನ ಸಮೀಪಕ್ಕೆ ಇಳಿದು ಬಾರದಿದ್ದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿ ಕನ್ನಡ ಭಾಷಾಸಂಪತ್ತನ್ನು ಸಮೃದ್ಧಿಗೊಳಿಸಿದ ಸಾಹಿತ್ಯ ಸಾರ್ವಭೌಮರು ಅವರು.

ಬಸವಣ್ಣನವರು ಧರ್ಮಿಷ್ಠರು, ಸದ್ಗುಣಶೀಲರು, ವಿನಯವಂತರು, ಮಂತ್ರಿಯಾಗಿ ಜನತೆಯ ಸೇವೆ, ಸಮಾಜದ ಐಕ್ಯತೆಯ ಸಾಧನೆ, ಸತ್ಯಧರ್ಮಗಳನ್ನು ನೆಲೆಗೊಳಿಸುವುದು ತಮ್ಮ ಕರ್ತವ್ಯವೆಂದು ಅವರು ತಿಳಿದಿದ್ದರು. ಒಂದು ರಾಷ್ಟ್ರ, ಒಂದು ಭಾಷೆ, ಸಂಸ್ಕೃತಿ, ದೈವಭಕ್ತಿ-ಇವುಗಳನ್ನು ಮನಗಂಡಿದ್ದರು. ಕ್ರಾಂತಿಕಾರಕರಾಗಿ, ಸಮಾಜ ಸುಧಾರಕರಾಗಿ,





ಆರ್ಥಿಕ ತಜ್ಞರಾಗಿ, ರಾಜ್ಯದ ದಂಡಾಧೀಶರಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ಅವರು ಏರಿದ ಎತ್ತರವನ್ನು ಕಂಡಾಗ ಅದ್ಭುತ ಪವಾಡ ದರ್ಶನವಾಗುತ್ತದೆ. ಜಗತ್ತಿನ ಯಾವುದೇ ಮಹಾಯೋಗಿ, ಅನುಭಾವಿ ಏರಬಲ್ಲ, ಆಧ್ಯಾತ್ಮಿಕ ನಿಲವನ್ನು ಅವರು ಪಡೆದರು. ಇಹದಲ್ಲಿ ಮಗ್ನರಾಗಿದ್ದರೂ ಹೇಗೆ ಪರಿಪೂರ್ಣತೆಯನ್ನು ಪಡೆಯಬಹುದೆಂಬುದಕ್ಕೆ, ಇಲ್ಲಿ ಸಲ್ಲುವರು ಹೇಗೆ ಅಲ್ಲಿಯೂ ಸಲ್ಲುವರೆಂಬುದಕ್ಕೆ ಅವರ ಜೀವನ ಉಜ್ವಲ ಉದಾಹರಣೆಯಂತಿದೆ.

ಬಸವಣ್ಣನವರು ಸಾಧಿಸಿದ ಮತ್ತೊಂದು ಮಹತ್ಕಾರ್ಯವೆಂದರೆ ಅನುಭವ ಮಂಟಪದ ಸ್ಥಾಪನೆ. ಅವರ ಅನುಪಮವಾದ ವ್ಯಕ್ತಿತ್ವಕ್ಕೆ ಬಂದು ಅನುಭವ ಮಂಟಪದಲ್ಲಿ ಕಲೆತು ಆತ್ಮ ಜಿಜ್ಞಾಸೆಯಲ್ಲಿ ತೊಡಗಿ ಆತ್ಮಕಲ್ಯಾಣವನ್ನು ಸಾಧಿಸಿಕೊಂಡರು. ಕಲ್ಯಾಣವು 'ಬಸವ ತೀರ್ಥ'ವಾಯಿತು. ಜಂಗಮ ದಾಸೋಹ ನಿತ್ಯ ನಡೆಯಿತು. ಸರ್ವಸಮಾನತೆಯ ಭದ್ರವಾದ ಬುನಾದಿಯ ಮೇಲೆ, ಸದ್ಭಕ್ತಿ-ಸದಾಚಾರಗಳ ತಳಹದಿಯ ಮೇಲೆ ಸರ್ವಾಂಗಸುಂದರವಾದ ಆದರ್ಶ ಸಮಾಜ ರಚನೆಯಾಗತೊಡಗಿತು. ಎಲ್ಲ ಕಾಯಕಗಳಿಗೂ ಮಹತ್ವ ದೊರೆತು ಕಾಯಕದಲ್ಲಿಯೇ ಕೈಲಾಸವನ್ನು ಕಾಣುವ ಸ್ವಾವಲಂಬಿ ಸ್ವಯಂಪರಿಪೂರ್ಣ ಸಮಾಜವು ಉದಯವಾಗತೊಡಗಿತು.

ಬಸವಣ್ಣನವರ ಈ ಸ್ವಯಂಪರಿಪೂರ್ಣ ಸಮಾಜವು ಸ್ಥಿರತೆ ಪಡೆಯುವಷ್ಟರಲ್ಲಿ ಸಂಪ್ರದಾಯಸ್ಥ ಸ್ವಾರ್ಥಿಗಳ ಕಿಡಿಗೇಡಿತನವು ಬಸವ ಸಮಾಜ ರಚನೆಯ-ಮುಂದೆ ಬೆಳೆಯುವ ಮಹಾವೃಕ್ಷದ ಬುಡಕ್ಕೆ ಕೊಡಲಿ ಪೆಟ್ಟನ್ನು ಹಾಕಿತು. ಕೊಂಡೆಯರ ನುಡಿಗೆ ಕಿವಿಗೊಟ್ಟು ದೊರೆ ಬಿಜ್ಜಳನು ಶರಣರ ವಧೆಮಾಡಿಸಿದುದರಿಂದ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಧರ್ಮ, ರಾಜಕೀಯ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಕಾಯಕತತ್ತ್ವ-ಎಲ್ಲವನ್ನೂ ಕೂಡಿಕೊಂಡು ಒಂದು ಸ್ವಯಂಪರಿಪೂರ್ಣ ಸಮಾಜ ರಚನೆಗೆ ಕೈಹಾಕಿದ ಬಸವಣ್ಣನವರು ಕಲ್ಯಾಣದ ಕ್ರಾಂತಿಯಿಂದಾಗಿ ಕಲ್ಯಾಣವನ್ನು ತ್ಯಜಿಸಿದರು. ತಮ್ಮ ಮರ್ತ್ಯಲೋಕದ ಮಣಿಹ ಪೂರೈಸಿತೆಂದು ಮತ್ತೆ ಕೂಡಲ ಸಂಗಮಕ್ಷೇತ್ರಕ್ಕೆ ಬಂದು ಸಂಗನೊಳೈಕ್ಯವಾದರು.

ಬಸವಣ್ಣನವರದು ದೈವಿಕ ತೇಜಸ್ಸಿನಿಂದ ಕೂಡಿದ ಬಹು ಆಕರ್ಷಕವಾದ ಅಪೂರ್ವ ವ್ಯಕ್ತಿತ್ವ. ವಿನಯದಿಂದಲೇ ಇಡೀ ವಿಶ್ವವನ್ನು ಮಣಿಸುವ ಮಾಂತ್ರಿಕ ಶಕ್ತಿ ಅವರದು. ಆದುದರಿಂದಲೇ ಕಲ್ಯಾಣದಲ್ಲಿ ಅವರಿದ್ದ ಅಲ್ಪಕಾಲದಲ್ಲಿಯೇ ಅವರ ಕಾರ್ಯಕ್ಷೇತ್ರ ಇಡೀ ಭರತಖಂಡವನ್ನೇ ವ್ಯಾಪಿಸಿತು. ಎಂಟುನೂರು ವರ್ಷಗಳ ಹಿಂದೆ ಅದರಲ್ಲಿಯೂ ದೇಶಭಾಷೆಯಲ್ಲಿಯೇ ನಡೆದ ಈ ಆಂದೋಲನ ಭಾರತವನ್ನೆಲ್ಲಾ ವ್ಯಾಪಿಸಿದುದು ಅದ್ಭುತ ಪವಾಡವೇ ಸರಿ.

"ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ,
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು,
ಒತ್ತಿ ಹಿಡಿದರೆ ಭಕ್ತಿ ಎಂಬ ರಸವಯ್ಯಾ"

ಎಂದು ಹೇಳಿರುವ ಮಾತು ತುಂಬಾ ಅರ್ಥವತ್ತಾದುದು. ಬಸವನೆಂಬ ಬಳ್ಳಿ ಹೇಗೆ ಸರ್ವವ್ಯಾಪಿಯಾಯಿತೆಂಬುದನ್ನು ಚಿತ್ರವತ್ತಾಗಿ ಹೇಳುತ್ತಿದೆ, ಈ ಮಾತು. ಸಂಚಾರ ಸೌಲಭ್ಯಗಳಿಲ್ಲದ ಆ ಕಾಲದಲ್ಲಿ ಕಾಶ್ಮೀರದವರೆಗೂ ಆತನ ಕಾಯಕದ ಕೀರ್ತಿ ಹಬ್ಬಿ ಮಹದೇವ ಭೂಪಾಲನನ್ನೂ ಎಳೆದು ತಂದು ಮೋಳಿಗೆ ಮಾರಯ್ಯನಾಗಿ ಪರಿವರ್ತಿಸಿದ ರೀತಿಯಲ್ಲಿ ಬಸವಣ್ಣನವರ ಶಕ್ತಿಯನ್ನು ಊಹಿಸಿಕೊಳ್ಳಬಹುದಾಗಿದೆ.

ಬಸವಾದಿ ಪ್ರಮಥರು ತಮ್ಮ ಧ್ಯೇಯ ಸಾಧನೆಗಾಗಿ ಜಯಾಪಜಯಗಳೇನೇ ಇರಲಿ, ಹಿಡಿದ ಕಾರ್ಯದಲ್ಲಿ ಧೀರರಾಗಿ, ಮರಣವೇ ಮಹಾನವಮಿ ಎಂದು ಹೇಳುತ್ತ ತತ್ತ್ವನಿಷ್ಠರಾಗಿ ಹೋರಾಡಿದವರು. ಅವರು ಆಚರಿಸಿ ತೋರಿದ ಸರ್ವಸಮಾನತೆ ಸ್ತ್ರೀ ಸ್ವಾತಂತ್ರ್ಯ, ಕಾಯಕನಿಷ್ಠೆ, ಅಸ್ಪೃಶ್ಯರ ಉದ್ಧಾರ, ವಿಶ್ವಬಂಧುತ್ವ-ಈ ಮೊದಲಾದ ತತ್ತ್ವಗಳು ರಾಜಕೀಯ ಶಾಸನಗಳಾಗಿ ಎಂಟುನೂರು ವರ್ಷಗಳ ನಂತರವೂ ಪ್ರಚಾರವಾಗುತ್ತ ಕೃತಿಯಲ್ಲಿ ಕಾಣುತ್ತಿರುವುದು ಬಸವತತ್ತ್ವದ ಹಿರಿಮೆಗೆ ಸಾಕ್ಷಿಯಾಗಿದೆ.

ಶರಣರು ಅಳಿದರೂ ಶರಣರು ಸಾರಿದ ತತ್ತ್ವಗಳು ದಿಗಂತವಿಸ್ತಾರವಾಗಿ, ಚಿರಸ್ಥಾಯಿಗಳಾಗಿ ಉಳಿದು ಇಂದಿನ ಜಗತ್ತಿಗೆ ಅವಶ್ಯಬೇಕಾಗಿವೆ. ಹೀಗೆ ಎಂಟುನೂರು ವರ್ಷದ ಉಜ್ವಲ ಭವಿಷ್ಯವನ್ನು ಕಂಡ ಮಹಾದ್ರಷ್ಟಾರ ಬಸವಣ್ಣನವರ ಅಮೂಲ್ಯ ತತ್ತ್ವಗಳು ಆಧುನಿಕ ಯುಗದ ವಿಚಾರವಂತರ ಮನಸ್ಸನ್ನು ಆಕರ್ಷಿಸುತ್ತಿರುವುದು ವಿಶ್ವಕಲ್ಯಾಣಕ್ಕೆ ನಾಂದಿಯೆನ್ನಬಹುದು.

ಜಗಜ್ಯೋತಿ ಬಸವೇಶ್ವರರು ಐಕ್ಯವಾದ ಈ ಕೂಡಲ ಸಂಗಮದ ಪುಣ್ಯಕ್ಷೇತ್ರದ ಮಣ್ಣಿನ ವಾಸನೆ ನಮ್ಮ ಉದಾತ್ತ ಪರಂಪರೆಯ ಸದ್ವಾಸನೆಗಳನ್ನು ನಮ್ಮ ಅನುಭವಕ್ಕೆ ತಂದು ಕೊಡಲಿ. ಮಲಪ್ರಭೆ ಕೃಷ್ಣೆಯರ ಪುಣ್ಯಸಲಿಲ ಸಂಗಮದ ಈ ಸನ್ನಿವೇಶದಲ್ಲಿ ವಿಶ್ವಧರ್ಮವನ್ನು ಬೋಧಿಸಿ, ಅದನ್ನು ನಡೆಯಲ್ಲಿ ಆಚರಿಸಿ ತೋರಿದ, ವಿಶ್ವಕಲ್ಯಾಣಕ್ಕಾಗಿ ಶಾಶ್ವತ ಸತ್ಯಗಳನ್ನು ಬಿತ್ತರಿಸಿ ಶ್ರಮಿಸಿದ ಮಹಾತ್ಮನ ಎಂಟನೆಯ ಶತಮಾನೋತ್ಸವವನ್ನು ಇಷ್ಟು ವಿಜೃಂಭಣೆಯಿಂದ ಆಚರಿಸುತ್ತಿರುವುದು ನಮ್ಮ ಗಮನ ಅತ್ತ ಹರಿಯುತ್ತಿರುವುದರ ಶುಭ ಸಂಕೇತವಾಗಿದೆ ಎಂದು ಭಾವಿಸಿ, ಬಸವಣ್ಣನವರ ತತ್ತ್ವಗಳು ಜನತೆಯಲ್ಲಿ ಅಳವಟ್ಟು ಅವರ ಆಶೆಯು ಈಡೇರುವಂತಾಗಿ ಸರ್ವಲೋಕ ಹಿತಕ್ಕೆ ಕಾರಣವಾಗಲಿ, ಎಂಟುನೂರು ವರ್ಷಗಳ ಹಿಂದೆ ಬಸವಣ್ಣನವರು ಹಚ್ಚಿದ ಜ್ಞಾನಜ್ಯೋತಿ ನಮ್ಮ ಜೀವಜ್ಯೋತಿಯಾಗಿ ಬೆಳಗಲಿ, ಶರಣರ ಸಾರ್ವಕಾಲಿಕ ತತ್ತ್ವಗಳಲ್ಲಿ ಸ್ವತಂತ್ರ ಭಾರತವು ತನ್ನ ಸಮಸ್ಯೆಗಳಿಗೆ ಪರಿಹಾರರೂಪದ ಬೆಳಕನ್ನು ಕಂಡುಕೊಂಡು ಸರ್ವರ ಕಲ್ಯಾಣವನ್ನು ಸಾಧಿಸುವಂತಾಗಲಿ ಎಂದು ಹಾರೈಸಿ ಈ ಎರಡು ಮಾತುಗಳನ್ನು ಮುಕ್ತಾಯಗೊಳಿಸಿ ವಿರಮಿಸುತ್ತೇವೆ.

□



# "ವೀರಶೈವಾಗಮ ಪ್ರಯೋಗರತ್ನ"



ಜಗತ್ತಿನಲ್ಲಿ ಮಾನವನ ಮನೋವಿಕಾಸವಾದಂದಿನಿಂದ ಇಂದಿನವರೆಗೆ ಜೀವನ ಸಂಸ್ಕರಣಕ್ಕೆ ಕಾರಣವಾದ ಅನೇಕ ಧರ್ಮಗಳಿವೆ. ಸಂಸ್ಕರಣ ಕಾರ್ಯದಲ್ಲಿ ಅಂದಂದಿಗೆ ವ್ಯವಸ್ಥಿತವಾದ ಕಟ್ಟುಕಟ್ಟಳೆಗಳ ಗುಂಪು ಧರ್ಮ. ಧರ್ಮವೇ ಜಗತ್ ಸ್ಥಿತಿಯನ್ನು ಗೊತ್ತಾದ ನಿಯಮಗಳಿಂದ ಧರಿಸಿದೆ- "ಧಾರಣಾತ್ ಧರ್ಮಮಿತ್ಯಾಹುಃ" ಎಂಬುದು ಈ ಅರ್ಥವನ್ನು ಸಮರ್ಥಿಸುತ್ತದೆ.

ಭರತಖಂಡದ ಆಧ್ಯಾತ್ಮಿಕ ಸಾಹಿತ್ಯದಲ್ಲಿ ಜ್ಞಾನಪ್ರಚಾರಕ್ಕಾಗಿ ಏರ್ಪಟ್ಟ ಸಾಧನಗಳಲ್ಲಿ ವೇದಗಳನ್ನು ಬಿಟ್ಟರೆ ಆಗಮಗಳೇ ಅತ್ಯಂತ ಪುರಾತನವಾದವುಗಳು. 'ಆಗಮ' ಎಂದರೆ 'ಬರು' ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಅಂದರೆ 'ಪರಂಪರೆಯಿಂದ ಬಂದುದು'

---

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ದಿನಾಂಕ 27-11-68 ರಲ್ಲಿ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಆಸ್ಥಾನ ವಿದ್ವಾನ್ ಎಂ.ಜಿ. ನಂಜುಂಡಾರಾಧ್ಯ ವಿರಚಿತ "ವೀರಶೈವಾಗಮ ಪ್ರಯೋಗರತ್ನ" ಗ್ರಂಥದ ಬಿಡುಗಡೆಯನ್ನು ರಾಜ್ಯದ ಮುಜರಾಯಿ ಮತ್ತು ರೆವಿನ್ಯೂ ಸಚಿವರಾದ ಶ್ರೀ ಹೆಚ್.ವಿ. ಕೌಜಲಗಿಯವರು ನೆರವೇರಿಸಿದ ಸಮಯದಲ್ಲಿ ಅಪ್ಪಣೆ ಕೊಡಿಸಿದ ಭಾಷಣ.

ಎಂದು ಅದರ ಗೂಢಾರ್ಥ, 'ಅಜ್' ಉಪಸರ್ಗದಿಂದ ಕೂಡಿದ 'ಗಮ್' ಧಾತುವಿಗೆ 'ಪೂರ್ಣಜ್ಞಾನ'ವೆಂದು ಅರ್ಥ. ವೇದವೂ ಜ್ಞಾನರಾಶಿಯೇ, ಇದರಿಂದ ವೇದಾಗಮಗಳು 'ನಿಗಮಾಗಮ'ಗಳೆಂದು ಪ್ರಾಚೀನ ಸಾಹಿತ್ಯದಲ್ಲಿ ಬಳಸಲ್ಪಟ್ಟಿವೆ. 'ಆಗಮ'ಗಳಿಗೆ 'ತಂತ್ರ'ವೆಂಬುದು ನಾಮಾಂತರ. ಅಂದರೆ ಈ ತಂತ್ರಗಳಿಂದ ಮಾನವನ ಜ್ಞಾನ ವಿಕಾಸವಾಗಿ ಅವನ ಉದ್ಧಾರವಾಗುವುದರಿಂದ ಇದಕ್ಕೆ ತಂತ್ರವೆಂಬ ಹೆಸರು ಅನ್ವರ್ಥಕ. "ಆಪ್ತೋಕ್ತಿರಾಗಮಃ" ಎಂಬ ಉಕ್ತಿಯು ಪರಮಾಪ್ತನಾದ ಪರಶಿವನ ಉಕ್ತಿ ಎಂದು ಸಾರುತ್ತದೆ. ಆದ್ದರಿಂದಲೇ ಮನುಸ್ಮೃತಿಯ ವ್ಯಾಖ್ಯಾನದಲ್ಲಿ ಶ್ರುತಿಯು ವೈದಿಕ ಮತ್ತು ತಾಂತ್ರಿಕವೆಂದು ಎರಡು ವಿಧ ಎಂದು ನಿರ್ದೇಶಿಸಲಾಗಿದೆ. "ಶ್ರೂಯತೇ ಹಿ ವೇದಸಾರಃ ಶಿವಾಗಮಃ" ಎಂಬ ಮಾತು- ಶಿವಾಗಮಗಳು ವೇದಸಾರವೆಂದು ಸಾರುವುದರಿಂದ ಆಗಮ ಸಂಸ್ಕೃತಿಯು ವೇದೋಪನಿಷತ್ತುಗಳಲ್ಲಿ ಹೇಳಿದ ಧ್ಯೇಯಗಳನ್ನು ಕೈವಶಮಾಡಿಕೊಳ್ಳಲು ಹೊರಟ ಸಾಧನ ಶಾಸ್ತ್ರವೆಂದು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ವೇದಗಳಲ್ಲಿ ಬರುವ ಹಿಂಸಾತ್ಮಕವೂ ಸ್ವರ್ಗಾದಿ ಅಲ್ಪಫಲ ಜನಕವೂ ಆದ ಕರ್ಮಭಾಗವನ್ನು ಬದಿಗೊತ್ತಿ ಆಗಮಗಳು ಭಕ್ತಿ-ಜ್ಞಾನ-ವೈರಾಗ್ಯ ಮುಂತಾದವುಗಳಿಂದ ಆತ್ಮನ ಸಂಸ್ಕರಣದಲ್ಲಿ ಉದಾತ್ತ ಮಾರ್ಗವನ್ನು ಅವಲಂಬಿಸಿವೆಯೆನ್ನಬಹುದು.

ಆಗಮಗಳು ಶೈವ, ಶಾಕ್ತ ಮತ್ತು ವೈಷ್ಣವ ಎಂದು ಮೂರು ತೆರನಾಗಿವೆ. ಇವು ಮುಖ್ಯವಾಗಿ ಶಿವ, ಶಕ್ತಿ ಮತ್ತು ವಿಷ್ಣು ಎಂಬ ದೇವತೆಗಳ ವಿಷಯವನ್ನು ಕುರಿತು ಆಗಿವೆ. ಸೌರ ಮತ್ತು ಗಾಣಾಪತ್ಯ ಎಂಬ ತಂತ್ರಗಳೂ ಉಂಟು. ಆಗಮಗಳು ಅವುಗಳ ನೂರಾರು ಪ್ರಭೇದಗಳು, ಅಲ್ಲಿ ಉಕ್ತವಾಗಿರುವ ಅನಂತ ವಿಷಯಗಳು ಭಾರತ ಸಂಸ್ಕೃತಿಯ ವಿಶ್ವತೋಮುಖತ್ವವನ್ನು ಸಾರುತ್ತವೆ.

ಜಗದ್ಗುರು ರೇಣುಕಾಚಾರ್ಯರು ತಮ್ಮ "ಸಿದ್ಧಾಂತಶಿಖಾಮಣಿ"ಯಲ್ಲಿ ವೈದಿಕ ಮತ್ತು ಅವೈದಿಕ ಆಗಮಗಳ ವಿಷಯವನ್ನು ಪ್ರಸ್ತಾಪಿಸಿ ಶೈವವು "ವೇದಮಯ"ವೆಂದು ಸೂಚಿಸಿ, "ಸರ್ವವೇದಾರ್ಥಸಾರತ್ವಾತ್ ಪ್ರಾಮಾಣ್ಯಂ ವೇದವತ್ಸದಾ" ಎಂದಿದ್ದಾರೆ. ಇದಲ್ಲದೆ ವಾಮ, ಲಾಕುಳ, ದಕ್ಷಿಣ ಮತ್ತು ಮಿಶ್ರ ಎಂಬ ಪ್ರಭೇದಗಳನ್ನು ಪ್ರಸ್ತಾಪಿಸಿರುವುದಲ್ಲದೆ

"ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ |
ನಿರ್ದಿಷ್ಟಮುತ್ತರೇ ಭಾಗೇ ವೀರಶೈವಂ ಮತಂ ಪರಂ ||

ಎಂದರೆ ಕಾಮಿಕ ಮೊದಲು ವಾತುಲ ಕಡೆಯಾದ 28 ಶಿವಾಗಮಗಳಿಗೆ "ಸಿದ್ಧಾಂತಾಗಮ" ಎಂಬ ಹೆಸರಿದೆಯೆಂದೂ, ಆ ಸಿದ್ಧಾಂತಾಗಮದ ಉತ್ತರ ಭಾಗದಲ್ಲಿ ಉತ್ಕೃಷ್ಟವಾದ ವೀರಶೈವವು ನಿರ್ದಿಷ್ಟವಾಗಿದೆಯೆಂದೂ ಸಾರಿದ್ದಾರೆ.

ಆಗಮಗಳಲ್ಲಿ ಕ್ರಿಯಾ, ಚರ್ಯಾ, ಯೋಗ ಮತ್ತು ವಿದ್ಯಾ (ಜ್ಞಾನ) ಎಂಬ ನಾಲ್ಕು ಪಾದಗಳಿವೆ. ಇವುಗಳ ಮೊದಲ ಎರಡು ಪಾದಗಳಲ್ಲಿ ಮಾನವನಲ್ಲಿ ಭಕ್ತಿ ಪ್ರಚೋದನೆಗಾಗಿ





ದೇವಾಲಯಗಳ ರಚನೆ, ವಿಗ್ರಹ ನಿರ್ಮಾಣ, ಪ್ರತಿಷ್ಠೆ ಮೂರ್ತಿ ಉಪಾಸನ ಮತ್ತು ಮಹೋತ್ಸವಾದಿಗಳ ವಿಧಿವಿಧಾನಗಳ ವಿವರಣೆಗಳಿವೆ. ಕಡೆಯ ಯೋಗ ಮತ್ತು ಜ್ಞಾನ ಪಾದಗಳಲ್ಲಿ ಅಧ್ಯಾತ್ಮ ತತ್ತ್ವಸಾಧನೆಯ ಪ್ರಕಾರಗಳು ವಿಸ್ತೃತವಾಗಿವೆ. ಅಲ್ಲಿಯೇ ವೀರಶೈವ ಉಲ್ಲೇಖವಿರುವುದು.

ವೀರಶೈವವು ಇಷ್ಟಲಿಂಗೋಪಾಸನೆಯ ಮೂಲಕ ಭಕ್ತಾದಿ ಆರು ಸ್ಥಲಗಳ ಸಾಧನಸೋಪಾನವನ್ನು ಏರ್ಪಡಿಸಿದೆ. ಜೀವನು ಶ್ರದ್ಧಾ ನಿಷ್ಠಾ ಮುಂತಾದ ಆರು ವಿಧವಾದ ಭಕ್ತಿಯನ್ನು ಅವಲಂಬಿಸಿ ಶಿವನಲ್ಲಿ ಅವಿರಳೈಕ್ಯವನ್ನು ಸಾಧಿಸುವಲ್ಲಿ ಕೃತಾರ್ಥವಾಗಿದೆಯಾದರೂ ಅದು ಶಿವಾಗಮಗಳ ಮೊದಲೆರಡು ಪಾದಗಳಲ್ಲಿ ಉಕ್ತವಾದ ದೇವಾಲಯಗಳನ್ನು ನಿಷೇಧಿಸಿರುವುದಿಲ್ಲ; ಏಕೆಂದರೆ ಆಗಮಗಳಲ್ಲಿ ಉಕ್ತವಾದ ಏಳು ವಿಧ ಶೈವಗಳಲ್ಲಿ ವೀರಶೈವ ಕಡೆಯದು; ಎಂದರೆ ಮಾನವನ ಜ್ಞಾನವು ಕ್ರಮಕ್ರಮವಾಗಿ ವಿಕಾಸಹೊಂದಿ ವೀರಶೈವದ ತುದಿಯನ್ನು ಮುಟ್ಟಿದೆ ಎಂಬುದೇ ಅದರ ಆಂತರ್ಯ. ದೇವಾಲಯಾದಿಗಳಲ್ಲಿ ಭಗವಂತನ ವಿಭೂತಿಯನ್ನು ಕಂಡು ಪ್ರಭಾವಿತವಾಗಿ, ಭಾವ ಪರವಶನಾಗಿ ಸದ್ಭಕ್ತನೆನಿಸಿದ ಮಾನವನು ಮುಂದೆ ಸದ್ಗುರುವಿನ ಕೃಪಾಪಾತ್ರನಾಗಿ ದೇಹವೇ ದೇವಾಲಯವೆಂದೂ ಜೀವನೇ ಪರಶಿವನೆಂದೂ ಅರಿತು ತಾನೇ ಶಿವನಾಗುವ ಮಟ್ಟವನ್ನು ಹೊಂದುವುದರಿಂದ ದೇವಾಲಯಗಳು ಮತ್ತು ಮೂರ್ತಿಉಪಾಸನೆ ಮುಂತಾದುವು ಅತ್ಯಾವಶ್ಯಕ. ಆದ್ದರಿಂದಲೇ ವೀರಶೈವ ಆಚಾರ್ಯರು ಲಿಂಗೋದ್ಭವರೆನಿಸಿರುವುದಲ್ಲದೆ ವೀರಶೈವ ತತ್ತ್ವಸಾಧಕರೆನಿಸಿ ಸಿದ್ಧಿಯನ್ನು ಪಡೆದ ಬಸವಾದಿ ಶಿವಶರಣರೂ ಸಹ ಸ್ಥಾವರ ಲಿಂಗಗಳ ಅಂಕಿತಗಳನ್ನು ತಮ್ಮ ವಚನಗಳ ಕಡೆಯಲ್ಲಿ ಸೂಚಿಸಿದ್ದಾರೆ. ಮೇಲಾಗಿ "ತೇ ವೀರಶೈವಾ ಲೋಕಾನಾಂ ನಿತ್ಯಂ ಕ್ಷೇಮಾಭಿಲಾಷಿಣಃ" (ಕ್ರಿಯಾಸಾರ ಉ. ೧. ೧೫೧) ಎಂಬ ಉಕ್ತಿಯಂತೆ "ಸಕಲ ಜೀವಾವಳಿಗೆ ಲೇಸನೇ ಬಯಸುವ" ವೀರಶೈವನು ತನ್ನೊಬ್ಬನ ಶ್ರೇಯಸ್ಸನ್ನು ಗಮನಿಸದೆ ಇಡೀ ಮಾನವಲೋಕವನ್ನೇ ಉದ್ಧರಿಸುವ ಸತ್ಯಸಂಕಲ್ಪ ವುಳ್ಳವನಾದ್ದರಿಂದ ಆತ ಸಾಮಾನ್ಯ ಮಾನವರನ್ನು ಮೇಲೆತ್ತಲು ಶಿವಾಲಯಗಳಲ್ಲಿ ಸತ್ಯಶುದ್ಧಕಾಯಕ ಎಂಬ ಉದಾತ್ತ ಭಾವನೆಯಿಂದ ದೇವತಾಪ್ರತಿಷ್ಠಾ, ಮೂರ್ತಿ ಪೂಜಾದಿಗಳನ್ನು ಲೋಗರಿಗಾಗಿ ನೆರವೇರಿಸುತ್ತಾ ಬಂದಿದ್ದಾನೆ. ಜಗದ್ಗುರು ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ಮೂರು ಕೋಟಿ ಲಿಂಗಪ್ರತಿಷ್ಠೆ ಮಾಡಿರುವ ಕಥಾನಕ ಇದಕ್ಕೆ ನಿದರ್ಶನ.

ಮೈಸೂರು ಸರಕಾರವು ಹಿಂದಿನಿಂದಲೂ ಶೈವ, ವೈಷ್ಣವ ಮತ್ತು ಪಾಂಚರಾತ್ರ ಸಂಪ್ರದಾಯಗಳ ಪೂಜಾದಿ ಶಿಕ್ಷಣ ವಿಭಾಗವನ್ನು ಏರ್ಪಡಿಸಿದ್ದು ಈಚೆಗೆ ವೀರಶೈವ ಮತ್ತು ತಂತ್ರಸಾರ ಎಂಬ ಆಗಮ ಶಿಕ್ಷಣ ಶಾಖೆಗಳನ್ನು ಏರ್ಪಡಿಸಿ ಸಮಗ್ರ ಭಾರತಕ್ಕೆ ಮಾದರಿಯಾಗಿದೆ. ಮೈಸೂರು ಸಂಸ್ಥಾನದ ಮುಜರಾಯಿ ವಿಭಾಗದ ಆಶ್ರಯದಲ್ಲಿ



## ಪ್ರಸಾದ

ರಚಿತವಾಗಿರುವ ಆಗಮವಿದ್ಯಾ ಸಲಹಾ ಸಮಿತಿ ಮತ್ತು ಮೈಸೂರು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ನಡೆಯುವ ಆಗಮ ಶಿಕ್ಷಣ ಶಾಖೆಗಳು ದೇವಾಲಯಗಳಲ್ಲಿ ಆಗಮೋಕ್ತವಾಗಿ ನಡೆಯಬೇಕಾಗಿರುವ ಕಾರ್ಯಕಲಾಪಗಳನ್ನು ನೆರವೇರಿಸುವ ಅರ್ಚನ ಹಾಗೂ ಆಗಮಿಕ ಶಿಕ್ಷಣವನ್ನು ರೂಪಿಸುತ್ತವೆ. ಇವುಗಳಲ್ಲಿ ಒಂದಾದ ವೀರಶೈವಾಗಮ ಶಾಖೆಗೆ ಅಗತ್ಯವಾದ ಮುಖ್ಯ ಪಠ್ಯಕ್ರಮಕ್ಕೆ ಸಾಧಕವಾದ "ವೀರಶೈವಾಗಮ ಪ್ರಯೋಗ ರತ್ನ"ವೆಂಬ ಗ್ರಂಥವನ್ನು ಈ ಶಾಖೆಯಲ್ಲಿ ವೀರಶೈವಾಗಮ ಪ್ರಾಧ್ಯಾಪಕರಾಗಿದ್ದ ಆಸ್ಥಾನ ವಿದ್ವಾನ್ ಶ್ರೀ ಎಂ.ಜಿ. ನಂಜುಂಡಾರಾಧ್ಯರು ರಚಿಸಿ ಸಮರ್ಪಿಸುತ್ತಿರುವುದು ಅಭಿನಂದನೀಯವಾದುದು. ವೈದಿಕ ಮತ್ತು ಆಗಮಿಕ ವಿಭಾಗಗಳಲ್ಲಿ ನುರಿತವರೂ ಅಲಂಕಾರ ಮತ್ತು ವೇದಾಂತ ವಿಭಾಗಗಳಲ್ಲಿ ಪಾರಂಗತರೂ ಆಗಿರುವ ಶ್ರೀಯುತರು ಈ ಗ್ರಂಥರತ್ನವನ್ನು ಸಮರ್ಪಿಸುತ್ತಿರುವುದಕ್ಕೆ ನಾಡು ಚಿರಋಣಿ, ಈ ಪವಿತ್ರ ಗ್ರಂಥದ ಬಿಡುಗಡೆಯನ್ನು ಸಮಸ್ಥಾನದ ಮುಜರಾಯಿ ಸಚಿವರಾದ ಶ್ರೀ ಹೆಚ್.ವಿ. ಕೌಜಲಗಿ, ಬಿ.ಎ., ಎಲ್ಎಲ್.ಬಿ., ಅವರು ನೆರವೇರಿಸಿ ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ವೀರಶೈವಾಗಮ ವಿದ್ಯಾರ್ಥಿಗಳು ಇದನ್ನು ಶ್ರದ್ಧೆಯಿಂದ ಅಭ್ಯಸಿಸಿ ತಮ್ಮ ಮತ್ತು ನಾಡಿನ ಸಂಸ್ಕೃತಿಯನ್ನು ಬೆಳಗಿಸಲೆಂದು ಹಾರೈಸುತ್ತೇವೆ. □

ಜಂಗಮವಿಲ್ಲದ ಮಾಟ ಕಂಗಳಿಲ್ಲದ ನೋಟ,
ಹಿಂಗಿತ್ತು ಶಿವಲೋಕ ಇನ್ನೆಲ್ಲಿಯದಯ್ಯಾ.
ಲಿಂಗಕ್ಕೆ ಮಾಡಿದ ಬೋನವ ಸಿಂಬಕ ತಿಂಬಂತೆ
ಸಮಯೋಚಿತವನಱಿಯದೆ ಉದರ ಹೊರೆವವರ
ನರಕದಲ್ಲಿಕ್ಕದೆ ಮಾಣ್ಬನೆ ಕೂಡಲಸಂಗಮದೇವ.

- ಬಸವಣ್ಣ



## ಶ್ರದ್ಧೆ



ಮಾನವ ಕ್ರಿಯಾಶೀಲ ವ್ಯಕ್ತಿ. ಬದುಕಿರುವವರೆಗೂ ಏನಾದರೊಂದು ಕಾರ್ಯವನ್ನು ಮಾಡುತ್ತಲೇ ಇರುತ್ತಾನೆ. ತನ್ನ ಕ್ರಿಯೆಗೆ ತಕ್ಕ ಪ್ರತಿಫಲವನ್ನು ಬಯಸಿ ಕ್ರಿಯೆ ನಡೆಸುತ್ತಾನೆ. 'ಕರ್ತವ್ಯ ಮಾಡುವುದು ನಮ್ಮ ಧರ್ಮ. ಫಲ ಕೊಡುವವನು ದೇವರು' ಎಂದು ಹೇಳುವ ಮಾತು ರೂಢಿಯಲ್ಲಿದೆ. 'ಕರ್ಮಣ್ಯೇ ವಾಧಿಕಾರಾಸ್ತೇ ಮಾಫಲೇಷು ಕದಾಚನ' ಅಂದರೆ ಕರ್ಮ ಮಾಡುವುದು ನಿನ್ನ ಕರ್ತವ್ಯ, ಫಲವನ್ನು ಕೊಡುವುದು ಪರಮಾತ್ಮನಿಗೆ ಸೇರಿದ್ದು - ಎಂಬುದು ಭಗವದ್ಗೀತೆಯ ಸಂದೇಶ. ಈ ದೃಷ್ಟಿಯಿಂದಲೇ ಕಾರ್ಯೋನ್ಮುಖರಾದ ವ್ಯಕ್ತಿಗಳ ಸಂಖ್ಯೆ ಕಡಿಮೆ. ಫಲಾಪೇಕ್ಷೆಯೇ

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1981)





ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುತ್ತದೆ. ಲೌಕಿಕ ಜೀವನದಲ್ಲಿರುವಾಗ ಎಲ್ಲರೂ ಫಲಾಪೇಕ್ಷಾರಹಿತರಾಗಿ ಕಾರ್ಯ ಮಾಡಬೇಕೆಂದು ಹೇಳುವುದು ಕೇವಲ ಉಪದೇಶವಾಣಿಯಾಗಿ, ಆಚರಣೆಗೆ ಬಾರದೇ ಹೋಗಬಹುದು. ಫಲಾಪೇಕ್ಷೆಯಿಂದ ಕಾರ್ಯ ಮಾಡಿದರೆ ತಪ್ಪೆಂದು ಹೇಳುವುದಿಲ್ಲ. ಆದರೆ, ಫಲಾಪೇಕ್ಷೆಯಿಂದ ಕಾರ್ಯ ಮಾಡುವವರ ಸಂಖ್ಯೆಗಿಂತಲೂ ಕಾರ್ಯ ಮಾಡದೆಯೇ ಫಲವನ್ನು ಅಪೇಕ್ಷಿಸುವವರೂ ಲೋಕದಲ್ಲಿ ಅಧಿಕವಾಗಿದ್ದಾರೆ. ಅದರಲ್ಲೂ ಭಾರತದಲ್ಲಿ ಈ ಪ್ರವೃತ್ತಿ ಹೆಚ್ಚಾಗಿ ಬೆಳೆದಿದೆ. ಇದರ ದುಷ್ಪರಿಣಾಮವನ್ನು ಇಡೀ ರಾಷ್ಟ್ರ ಅನುಭವಿಸಬೇಕಾಗಿ ಬಂದಿದೆ. ನಮ್ಮ ದಿನನಿತ್ಯದ ಜೀವನದಲ್ಲಿ ಇಂತಹ ಸಹಸ್ರಾರು ನಿದರ್ಶಗಳನ್ನು ಕಾಣುತ್ತೇವೆ. ಹೊಲದಲ್ಲಿ ಬೇಸಾಯ ಮಾಡುವ ರೈತ ಕಾರ್ಮಿಕ, ತನ್ನ ಕಾರ್ಯ ಮುಗಿಯಿತೆ ಎಂಬುದನ್ನಷ್ಟೇ ಗಮನಿಸುತ್ತಾನೆ. ಗಿರಣಿಗಳಲ್ಲಿ ದುಡಿಯುವ ಕಾರ್ಮಿಕ ತನ್ನ ನಿಗದಿಯಾದ ಕಾಲ ಮುಗಿಯುವುದು ಯಾವಾಗ ಎಂದು ನಿರೀಕ್ಷಿಸುತ್ತಿರುತ್ತಾನೆ. ರೈತ ತಾನು ತನ್ನ ದುಡಿಮೆಯಲ್ಲಿ ಅಗತ್ಯವಾದಷ್ಟು ಕೆಲಸ ಮಾಡಿರುವನೆ? ತಕ್ಕ ಫಲ ಪಡೆಯಲು ಅವಶ್ಯಕವಾದ ಎಲ್ಲಾ ಕೆಲಸವನ್ನು ಮಾಡಿರುವನೆ? ಎಂಬುದನ್ನು ಗಮನಿಸುವುದು ಅಪರೂಪ. ತನ್ನ ದುಡಿಮೆಯಿಂದ ತಾನು ನಿರೀಕ್ಷಿಸಿದ ಫಲ ಬರುತ್ತದೆಂಬ ಆತ್ಮವಿಶ್ವಾಸ ಬರುವಂತೆ ದುಡಿಯುವ ರೈತರ ಸಂಖ್ಯೆ ಎಷ್ಟಿದೆ ಎಂಬುದು ವಿವಾದಾಸ್ಪದ. ಇನ್ನು ಕಾರ್ಮಿಕನು ತನ್ನ ಕಾರ್ಯದಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದಾನೆ? ತನ್ನ ಕರ್ತವ್ಯ ತನ್ನ ಮನಸ್ಸಿಗೆ ತೃಪ್ತಿತಂದಿರುವುದೇ ಎಂದು ಯೋಚಿಸಿ ಕರ್ತವ್ಯವನ್ನೆಸಗುವ ಪ್ರಸಂಗ ಸಹ ಇತ್ತೀಚೆಗೆ ಅಪೂರ್ವವಾಗುತ್ತಿದೆ. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ರಾಷ್ಟ್ರದ ಹಾಗೂ ಜಗತ್ತಿನ ಭವಿಷ್ಯ ನಿರ್ಮಾಪಕರಾದ ವಿದ್ಯಾರ್ಥಿವೃಂದದ ಗೊತ್ತುಗುರಿ ಏನು? ಮಾನವ ಜೀವನಪರ್ಯಂತ ವಿದ್ಯಾರ್ಜನೆ ಮಾಡಿದರೂ ಸಾಲದೆಂದು ವಿದ್ಯಾವಿನಯಸಂಪನ್ನರು ಹೇಳುತ್ತಾರೆ. ಈ ಮಾತು ಇಂದು ಎಲ್ಲರಿಗೂ ಅನ್ವಯಿಸಲು ಸಾಧ್ಯವೇ ಇಲ್ಲವಾಗಿದೆ. ಸರ್ಕಾರದ ನಿಯಮಗಳ ಪ್ರಕಾರ ವಿದ್ಯಾರ್ಥಿಗೆ ಕೆಲವು ವರ್ಷಗಳಾದರೂ ಅಭ್ಯಾಸ ಮಾಡಬೇಕಾದ ಅಗತ್ಯವಿದೆ, ಸುಮಾರು 15 ವರ್ಷಗಳಲ್ಲಿ ವಿದ್ಯಾರ್ಥಿ ಒಂದು ಪರಿಣತಿಯ ಮಟ್ಟವನ್ನು ಮುಟ್ಟಬೇಕೆಂದು ತಜ್ಞರು ನಿಶ್ಚಯಿಸಿದ್ದಾರೆ. ಅಷ್ಟು ವರ್ಷಗಳವರೆಗಾದರೂ ನಮ್ಮ ವಿದ್ಯಾರ್ಥಿಗಳು ವಿದ್ಯಾಭ್ಯಾಸ ತಪಸ್ಸೆಂದು ಭಾವಿಸಿ ಜ್ಞಾನಾರ್ಜನೆ ಮಾಡಿದರೆ ಜ್ಞಾನಸಂಪತ್ತನ್ನು ಗಳಿಸಬಹುದು. ಜಗತ್ತಿಗೆ ಅಮೂಲ್ಯ ಕೊಡುಗೆಯನ್ನು ಕೊಡಬಹುದು. ಆದರೆ ಇಂದು 15 ವರ್ಷವನ್ನು ತುಂಬಿಸುವುದಕ್ಕಾಗಿ, ನಿಯುಕ್ತ ಪರೀಕ್ಷೆಯಲ್ಲಿ ಹೇಗೋ ಉತ್ತೀರ್ಣನಾಗುವುದಕ್ಕಾಗಿಯೇ ಅಭ್ಯಾಸ ಮಾಡುವ ಪ್ರವೃತ್ತಿ ಬೆಳೆದಿದೆ. ಆದ್ದರಿಂದ ವಿದ್ಯಾರ್ಥಿಗಳ ಮತ್ತು ವಿದ್ಯಾಸಂಸ್ಥೆಗಳ ಸಂಖ್ಯೆ ಬೃಹತ್ತಾಗಿ ಬೆಳೆಯಿತ್ತಾದರೂ, ವಿದ್ಯಾರ್ಜನೆಯ ಮಟ್ಟ ನಿರೀಕ್ಷಿಸಿದಷ್ಟು ಗಾತ್ರದಲ್ಲಿ ಬೆಳೆಯಲಿಲ್ಲ. ಒಟ್ಟಿನಲ್ಲಿ ಇಂದು







ಯಾವ ಕ್ಷೇತ್ರದಲ್ಲಿಯೂ ಕಾರ್ಯವನ್ನು ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಗಳಿಂದ ಮಾಡುತ್ತಿಲ್ಲ. ಕಾರ್ಯ ಮಾಡದೆ ಫಲ ಪಡೆಯುವ ಸಂಚಿನಲ್ಲಿ ಅನೇಕರು ತೊಡಗಿದ್ದಾರೆ ಎನಿಸುತ್ತದೆ. ಜ್ಞಾನಿಗಳು ಯಾವ ಕಾರ್ಯ ಮಾಡಿದರೂ ಶ್ರದ್ಧೆಯಿಂದ ಮಾಡು ಎಂದಿದ್ದರು "ಶ್ರದ್ಧಸ್ವ" ಎಂದು ಉಪನಿಷತ್ತು ಹೇಳಿದರೆ 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂದು ಗೀತೆ ಹೇಳಿದೆ. ಇನ್ನು ನಮ್ಮ ಭವಿಷ್ಯ ಭವ್ಯವಾಗಬೇಕಾಗಿದ್ದರೆ ನಾವು ನಮ್ಮ ಕಾರ್ಯಗಳಲ್ಲಿ ಮೊದಲು ಶ್ರದ್ಧೆಯಿಂದ ನಿರತರಾಗಬೇಕಾದುದು ಅತ್ಯಗತ್ಯ. ನಮ್ಮ ಕಾರ್ಯ ಯಾವುದೇ ಆಗಿರಬಹುದು, ರೈತನ ಕಾರ್ಯ, ಕಾರ್ಮಿಕನ ಕ್ರಿಯೆ, ವಿದ್ಯಾರ್ಥಿಯ ಜ್ಞಾನಾರ್ಜನೆ, ಆಡಳಿತಗಾರರ ಕಾರ್ಯಾಚರಣೆ ಈ ಎಲ್ಲದರಲ್ಲಿಯೂ ಶ್ರದ್ಧೆಯಿರಬೇಕಾಗಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ ನಮ್ಮ ಪಂಚವಾರ್ಷಿಕ ಯೋಜನೆಗಳಿಂದ ನಮಗೆ ನಿರೀಕ್ಷಿಸಿದ ಫಲ ದೊರೆಯದೆ ಇರಬೇಕಾದರೆ, ಅದರ ಆಚರಣೆಯಲ್ಲಿ ಶ್ರದ್ಧೆಯ ಅಭಾವವಿದೆ. ಜೀವನ ಕೇವಲ ಯಾಂತ್ರಿಕವಾಗಿ ನಡೆದಿದೆ. ಈ ರೀತಿ ಆಗದೆ ಜೀವನ ಶ್ರದ್ಧಾಮಯವಾಗಬೇಕು. ಶ್ರದ್ಧೆ ಎಂದರೆ ಕ್ರಿಯೆಯಲ್ಲಿ ತನ್ಮಯತೆ ಮತ್ತು ಗುರಿ ಸಾಧಿಸುವುದರಲ್ಲಿ ಆತ್ಮವಿಶ್ವಾಸದಿಂದಿರುವುದು; ಶ್ರದ್ಧೆಯಿಂದ ಅಪಾರ ಕಾರ್ಯಸಾಧನೆಯಾಗಿದೆ. ಹರೆಯದ ಧ್ರುವ, ಪರಮಾತ್ಮನನ್ನು ಕಂಡದ್ದು ತನ್ನ ಶ್ರದ್ಧೆಯಿಂದ, ಪ್ರಹ್ಲಾದ ಪುನೀತನಾದದ್ದು ಶ್ರದ್ಧೆಯಿಂದ, ಸಿದ್ಧಾರ್ಥ ಬುದ್ಧನಾದದ್ದು ಶ್ರದ್ಧೆಯಿಂದ; ಮೋಹನದಾಸ ಕರಮಚಂದ ಗಾಂಧಿ ಮಹಾತ್ಮರಾದದ್ದು ಶ್ರದ್ಧೆಯಿಂದ; ಲೋಕದಲ್ಲಿ ಮಹಾನ್ ಕಾರ್ಯಸಾಧನೆಗಳಾಗಿರುವುದು ಸಾಧಕನ ಶ್ರದ್ಧೆಯಿಂದಲೇ ಎಂಬುದು ಸರ್ವವಿದಿತ. ನಾವು ಕೈಗೊಂಡ ಕಾರ್ಯಗಳಲ್ಲಿ ಮೇಲುಕೀಳೆಂಬ ಭಾವನೆಯನ್ನು ತೊರೆದು ಶ್ರದ್ಧೆಯಿಂದ ಆಚರಿಸುವುದನ್ನು ಕಲಿತರೆ ತಕ್ಕ ಫಲ ನಮಗೆ ಲಭಿಸುತ್ತದೆ. ಆದುದರಿಂದ ನಮ್ಮ ಜೀವನ ಪ್ರತಿ ಹಂತದಲ್ಲೂ ಶ್ರದ್ಧಾಮಯವಾಗಬೇಕು. ಶ್ರದ್ಧೆ ನಮ್ಮ ನಿರೀಕ್ಷಿತ ಫಲದಾಯಕವಾಗುತ್ತದೆ. ನಮ್ಮ ಜೀವನ ಸಾರ್ಥಕವಾಗುತ್ತದೆ.

☐

# ಸಂಕಲ್ಪ



ಕಾರ್ಯಾಸಕ್ತನಾದ ಮಾನವನು ಸಂಕಲ್ಪಶಕ್ತಿಯಿಂದ ಸ್ಫೂರ್ತಿಗೊಳ್ಳುತ್ತಾನೆ. ಯಾವುದೇ ಕಾರ್ಯ ಕೈಗೊಳ್ಳುವ ಮುನ್ನ ಏನೇ ಕಷ್ಟಬಂದರೂ ಅದನ್ನು ಮಾಡಿಯೇ ಮಾಡುವ ದೃಢನಿರ್ಧಾರ ಅವಶ್ಯಕ. ಈ ದೃಢನಿರ್ಧಾರವನ್ನು ಸಂಕಲ್ಪಶಕ್ತಿ (ವಿಲ್ ಪವರ್) ಎನ್ನಬಹುದು. ದೃಢಸಂಕಲ್ಪದ ಎದುರಿನಲ್ಲಿ ಪರ್ವತವು ಬಾಗುತ್ತದೆ, ಸಾಗರ ಸ್ತಂಭಿತವಾಗುತ್ತದೆ. ದೃಢಸಂಕಲ್ಪದ ಸಮಕ್ಷಮದಲ್ಲಿ ಕಠಿಣ ಕಾರ್ಯಗಳು ಸರಳವಾಗುತ್ತವೆ. ಮನಸ್ಸಿದ್ದಲ್ಲಿ ಮಾರ್ಗವೂ ಉಂಟು. ಅಸಾಧ್ಯವೆಂಬುದನ್ನು ನಿಘಂಟಿನಿಂದ ಹೊರತೆಗೆಯಲು ನೆಪೋಲಿಯನ್ನನು ತಿಳಿಸಿದುದನ್ನು ನಾವು ನೆನೆಯಬಹುದು.

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1983)







"ಅಕೂತಿಂ ದೇವಿಂ ಸುಭಗಾಂ ಪುರೋದಧೇ". ಸೌಭಾಗ್ಯಶಾಲಿನಿಯಾದ ಸಂಕಲ್ಪಶಕ್ತಿಯನ್ನು ಮುಂದಿಟ್ಟುಕೊಂಡು ಹೋಗುತ್ತೇನೆ ಎಂದು ವೇದೋಪಾಸಕನು ಹೇಳಿ ಅದರ ಮಹತ್ವವನ್ನು ಅರಿಯುತ್ತಾನೆ.

ಮಾನವನ ಕಾರ್ಯಾಚರಣೆಯಲ್ಲಿ ವೈವಿಧ್ಯತೆ ಕಾಣುತ್ತೇವೆ. ಕೆಲವು ಕಾರ್ಯಗಳನ್ನು ಕೈಗೊಳ್ಳಲು ಕೆಲವರು ಹಿಂದೆಗೆಯುವರು, ಕೆಲವರಿಗೆ ಅರ್ಧ ಮನಸ್ಸು, ಸಂಕಲ್ಪಿತನಿಗೆ ಇದು ನಿರಾಯಾಸ. ಒಳ್ಳೆಯ ಕೆಲಸಗಳನ್ನು ಮಾಡುವುದು ಕಷ್ಟ, ಕೆಟ್ಟ ಕೆಲಸಗಳು ಸುಲಭ. ಹೊಸ ವರ್ಷದ ಪ್ರಾರಂಭದಂದು ಒಳ್ಳೆಯ ಕೆಲಸ ಮಾಡುವ ನಿರ್ಧಾರ. ಈ ನಿರ್ಧಾರ ಎಷ್ಟು ದಿನಗಳದು ನೋಡಬೇಕು. ಸಂಕಲ್ಪ ಪುರುಷನು ಏನೇ ಕಷ್ಟನಷ್ಟಗಳಿಗೊಳಗಾದರೂ ನಿರ್ಧಾರದಿಂದ ಅಚಲಿತನಾಗುವುದಿಲ್ಲ. ಸಂಕಲ್ಪ, ಪ್ರಯತ್ನ, ಸಿದ್ಧಿ- ಇವೇ ಅವನ ಮಾರ್ಗಗಳು.

ಶಾಪಕ್ಕೆ ಗುರಿಯಾಗಿ ಬೆಂದು ಬೂದಿಯಾಗಿದ್ದ ತನ್ನ ಪೂರ್ವಜರನ್ನು ಅಮರರನ್ನಾಗಿಸಲು ಭಗೀರಥನು ಆಕಾಶಗಂಗೆಯನ್ನು ಭೂಮಿಗೆ ತಂದುದು ಅವನ ಸಂಕಲ್ಪಶಕ್ತಿಯಿಂದ. ಭಾರತದ ಇತಿಹಾಸದಲ್ಲಿ ಚಂದ್ರಗುಪ್ತನ ಕಾಲವನ್ನು "ಸುವರ್ಣಯುಗ"ವನ್ನಾಗಿಸಿದುದು ಕೌಟಿಲ್ಯನ ಸಂಕಲ್ಪಶಕ್ತಿಯಿಂದ. ಸತ್ಯಾಚರಣೆಯ ಸಂಕಲ್ಪದಿಂದ ಗಾಂಧೀ ಮಹಾತ್ಮರಾದರು. ಸಮಾಜದ ಪಿಡುಗುಗಳನ್ನು ಹೋಗಲಾಡಿಸಿ ವೀರಶೈವ ಮತೋದ್ಧಾರಿಯಾಗಿ ಬಸವೇಶ್ವರರು ಜಗಜ್ಯೋತಿಗಳಾದುದು ಸಂಕಲ್ಪಶಕ್ತಿಯಿಂದ. ದೃಢನಿರ್ಧಾರ, ದೃಢಸಂಕಲ್ಪದಿಂದ ಏನೆಲ್ಲಾ ಸಾಧ್ಯ;

ನುದಸ್ವ ಕಾಮ ಪ್ರಣುದಸ್ವ ಕಾಮಾವರ್ತಿಂ
ಯಂತು ಮನು ಯೇ ಸಪತ್ನಾಃ

ಸಂಕಲ್ಪವೇ, ನನ್ನ ಜ್ಞಾನಾಗ್ನಿಯೇ; ನನ್ನ ಅಂತ ಶತ್ರುಗಳನ್ನು ನನ್ನ ಮಾರ್ಗದಲ್ಲಿರುವ ಅಡ್ಡಿ-ಆತಂಕಗಳನ್ನು ತೊಲಗಿಸು, ದೂರಮಾಡು. ಸಂಕಲ್ಪಶಕ್ತಿಯೇ; ನನ್ನ ಶತ್ರುಗಳನ್ನು ದೂರಮಾಡು. ನನ್ನ ಸಂಕಲ್ಪಶಕ್ತಿಯನ್ನು ಜಾಗ್ರತಗೊಳಿಸು. ಜಾಗೃತಗೊಂಡ ಬಳಿಕ ಮಾನವ ಪ್ರಯತ್ನಶೀಲನಾಗಬೇಕು.

ಗತಿಸಿದುದನ್ನು ನೆನೆದು ಫಲವಿಲ್ಲ, ನಾಳೆ ಎಂಬುದು ಹಾಳು. ಇಂದು, ಈಗ ಎಚ್ಚೆತ್ತೂ ಮಾಡುವುದನ್ನು ಮಾಡಿಯೇ ಮಾಡಬೇಕು - ಇದು ಆಂಗ್ಲ ಕವಿಯೋರ್ವನ ಮಾತು.

ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು ?





ಹೊತ್ತು ಹೋಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.

ಎಂದು ಬಸವೇಶ್ವರರು ಸಹ ಎಚ್ಚರಿಸಿ ಹೇಳಿರುವುದನ್ನು ನಾವು ನೆನೆಯಬಹುದು.

ಮೇಲಾಗಿ ಸಂಕಲ್ಪಶಕ್ತಿಯು ಜಗತ್ತಿನ ಕಲ್ಯಾಣಕ್ಕೆ, ಉಪಯೋಗಕ್ಕೆ ವಿನಿಯೋಗವಾಗಬೇಕು, ನಮ್ಮ ಸಂಕಲ್ಪ ಶಿವಸಂಕಲ್ಪವಾಗಿರಬೇಕು. ಈ ಸಂಕಲ್ಪಗಳು ಶಿವಮಯವೂ, ಮಂಗಳಮಯವೂ, ಕಲ್ಯಾಣಮಯವೂ ಆಗಿರಬೇಕು. ಪ್ರತಿದಿನ ಮಲಗುವ ಮುನ್ನ ದಾಸರು ಹೇಳಿರುವಂತೆ "ಮನವ ಶೋಧಿಸಬೇಕೋ ನಿಚ್ಚ, ದಿನದಿನ ಮಾಡುವ ಪಾಪ ಪುಣ್ಯದ ವೆಚ್ಚ" - ಹೀಗೆ ನಮ್ಮ ಅಂತರಂಗ ಪರಿಶೋಧಿಸಿಕೊಳ್ಳಬೇಕು, ನಂತರ ದೇವರನ್ನು ಪ್ರಾರ್ಥಿಸಬೇಕು.

ಸುಕ್ಷಾ ರಥಿರಶ್ವಾನಿವಯನ್ಮನುಷ್ಯಾನ್
ನೇನೇಯತೋಭಿ ಶುಭಿರ್ವಾಚನ ಇವ |
ಹೃತ್ಪ್ರತಿಷ್ಠಂ ಯದಚಿರಂ ಜವಿಷ್ಠಂ
ತರ್ಮೇ ಮನಃ ಶಿವಸಂಕಲ್ಪಮಸ್ತು ||

ಚತುರನಾದ ಸಾರಥಿಯು, ವೇಗವಾಗಿ ಹೋಗುವ ಕುದುರೆಗಳನ್ನು ಲಗಾಮುಗಳ ಹಿಡಿತದಿಂದ ನಾನಾ ಮಾರ್ಗದಲ್ಲಿ ಓಡಿಸುವಂತೆ ಶೀಘ್ರ ಪ್ರವೃತ್ತಿಗಳಿಂದ ಚಲಿಸುವ ಜ್ಞಾನ, ಬಲಗಳನ್ನು ಮನಸ್ಸು ತನ್ನ ಹಿಡಿತದಲ್ಲಿಟ್ಟುಕೊಳ್ಳಬಲ್ಲದು. ಸಂಕಲ್ಪಯುಕ್ತವಾದ ಮನಸ್ಸಿಗೆ ಮತ್ತಿಲ್ಲ, ವೇಗಶಾಲಿಯಾಗಿರುತ್ತದೆ. ಏಕೆಂದರೆ ಈ ಮನಸ್ಸು ಶಿವಸಂಕಲ್ಪವಾಗಿದೆ.

ಸರ್ವರೂ ಶಿವಸಂಕಲ್ಪಯುಕ್ತರಾಗಲು ನಾವು ಬಯಸುತ್ತೇವೆ. □



# ಭಕ್ತಿ



ಮಾನವನಲ್ಲಿ ತ್ರಿಶಕ್ತಿಗಳು ಅಡಕವಾಗಿವೆ. ಅವೇ ಜ್ಞಾನ, ಭಾವನೆ ಮತ್ತು ಕ್ರಿಯಾಶಕ್ತಿಗಳು. ಪ್ಲೇಟೋ ಹೇಳಿರುವಂತೆ ಮಾನವನನ್ನು ಈ ಮೂರು ಶಕ್ತಿಗಳಿಗನುಗುಣವಾಗಿ ವಿಂಗಡಿಸಬಹುದು. ಉತ್ತಮ ಶಿಕ್ಷಣ ಪಡೆದ ವ್ಯಕ್ತಿ ಸುಜ್ಞಾನಿಯಾಗಿಯೂ ಸದ್ಭಾವನೆ ಹೊಂದಿದವನಾಗಿಯೂ, ಸತ್ಕ್ರಿಯೆಯಲ್ಲಿ ತೊಡಗಿದವನಾಗಿಯೂ ಇರುವವನಾಗಿದ್ದಾನೆ. ಜ್ಞಾನಕ್ಕೆ ಮಿದುಳು, ಭಾವನೆಗೆ ಹೃದಯವೂ, ಕ್ರಿಯೆಗೆ ಕೈಕಾಲುಗಳು ಶರೀರದಲ್ಲಿ ಮುಖ್ಯ ಅಂಗಗಳಾಗಿವೆ. ಈ ಅಂಗಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಿ, ಬಳಸಿಕೊಳ್ಳುವುದೇ ಉತ್ತಮ ಶಿಕ್ಷಣದ ಯತ್ನವಾಗಿದೆ.

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1982)





ಮೋಕ್ಷಕ್ಕೆ ಜ್ಞಾನಮಾರ್ಗ, ಭಕ್ತಿಮಾರ್ಗ ಹಾಗೂ ಕರ್ಮಮಾರ್ಗಗಳನ್ನು ಭಗವದ್ಗೀತೆಯಲ್ಲಿ ನಿರೂಪಿಸಲಾಗಿದೆ. ಜ್ಞಾನಕ್ಕೆ ಅಲ್ಲಮಪ್ರಭುವನ್ನು, ಭಕ್ತಿಗೆ ಬಸವಣ್ಣನವರನ್ನು, ಕರ್ಮಕ್ಕೆ ಸಿದ್ಧರಾಮೇಶ್ವರರನ್ನು ನಾವು ಸ್ಮರಿಸಿಕೊಳ್ಳುತ್ತೇವೆ. ಇವು ವಿಶಿಷ್ಟವಾದ ಶಕ್ತಿಗಳು.

ಇತಿಹಾಸದಲ್ಲಿ ದೇಹಶಕ್ತಿಯಿಂದ ಸಾಮ್ರಾಜ್ಯ ಸಂಸ್ಥಾಪಿಸಿ, ಮೆರೆದ ಚಕ್ರಾಧಿಪತಿಗಳು ಜನಮನದಿಂದ ದೂರಾಗಿದ್ದಾರೆ. ಭಕ್ತಿಯಿಂದ ದೇವರ ಮೆಚ್ಚುಗೆಗೆ ಪಾತ್ರರಾಗಿ, ಧರ್ಮಪ್ರವರ್ತಕರಾಗಿ, ಧರ್ಮಬೋಧಿಸಿದ ಮಹಾತ್ಮರು, ದಾಸವರೇಣ್ಯರು, ಶರಣರು ಜನಮನವನ್ನು ಸೂರೆಗೊಂಡಿದ್ದಾರೆ. ದೈವ-ಮಾನವರಿಗೆ ಸೇತುವೆಯೋಪಾದಿ ಇದ್ದು ಜನರನ್ನು ಇವರು ದೇವರ ಕಡೆಗೆ ಕೊಂಡೊಯ್ದಿದ್ದಾರೆ. ಇವರ ಮಾರ್ಗ ಭಕ್ತಿಮಾರ್ಗ, ಇವರ ಆಚರಣೆ ಭಕ್ತಿ, ಇವರ ಬೋಧನೆ ಭಕ್ತಿ.

ಭಕ್ತಿ ಎಂಬುದು ಒಂದು ಸದ್ಭಾವನೆ. ಭಕ್ತಿ ಸುಜ್ಞಾನಕ್ಕೆ, ಸತ್ಕ್ರಿಯೆಗೆ ಹಾದಿ. ಭಕ್ತಿ, ಸಮರ್ಪಣಾಭಾವವನ್ನುಂಟುಮಾಡುತ್ತದೆ. ಯಾವುದಕ್ಕೆ ಈ ಭಕ್ತಿ ಮೀಸಲೋ, ಅದಕ್ಕಾಗಿ ಸರ್ವವನ್ನು ತ್ಯಾಗ ಮಾಡುವ, ಸರ್ವವನ್ನು ಸಮರ್ಪಿಸುವ ಭಾವನೆಯ ಬುಗ್ಗೆಯಂತಿರುತ್ತದೆ.

ರಾಷ್ಟ್ರಭಕ್ತಿ, ದೇಶಭಕ್ತಿ, ಮಾತೃಭಕ್ತಿ, ಪಿತೃಭಕ್ತಿ, ಪತಿಭಕ್ತಿ, ದೈವಭಕ್ತಿ, ಗುರುಭಕ್ತಿ ಇತ್ಯಾದಿ ಭಕ್ತಿಗಳನ್ನು ನಾವು ಕಾಣುತ್ತೇವೆ. ಮಹಾತ್ಮಗಾಂಧಿಯವರಂತಹವರ ರಾಷ್ಟ್ರಭಕ್ತಿಯಿಂದ ರಾಷ್ಟ್ರವು ಸ್ವಾತಂತ್ರ್ಯ ಪಡೆಯಿತು. ದಾಸ್ಯದಿಂದ ಬಿಡುಗಡೆಯಾಯಿತು. ಇಂದು ಸ್ವಾತಂತ್ರ್ಯ ಜೀವನ ನಡೆಸುವಂತಾಗಿದೆ. ದೇಶಭಕ್ತಿ ಪ್ರತಿಯೊಬ್ಬರಲ್ಲೂ ಇರಬೇಕಾದುದು ಅವಶ್ಯಕ. ಮಾತೃಭಕ್ತಿಯಿಂದ ಶಿವಾಜಿಯು ಹಿಂದೂ ರಾಜ್ಯ ಸ್ಥಾಪಿಸುವ ಶಕ್ತಿ ಪಡೆದನು. ಪತಿಭಕ್ತಿಪರಾಯಣಳಾದ ಸಾವಿತ್ರಿಯು ಅಲ್ಪಾಯುವಾದ ತನ್ನ ಪತಿ ಸತ್ಯವಾನನನ್ನು ದೀರ್ಘಾಯುವಾಗಿ ಮಾಡಿಕೊಂಡಳು. ತನ್ನ ತಂದೆ ಮಾವಂದರಿಗೆ ಆದರ್ಶ ಪುತ್ರಿ-ಸೊಸೆಯಾಗಿ ಬಾಳಿದಳು.

ಇದೆಲ್ಲಕ್ಕಿಂತ ದೈವಭಕ್ತಿ ದೊಡ್ಡದು. ಮಾರ್ಕಂಡೇಯನು ಮೃತ್ಯುಂಜಯನಾದ. ಪ್ರಹ್ಲಾದನು ವಿಷ್ಣುವಿನ ಪರಮಭಕ್ತನಾದ. ಸಿರಿಯಾಳನು ಚಿರಂಜೀವಿಯಾದ. ಭಕ್ತಿ ಪಥದಿಂದ ಏನೆಲ್ಲಾ ಸಾಧ್ಯವೆಂಬುದನ್ನು ನಾವು ಓದಿದ್ದೇವೆ, ಕೇಳಿದ್ದೇವೆ.

ಕಾಡಿನಲ್ಲಿ ಲಿಂಗವನ್ನಿಟ್ಟುಕೊಂಡು ಭಕ್ತಿಯಿಂದ ಪೂಜಿಸುತ್ತಿದ್ದ ಬೇಡರಕಣ್ಣಪ್ಪ, ಅವರ ಸರ್ವಸ್ವವೆಲ್ಲಾ ಲಿಂಗವೇ ಆಗಿತ್ತು. ಅವನ ಸಂಪಾದನೆ ಎಲ್ಲಾ ಲಿಂಗಾರ್ಪಿತವಾಗಿತ್ತು. ಒಮ್ಮೆ ತನ್ನ ದೈನಂದಿನ ಪೂಜೆಗಾಗಿ ಬಂದಾಗ ಲಿಂಗದ ಕಣ್ಣಿನಿಂದ ರಕ್ತ ಸುರಿಯುತ್ತಿರುವುದನ್ನು ನೋಡಿದ. ಇದೇಕೆ ಹೀಗಾಯ್ತು ಎಂದು ಚಿಂತಿಸಿ, ಔಷಧೋಪಚಾರ ಮಾಡಿದ. ಲಿಂಗದ







ರಕ್ತ ಕಣ್ಣೀರು ನಿಲ್ಲಲೇ ಇಲ್ಲ. ಕೊನೆಗೆ ಅವನಿಗೊಂದು ಉಪಾಯ ಹೊಳೆಯಿತು. ತನ್ನ ಕಣ್ಣನ್ನೇ ಲಿಂಗಕ್ಕೆ ಅರ್ಪಿಸಲು ತೀರ್ಮಾನಿಸಿದ. ತನ್ನ ಮೊದಲ ಕಣ್ಣನ್ನು ಕಿತ್ತು ಲಿಂಗಕ್ಕೆ ಧರಿಸಿದ. ತನ್ನ ಎರಡನೇ ಕಣ್ಣನ್ನು ಕಿತ್ತು ಲಿಂಗಕ್ಕೆ ಸಮರ್ಪಿಸಬೇಕಿತ್ತು. ಆ ಕಣ್ಣು ಎಲ್ಲಿದೆ ಎಂಬುದನ್ನು ಗುರ್ತಿಸಲು ತನ್ನ ಮೆಟ್ಟುಗಾಲನ್ನು ಲಿಂಗದ ಕಣ್ಣಿರುವ ಜಾಗದಲ್ಲಿ ಇಟ್ಟ. ಕೊನೆಗೆ ಎರಡನೇ ಕಣ್ಣು ಕಿತ್ತ. ಮೆಟ್ಟುಗಾಲಿನ ಗುರ್ತಿನಲ್ಲಿ ಆ ಕಣ್ಣನ್ನು ಇಟ್ಟ. ಲಿಂಗಕ್ಕೆ ಕಣ್ಣೀರು ಸುರಿವುದು ನಿಂತಿತು. ಕುರುಡಾದ ಕಣ್ಣಪ್ಪ. ಶಿವನು ಇವನ ಭಕ್ತಿ ಪರೀಕ್ಷಿಸಿದ. ಆ ಪರೀಕ್ಷೆಯಲ್ಲಿ ಕಣ್ಣಪ್ಪನಿಗೆ ಸೋಲುಂಟೆ! ಅವನು ಪರಮಭಕ್ತ. ಶಿವನ ಸಾಕ್ಷಾತ್ಕಾರವಾಯ್ತು. ಕಣ್ಣಪ್ಪ ಚಿರಾಯುವಾದ.

ಶಿವ ಒಲಿದೊಡೆ ಎಲ್ಲಾ ಸಾಧ್ಯವೆಂಬುದನ್ನು ಬಸವಣ್ಣನವರ ವಾಣಿಯಿಂದ ನಾವು ತಿಳಿಯಬಹುದು.

"ನೀನೊಲಿದೊಡೆ ಕೊರಡು ಕೊನರುವುದಯ್ಯ
ನೀನೊಲಿದೊಡೆ ಬರಡು ಹಯನಹುವುದಯ್ಯ
ನೀನೊಲಿದೊಡೆ ಪಡಿಪದಾರ್ಥಗಳೆಲ್ಲ ಇದಿರಲ್ಲಿಪ್ಪವು. ನೀನೊಲಿದೊಡೆ
ವಿಷವೆಲ್ಲ ಅಮೃತವಹುದಯ್ಯ ಕೂಡಲಸಂಗಮದೇವ.

ಮಹಾದೇವನ ಒಲುಮೆಯು ಅದ್ಭುತವಾದುದು. ನಂಬಿಕೆಯಿಂದ, ಭಕ್ತಿಯಿಂದ ಪರಮಾತ್ಮನನ್ನು ಪೂಜಿಸಿದೆಯಾದೊಡೆ ಎಲ್ಲಾ ಇಷ್ಟಾರ್ಥಗಳು ಸಿದ್ಧಿಸುವುದಲ್ಲದೆ, ಈ ಬಂಧನದಿಂದ ಬಿಡುಗಡೆ ಹೊಂದಬಹುದು. □

ಆರಾಧನೆಯ ಮಾಡಿದಡೆ ಅಮೃತದ ಬೆಳಸು ;
ವಿರೋಧಿಸಿದಡೆ ವಿಷದ ಬೆಳಸು.
ಇದು ಕಾರಣ ಲಿಂಗಜಂಗಮಕ್ಕೆ ಅಂಜಲೆಬೇಕು.
ಸ್ಥಾವರ ಜಂಗಮ ಒಂದೆಂದಱಿದಡೆ
ಕೂಡಲಸಂಗಮದೇವ ಶರಣಸನ್ನಿಹಿತ.

- **ಬಸವಣ್ಣ**

# ಕೃತಜ್ಞತೆ



ಉಪ್ಪುಕೊಟ್ಟವರನ್ನು ಮುಪ್ಪಿನವರೆಗೂ ನೆನೆಯಬೇಕು ಎಂಬ ಗಾದೆಯ ಮಾತೊಂದಿದೆ. ಸಮಾಜ ಜೀವಿಗಳಾದ ಮಾನವರು ಪರಸ್ಪರ ಸಹಾಯ ಸಹಕಾರಗಳಿಲ್ಲದೆ ಸುಖವಾಗಿ ಬದುಕುವುದು ಇಂದಿನ ಪರಿಸರದಲ್ಲಿ ಸಾಧ್ಯವೇ ಇಲ್ಲ. ಏಕೆಂದರೆ ಇಂದು ಮನುಷ್ಯನ ಅವಶ್ಯಕತೆಗಳು ಹಿಂದಿಗಿಂತಲೂ ಅಧಿಕವಾಗಿವೆ. ತನಗೆ ಇಂದು ಬೇಕಾಗುವ ಎಲ್ಲಾ ವಸ್ತುಗಳನ್ನು ತಾನೇ ತಯಾರಿಸಿಕೊಳ್ಳುವುದು ಸಾಧ್ಯವಿಲ್ಲ. ಆದುದರಿಂದ ಪರಸ್ಪರ ಸಹಕಾರದ ಮೇಲೆ ಜೀವನ ಅವಲಂಬಿಸಿದೆ. ಅರಿತ ವೈದ್ಯ ರೋಗಿಗೆ ಔಷಧೋಪಚಾರ ಮಾಡುತ್ತಾನೆ. ಅದಕ್ಕೆ ರೋಗಿ ಅವನಿಗೆ ಹಣ ಕೊಡುತ್ತಾನೆ. ಕಲಿತ ಗುರು ಶಿಷ್ಯನಿಗೆ ಜ್ಞಾನ

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1981)







ನೀಡುತ್ತಾನೆ. ಗುರುವಿಗೆ ವ್ಯಕ್ತಿಯೋ, ಸಮಾಜವೋ, ಸರ್ಕಾರವೋ ಧನ ನೀಡುತ್ತದೆ. ಅದರಂತೆ ಧಾನ್ಯ, ವಸ್ತ್ರ ಮತ್ತು ಅನ್ಯ ವಸ್ತುಗಳನ್ನು ಮಾರಾಟ ಮಾಡುವವನೂ ಗ್ರಾಹಕನಿಗೆ ಆ ವಸ್ತುಗಳನ್ನು ಕೊಡುತ್ತಾನೆ. ಗ್ರಾಹಕ ಅವುಗಳಿಗೆ ಹಣ ಕೊಡುತ್ತಾನೆ. ವೈದ್ಯ, ಗುರು, ನ್ಯಾಯವಾದಿ ಇವರ ಕೆಲಸದಲ್ಲೂ ಹಣದ ವಿನಿಮಯವಾಗುತ್ತದೆ. ಹಣ ಕೊಟ್ಟರೂ ರೋಗಿ ವೈದ್ಯನನ್ನು, ಶಿಷ್ಯ ಗುರುವನ್ನು, ಕಕ್ಷಿಗಾರ ನ್ಯಾಯವಾದಿಯನ್ನು ಕೃತಜ್ಞತೆಯಿಂದ ಸ್ಮರಿಸುತ್ತಾನೆ. ಒಂದು ರೀತಿಯ ಬಾಂಧವ್ಯ ಬೆಳೆದಿರುತ್ತದೆ. ಗುರು ಶಿಷ್ಯನಿಗೆ ಜ್ಞಾನವನ್ನಿತ್ತನೋ ಇಲ್ಲವೋ, ಗುರುವಿನ ಸ್ಮರಣೆಯಿಂದ ಜ್ಞಾನ ಪಡೆದ ಏಕಲವ್ಯ ಗುರುವಾದ ದ್ರೋಣಾಚಾರ್ಯರಿಗೆ ತನ್ನ ಬೆರಳನ್ನೇ ಕಾಣಿಕೆಯಾಗಿ ಅರ್ಪಿಸಿದ. ಅರ್ಜುನ ದ್ರುಪದರಾಜನನ್ನೇ ಸೆರೆಹಿಡಿದು ತಂದು ಗುರುವಿಗೆ ಒಪ್ಪಿಸಿದ. ಇವರು ಈ ಕಾರ್ಯ ಮಾಡುವ ಅಗತ್ಯವಿರಲಿಲ್ಲ. ಆದರೆ ಕೃತಜ್ಞತೆಯ ಕುರುಹಾಗಿ ಈ ಕಾರ್ಯವೆಸಗಿದರು. ಇಂತಹ ಪ್ರಸಂಗಗಳು ಇತಿಹಾಸ - ಪುರಾಣಗಳಲ್ಲಿ ಸಹಸ್ರಾರು ದೊರೆಯುತ್ತವೆ. ಕೃತಜ್ಞತೆಯೆಂದರೆ ಸಹಾಯ ಮಾಡಿದವನಿಗೆ ಸದಾ ದಾಸನಾಗಿರಬೇಕೆಂದು ಅರ್ಥವಲ್ಲ. ಕೃತಜ್ಞತೆಯು ಮಾನವನನ್ನು ಮತ್ತೊಬ್ಬರಿಗೆ ಸಹಾಯ ಮಾಡುವಂತೆ ಪ್ರಚೋದನೆಗೊಳಿಸುತ್ತದೆ. ಆದರೆ ಇಂದಿನ ಸಮಾಜದಲ್ಲಿ ಸಹಾಯವನ್ನು ಅಪೇಕ್ಷಿಸುವವರೇ ಅಧಿಕವಾಗಿರುವುದರಿಂದ, ಕೃತಜ್ಞತೆಯಿಂದ ತೃಪ್ತರಾದವರು ಸಮಾಜಕ್ಕೆ ಹೆಚ್ಚು ಹೆಚ್ಚು ಸಹಾಯಮಾಡುವಂತಾಗಬೇಕು. ಇಂದು ಸಮಾಜದಲ್ಲಿ ಸ್ವಲ್ಪ ಮಟ್ಟಿಗೆ ಕೃತಜ್ಞತೆಯ ಸ್ಥಳವನ್ನು ಪ್ರತೀಕಾರ ಆಕ್ರಮಿಸುತ್ತಿದೆ. ಜ್ಞಾನ ಕೊಟ್ಟ ಗುರುವಿಗೆ ಕೆಲವೊಮ್ಮೆ ಶಿಷ್ಯ ತಿರುಗುಬಾಣವಾಗಿದ್ದಾನೆ. ಹಸಿದಾಗ ಅನ್ನ ಕೊಟ್ಟವನನ್ನು ಹರಸುವುದಕ್ಕೆ ಬದಲಾಗಿ ಶಪಿಸುವ ಪ್ರವೃತ್ತಿಯೂ ಕೆಲವೊಮ್ಮೆ ಕಾಣುತ್ತದೆ. ಜನ್ಮವಿತ್ತ ತಂದೆ ತಾಯಿಯರನ್ನು ಅನ್ನ ನೀರಿಲ್ಲದೆ ನರಳಿಸುವ ಸ್ಥಿತಿಗೆ ತಂದಿರುವ ಮಕ್ಕಳೂ ಇದ್ದಾರೆ. "ಆಚಾರ್ಯದೇವೋಭವ, ಅತಿಥಿದೇವೋಭವ, ಮಾತೃದೇವೋಭವ, ಪಿತೃದೇವೋಭವ" ಎಂದು ಪ್ರಾರ್ಥಿಸಿದ ನಾಡಿನಲ್ಲಿ ಇಂದು ನಾವು ಅದಕ್ಕೆ ವಿರುದ್ಧ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಅನ್ನವಿಟ್ಟವನನ್ನು ಕುರಿತು, ಅನ್ನ ತಿನ್ನುವುದು ತನ್ನ ಹಕ್ಕೆಂದು ಭಾವಿಸುತ್ತಿದ್ದಾನೆ. ಧನಸಹಾಯ ಮಾಡುತ್ತೇನೆಂದು ವಿಶ್ವಾಮಿತ್ರನಿಗೆ ಯಾಗಕ್ಕೆ ಮಾತು ಕೊಟ್ಟ ಹರಿಶ್ಚಂದ್ರನು ಅದನ್ನು ಪೂರೈಸುವ ಸಲುವಾಗಿ ಸತೀಸುತರನ್ನು ಮಾರಿದ. ತಾನು ಸುಡುಗಾಡ ಕಾವಲುಗಾರನಾದ. ಅಂತಹ ಪವಿತ್ರ ಜನ್ಮಭೂಮಿಯಲ್ಲಿ ಹುಟ್ಟಿದ ನಾವು ಕೊಟ್ಟವರ ಹಣ ಕೊಡದಿರುವುದಕ್ಕೆ ಯಾವುದಾದರೊಂದು ನೆವ ಹುಡುಕುತ್ತಿದ್ದೇವೆ. ನಾವು ಸಾಲ ಪಡೆಯುವಾಗ ಇದ್ದ ನೋವನ್ನು ಕೂಡಲೇ ಮರೆಯುತ್ತೇವೆ. ಭಸ್ಮಾಸುರನಿಗೆ ಶಿವ ವರ ಕೊಟ್ಟು, ಅದರಂತೆ ಅವನು ಕೈ ಇಟ್ಟಲ್ಲಿ ಇದ್ದುದೆಲ್ಲಾ ಭಸ್ಮವಾಗುತ್ತದೆಂದು ವರ ಪಡೆದ ಭಸ್ಮಾಸುರ ಅದಕ್ಕೆ ಪ್ರತ್ಯುಪಕಾರವಾಗಿ ತನ್ನ ಉರಿಯ ಹಸ್ತವನ್ನು ಶಿವನ





ತಲೆಯ ಮೇಲಿಡಲು ಯತ್ನಿಸಿದ. ಅದರಂತೆ ಇಂದಿನ ಆಧುನಿಕ ನಾಗರಿಕತೆಯಲ್ಲಿ ಉಪಕಾರ ಮಾಡಿದವನಿಗೆ ಅಪಕಾರ ಮಾಡುವ ಪ್ರವೃತ್ತಿ ಬೆಳೆಯುತ್ತಾ ಬಂದಿದೆ. ಅದರಿಂದ ಮಾನವರಲ್ಲಿ ಪರಸ್ಪರ ನಂಬಿಕೆ ಮಾಯವಾಗುತ್ತಿದೆ. ವಿಶ್ವಾಸ, ನಂಬಿಕೆಗಳಿಂದ ಜೀವನದ ಬಹುಕಾರ್ಯಗಳು ನಡೆಯಬೇಕು; ಅದು ತಪ್ಪಿದರೆ ಸಮಾಜದಲ್ಲಿ ಅಸ್ಥಿರತೆಯುಂಟಾಗಿ, ಸಮಾಜ ಜೀವನ ಅಲ್ಲೋಲಕಲ್ಲೋಲವಾಗುತ್ತದೆ. ಅಶಾಂತಿಯ ಅಗ್ನಿಜ್ವಾಲೆಯಲ್ಲಿ ಜೀವನ ದಹಿಸುತ್ತದೆ. ಪರೋಪಕಾರಕ್ಕಾಗಿ ತಮ್ಮ ಜೀವನವನ್ನು ಸವೆಸಿದವರು ಪ್ರತ್ಯುಪಕಾರವನ್ನು ಬಯಸಬೇಕೆಂದಲ್ಲ; ಉಪಕಾರಕ್ಕೆ ಪ್ರತಿಯಾಗಿ ಅಪಕಾರವಾಗದಿದ್ದರೆ ಸಾಕೆನಿಸುತ್ತದೆ. ಉಪಕಾರ ಮಾಡುವವರಿಗೆ ಅಪಕಾರವೆಸಗಿದವರನ್ನು ಕಂಡು ಕಡುನೊಂದು ಬಸವಣ್ಣನವರು ಹೀಗೆಂದಿರಬಹುದು. "ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದರೆ, ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ" ಎಂದಿದ್ದಾರೆ. ಮಾನವನಲ್ಲಿ ಇಂತಹ ಹೀನ ಗುಣವಿದೆಯೆಂದು ಎಲ್ಲರೂ ಭಾವಿಸುತ್ತಾ ಹೋಗುವಂತಾದರೆ, ಯಾರು ಯಾರಿಗೆ ಸಹಾಯ ಮಾಡುತ್ತಾರೆ? ಪರಸ್ಪರ ಸಹಾಯ - ಸಹಕಾರವಿಲ್ಲದೆ ನಾವು ಬದುಕುವುದಾದರೂ ಹೇಗೆ? ಆ ವಿಚಾರಗಳತ್ತ ನಮ್ಮ ಗಮನ ಹರಿಯಬೇಕು. ನಮ್ಮ ಇಂದಿನ ಪೀಳಿಗೆಯ ಮನದಲ್ಲಿ ಕೃತಜ್ಞತಾಮನೋಧರ್ಮ ಬೆಳೆಯುವಂತಹ ಪರಿಸರದ ನಿರ್ಮಾಣ ಮಾಡಬೇಕು. ಜೀವನ ಸಂಸ್ಕಾರಯುತವಾಗುವಂತೆ ಮಾಡಬೇಕು. ಅದರಿಂದ ಸಮಾಜದ ಕಲ್ಯಾಣವಾಗುತ್ತದೆ. ರಾಷ್ಟ್ರದ ಅಭ್ಯುದಯವಾಗುತ್ತದೆ.

□

ಎತ್ತಿಕೊಳ್ಳಲೇಕೆ, ಮತ್ತಿಳುಹಲೇಕಯ್ಯಾ ?
ಧರಧುರದ ಭಕ್ತಿಯ ಮಾಡಲೇಕಯ್ಯಾ ?
ನಿಂದಿಸಲೇಕೆ, ಸ್ತುತಿಸಲೇಕೆ ?
ಹೋಗಬಿಟ್ಟು ಜಂಗಮವ ಹಿಂದೆಯಾಡುವನ ಬಾಯಲಿ
ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೆ
ಕೂಡಲಸಂಗಮದೇವ.

**- ಬಸವಣ್ಣ**



# ದಾನ



ದಾನ ಮಾಡುವುದು ಭಾರತೀಯರ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ತನ್ನ ಶಕ್ತ್ಯಾನುಸಾರ ತನ್ನಲ್ಲಿದ್ದುದನ್ನು ಅವಶ್ಯಕತೆ ಇದ್ದವನಿಗೆ ಪೂರೈಸುವುದೇ ದಾನದ ಲಕ್ಷಣ. ದಾನ ನೀಡುವವನಿಗೆ ತಾನು ನೀಡಿದೆನೆಂಬ ತೃಪ್ತಿ. ಪಡೆದವನಿಗೆ ತನ್ನ ಅವಶ್ಯಕತೆ ಪೂರೈಸಿತೆಂಬ ಸಂತೃಪ್ತಿ ಮೂಡಿದಾಗ ದಾನದ ಸಾರ್ಥಕತೆಯ ಅರಿವಾಗುವುದು. ಎಡಗೈ ಮಾಡಿದ ದಾನ ಬಲಗೈಗೆ ತಿಳಿಯಬಾರದೆಂದು ವಾಡಿಕೆಯ ಮಾತು. ದಾನ ಮಾಡುವವರು ಯಾರ ಬಲವಂತಕ್ಕಾಗಲಿ, ಮೆಚ್ಚುಗೆಗಾಗಲಿ, ಪ್ರತಿಫಲಾಪೇಕ್ಷೆಗಾಗಲಿ ದಾನ ಮಾಡುವುದಿಲ್ಲ. ದಾನ ಎಂದಾಗ ಕರ್ಣನ ಶಿಬಿ ಚಕ್ರವರ್ತಿಯ,

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1984)

ಬಲಿಯ ನೆನಪಾಗುವುದು. ಅವರು ದಾನ ಮಾಡಿ ಕೀರ್ತಿಪ್ರಾಯರಾಗಿದ್ದಾರೆ.

ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಆಹಾರವೇ ಮೊದಲನೆಯದು. ಹಸಿದವನಿಗೆ ಅನ್ನ, ಬಾಯಾರಿದವನಿಗೆ ನೀರು. ಮಕ್ಕಳಿಗೆ ಹಾಲು ಬೆಣ್ಣೆಗಳ ಅವಶ್ಯಕತೆ ಇದೆ. ಬಡತನದ ಹಸಿವು ಹೆಬ್ಬಾವಿನ ಹಸಿವಿನಂತೆ, ಎಷ್ಟೇ ತಿಂದರೂ ಇನ್ನೂ ಬೇಕೆನಿಸುವುದು. ಇದಕ್ಕಾಗಿಯೇ ಶರಣ ದೇವರದಾಸಿಮಾರ್ಯರು

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ

ಎಂದಿದ್ದಾರೆ. ಆದ್ದರಿಂದ ಒಡಲಿಗೆ ಅಗತ್ಯವಾದ ಅನ್ನ ಸಮಸ್ಯೆಯನ್ನು ನಿವಾರಿಸಲು ಪ್ರಯತ್ನಿಸಬೇಕು. ಧರ್ಮಾಚರಣೆಗೂ ದೇಹವೇ ಮೂಲ. ಆದ್ದರಿಂದ ಅನ್ನವನ್ನು ನೀಡಬೇಕು. ಒಳ್ಳೆಯ ಮಾತನ್ನು ಆಡಬೇಕು. ಬೇರೆಯವರನ್ನು ತನ್ನಂತೆಯೇ ಭಾವಿಸಬೇಕು.

ಗೀತೆಯಲ್ಲಿ ದಾನವನ್ನು ತಾಮಸ, ರಾಜಸ, ಸಾತ್ವಿಕ ಎಂದು ಮೂರು ವಿಭಾಗಗಳಾಗಿ ವಿಂಗಡಿಸಿದೆ. ದೇಶ, ಕಾಲ, ಪಾತ್ರ - ಅಪಾತ್ರಗಳನ್ನು ವಿಚಾರಿಸದೆ ಮಾಡುವ ದಾನ ತಾಮಸದಾನ. ನಾವು ಮಾಡುವ ದಾನ ಸಮಾಜದ ಬಹು ಜನಕ್ಕೆ ಉಪಕಾರವಾಗುವುದಾದರೆ ಅದು ತಾಮಸ ದಾನವೆನಿಸುತ್ತದೆ. ಪ್ರತ್ಯುಪಕಾರದ ಆಸೆಯಿಂದ ಕೀರ್ತಿ ಕಾಮನೆಯಿಂದ, ಸಮಾಜದಲ್ಲಿ ನನ್ನನ್ನು ಗಣ್ಯ ಎಂದು ಭಾವಿಸಲಿ ಎಂಬ ಭಾವನೆಯಿಂದ ಮಾಡವ ದಾನ-ರಾಜಸದಾನವೆನಿಸಿಕೊಳ್ಳುತ್ತದೆ. ಪ್ರತ್ಯುಪಕಾರದ ಆಸೆ ಇಟ್ಟುಕೊಳ್ಳದೆ, ಸಮಾಜದ ಬಹು ಜನರಿಗೆ ಉಪಯುಕ್ತವಾಗಬಹುದಾದ ಕಾರ್ಯ ಎಂದು ಅರಿತು, ದೇಶ, ಕಾಲ, ಪಾತ್ರಾದಿಗಳನ್ನು ತಿಳಿದು ಸದ್ಭಾವನೆಯಿಂದ, ವಿನಯದಿಂದ ಮಾಡುವ ದಾನ ಸಾತ್ವಿಕ ದಾನವೆನಿಸಿಕೊಳ್ಳುತ್ತದೆ. ದಾನವು ಸ್ವಾರ್ಥವನ್ನು ನೀಗಿಸಿ ವಸ್ತುಗಳಲ್ಲಿ ಉದಿಸಬಹುದಾದ ವ್ಯಾಮೋಹವನ್ನು ನಿವಾರಿಸುತ್ತದೆ. ತ್ಯಾಗಬುದ್ಧಿಯನ್ನು ಬೆಳೆಸಿದಂತೆಲ್ಲ ಮನುಷ್ಯ, ದೇವರ ಕೃಪೆಗೆ ಪಾತ್ರನಾಗುತ್ತಾನೆ.

ದಾನ ಮಾಡುವುದೇ ಸ್ವಾಭಾವಿಕವಾಗಿ ಬೆಳೆದು ಬರಬೇಕು. ಮನೆಯ ವಾತಾವರಣ ಇದಕ್ಕೆ ಪೋಷಕವಾಗಿರಬೇಕು. ಕೆಲವರು ದಾನ ಮಾಡುವ ಸ್ವಭಾವವನ್ನು ಹೊಂದಿರುವುದಿಲ್ಲ. ಸಂಗ್ರಹ ಪ್ರವೃತ್ತಿಯನ್ನು ಹೆಚ್ಚಾಗಿ ಬೆಳೆಸಿಕೊಳ್ಳುವರು. ಇಂತಹವರು ಕೃಪಣರು, ಕೃಪಣರಾದವರ ಗತಿ ಹೀಗಾಗುತ್ತದೆ ಎಂದು ಸರ್ವಜ್ಞ ಮಾರ್ಮಿಕವಾಗಿ ನುಡಿದಿದ್ದಾನೆ.





"ಉಣ್ಣದೊಡವೆಯ ಗಳಿಸಿ ಮಣ್ಣೊಳಗೆ ಬಚ್ಚಿಟ್ಟು |
ಚೆನ್ನಾಗಿ ನೆಲವ ಸಾರಿಸಿದ ಬಾಯೊಳಗೆ |
ಮಣ್ಣುಕಾಣಯ್ಯಾ ಸರ್ವಜ್ಞ ||

ತಮ್ಮ ಜೀವಮಾನದಲ್ಲಿ ಸಂಪಾದಿಸಿದ ಗಳಿಕೆ ಬೇರೆಯವರ ಪಾಲಾಗುತ್ತದೆ. ಪಾಪಿಯ ಧನ ಪ್ರಾಯಶ್ಚಿತ್ತಕ್ಕೇ ಸರಿ. ದಾನ ಮಾಡಿ ಕೆಟ್ಟವರಿಲ್ಲ.

ದಾನಗಳಲ್ಲಿ ಹಲವು ಬಗೆಗಳುಂಟು. ಅನ್ನದಾನ, ಧನದಾನ, ಭೂದಾನ, ವಿದ್ಯಾದಾನ ಇತ್ಯಾದಿ. ಅನ್ನದಾನದಿಂದ ಪಡೆದವನಿಗೆ ತಾತ್ಕಾಲಿಕ ತೃಪ್ತಿ ಲಭಿಸುವುದು. ಧನದಾನವೂ ಅಷ್ಟೆ. ಆದರೆ ಎಲ್ಲಕ್ಕಿಂತಲೂ ಮಿಗಿಲಾದ್ದು ಜ್ಞಾನದಾನ. ಇದು ಉಪನಿಷತ್ತಿನ ವಾಣಿಯಂತೆ. ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ದಾನ ಪಡೆದವನು ಜೀವನವಿಡೀ ಇದರ ಪ್ರಯೋಜನವನ್ನು ಪಡೆಯುತ್ತಾನೆ.

ಮಾನವರೆಲ್ಲಾ ಧೀನರೇ. ದೇವನೊಬ್ಬನೆ ದಾನಿ. ಶರಣರ ವಾಣಿಯಂತೆ ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸೂಸುವ ಗಾಳಿ ನಿಮ್ಮ ದಾನ, ಅಂದರೆ ಪ್ರಪಂಚದ ಮೇಲಣ ಸಂಪೂರ್ಣ ಒಡೆತನ ಪರಮಾತ್ಮನದು. ಅವನಿಗೆ ಸಂಬಂಧಿಸಿದ ಸ್ವತ್ತನ್ನು ಕೊಡುತ್ತೇವೆಯೇ ಹೊರತು ನಮ್ಮದನ್ನಲ್ಲ ಎಂಬ ಭಾವನೆಯನ್ನು ಕೊಡುವಾಗ ಬೆಳೆಸಿಕೊಳ್ಳಬೇಕು.

ಈ ಪ್ರಪಂಚ ಈಶನ ದೇವಸ್ಥಾನ. ಅವನಿಲ್ಲದೆಡೆಯಿಲ್ಲ. ನಮಗಾಗಿ ಆತನು ಏನನ್ನು ನೀಡಿರುವನೋ ಅದನ್ನು ನಾವು ಅನುಭವಿಸಬೇಕು. ಇತರರ ದ್ರವ್ಯಕ್ಕೆ ಆಸೆಪಡಬಾರದು. ಮಹಾದಾನಿ ಮಹಾದೇವನ ಒಲುಮೆಯಿಂದಲೇ ನಮ್ಮ ಸುಖಶಾಂತಿಯ ಜೀವನ ಲಭ್ಯ.

□



# ಕಾಯಕ



ಉಣಬೇಕು, ಉಡಬೇಕು, ಇಡಬೇಕು, ತೊಡಬೇಕು, ಸುಖವಾಗಿರಬೇಕು. ಈ ಬೇಕು (wants)ಗಳ ಸರಮಾಲೆ ನಮ್ಮನ್ನು ದುಡಿಸುತ್ತದೆ. ಬೇಕಾದ ಎಲ್ಲರೂ ದುಡಿಯಲೇಬೇಕು. ಅವರವರು ಅವರವರಿಗಾಗಿ "ಕಾಯಕ" ಮಾಡಬೇಕು. ಇದು ಲೋಕದ ನಿಯಮ, ಪ್ರಪಂಚದ ಧರ್ಮ. ಈ "ಬೇಕು" ಸದಾ ಜಾಗೃತವಾಗಿದ್ದು, ನಮ್ಮನ್ನು ಹಗಲಿರುಳು ಎಚ್ಚರವಿರಿಸಿ, ನಿದ್ರೆ ಕನಸಿನಲ್ಲಿ ತನ್ನ ಕಾಯಕ ನಡೆಸಿದೆ. "ಕಾಯಕ" ಶರಣರ ದೃಷ್ಟಿಯಲ್ಲಿ ಮಹತ್ವವಾದುದು. ಅರಿಯದವರಿಗೆ ಯಾಂತ್ರಿಕ ಕಾರ್ಯವಾಗಿದೆ. "ಕಾಯಕ"ಕ್ಕೆ ಮಹತ್ವ ನೀಡಿದಾಗ ರಾಷ್ಟ್ರಹಿತ ಸಾಧನೆಯೂ, ಮುಕ್ತಿಸಾಧನೆಯು ಲಭಿಸುವುದು.

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1983)







ಕಾಯಕದ ಅರ್ಥವೇನು? ಆಂಗ್ಲ ಕವಿಯೋರ್ವನ ಪದ್ಯದ ಸಾಲುಗಳು ಹೀಗಿವೆ.

There is no point in work
unless it absorbs you
like an absorbing game
if it doesn't absorb you
if it's never any fun,
don't do it

ಕೈ, ಕಾಲುಗಳು ಮೈ-ಹಣ್ಣಾಗುವಂತೆ ದುಡಿಯಬೇಕು. ಇಂದ್ರಿಯ, ಮನಸ್ಸು, ಬುದ್ಧಿ, ಸರ್ವಾಂಗ ತಮತಮಗೆ ತಕ್ಕ "ಕಾರ್ಯ"ದಲ್ಲಿ ನಿರತವಾಗಿ ದುಡಿಯಬೇಕು. ನಿರ್ಧರಿಸಿದ ಕೆಲಸವನ್ನು ತನ್ಮಯತೆಯಿಂದ ಮಾಡಬೇಕು. ಆ ಕೆಲಸ ನಿಮಗೆ ಅನಂತ-ಸಂತೋಷಗೊಳಿಸಬೇಕು. ಶ್ರಮಭರಿತ, ಶುದ್ಧಹೃದಯ, ಸತ್ಯವಾದ ಕಾಯಕ ಮಾಡಬೇಕು. "ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು, ಲಿಂಗಾರ್ಪಿತ"-ಇದು ಶರಣರ ಕಾಯಕ ಸೂತ್ರ.

When a man goes out into his work
He is alive like a tree in spring
He is living, not merely working

ಕಾಯಕ ಯಾಂತ್ರಿಕವಾದುದಲ್ಲ. ವಸಂತಕಾಲದಲ್ಲಿ ಕಂಡುಬರುವ ಗಿಡಮರಗಳಲ್ಲಿ ತುಂಬಿರುವ ಉತ್ಸಾಹ-ಆನಂದಗಳು "ಕಾಯಕ" ವ್ಯಕ್ತಿಯಲ್ಲಿರುತ್ತದೆ.

ಸುಗ್ರಾಸ ಭೋಜನದ ಷಡ್ರಸದ ಸುಖವು, ಲಿಂಗಪೂಜೆ ಮಾಡಿದ ಭಕ್ತಿಯ ಆನಂದ-ಕಾಯಕದ ಕೈಲಾಸ ಸುಖಮಾಡಿದವನಿಗೆ ಮಾತ್ರ ಬರುತ್ತದೆ. ಉತ್ತು, ಬಿತ್ತು ಬೆಳೆದ ಬೆಳೆಯ ರಾಶಿ ಬೆಳೆದವನಿಗೆ ಹರ್ಷದ ರಾಶಿಯನ್ನೇ ತರುತ್ತದೆ. ದುಡಿದ ರಟ್ಟೆಗಳು, ಸುರಿಸಿದ ಬೆವರು, ಹಣ್ಣಾದ ಮೈಗಳಲ್ಲಿ ಮೂಡುವ ಮೋಕ್ಷವು, ದುಡಿಯದವಗೆ ಹೇಗೆ ತಾನೆ ಆನಂದ ತಂದೀತು; "ತನ್ನಾಶ್ರಯದ ರತಿಸುಖವನ್ನು ತಾನುಂಬ ಊಟವನು, ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ ? ಇದು ಶರಣರ ಪ್ರಶ್ನೆ, ರೈತನ ದುಡಿಮೆಯ ಆನಂದ ಅವನಿಗೆ. ಜಾಣತನದಿಂದ ಅವನ ಜೋಳದ ರಾಶಿಯನ್ನು ಮತ್ತೊಬ್ಬ ಒಯ್ಯಬಹುದು. ಅವನು ಬೆಳೆದ ಜೋಳ, ಅದರ ಕೊಟ್ಟಿ ಅವನಿಗೆ ಸವಿ, ಅವನ ಉದರಕ್ಕೆ ಹಿತ, ಹೃದಯಕ್ಕೆ ಸಂತೋಷ. ಈ ಅನುಭವ ದುಡಿಯದವರಿಗೆ ಹೇಗೆ ಗೊತ್ತಾದೀತು?

ಕಾಯಕವು ಸತ್ಯ, ಶುದ್ಧವಾಗಿರಬೇಕು. ಹೆಚ್ಚು ಪಡಿಗೆ ಆಶಿಸಬಾರದು. ಸುಜ್ಞಾನ, ಸದ್ಭಕ್ತಿ ಮಾರ್ಗದಲ್ಲಿ ಮಾಡಬೇಕಾದ ಕರ್ತವ್ಯವಿದು. ಕಾರ್ಯಕ್ಕೆ ಜಾತಿ, ವರ್ಣ, ಲಿಂಗ ಭೇದಗಳು ಅಡ್ಡ ಬರುವುದಿಲ್ಲ. ಅಧಿಕಾರಿ, ವ್ಯಾಪಾರಿ, ಉದ್ಯೋಗಿ, ರೈತ, ಕಾರ್ಮಿಕ, ಲೇಖಕ ಯಾರೇ ಆಗಲಿ ದಾಸೋಹಕ್ಕೆ ಸಲ್ಲುವ ಯಾವ ಕಾಯಕದಲ್ಲಾದರೂ ತೊಡಗಬಹುದು. ಕಾಯಕದಲ್ಲಿ ಮೇಲು-ಕೀಳು ಎಂಬ ಭಾವನೆ ಉದ್ಭವಿಸುವುದಿಲ್ಲ. "ಕಾಯಕ" ಅವಶ್ಯಕ ಹಾಗೂ ಅನಿವಾರ್ಯ. ದೇವರ ಹೆಸರಿನಲ್ಲಿ ಸೋಮಾರಿಪಟ್ಟ

ಕಟ್ಟಿಕೊಂಡು, ಅನ್ಯರ ಶ್ರಮದ ಫಲವನ್ನು ದೇವರಿಗೆ ಅರ್ಪಿಸಿ, ತಾನು ಉಂಡು 'ಪ್ರಸಾದಿ'ಯಾದನೆಂದರೆ ಎಲ್ಲಿದೆ ಪ್ರಸಾದ? ಕಾಯಕದಿಂದ ಬಂದ ಪ್ರಸಾದ ಗುರು, ಲಿಂಗ, ಜಂಗಮಕ್ಕೆ ಅರ್ಪಿತ. ಅದು ಸತ್ಯ., ಶುದ್ಧ ಭಕ್ತನ ನಿತ್ಯ ದಾಸೋಹ. ನುಲಿಯ ಚಂದಯ್ಯನ ವಿಚಾರದಂತೆ ಗುರು, ಲಿಂಗ ಜಂಗಮರೂ ಕಾಯಕ ಮಾಡಬೇಕು.

ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ |
ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುರುಹು ಹರಿವುದು |
ಜಂಗಮವಾದರೂ ಕಾಯಕದಿಂದಲೆ ವೇಷದ ಪಾಶ ಹರಿವುದು |
ಗುರುವಾದರೂ ಚರಸೇವೆಯ ಮಾಡಬೇಕು.
ಲಿಂಗವಾದರೂ ಚರಸೇವೆಯ ಮಾಡಬೇಕು |
ಜಂಗಮವಾದರೂ ಚರಸೇವೆಯ ಮಾಡಬೇಕು |
ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ |

ನಿತ್ಯ ಪರಿಪೂರ್ಣವಾದ, ಅಖಂಡದ ಇರವಾದ ಲಿಂಗ, ಅರಿವಾದ ಗುರು, ಆನಂದ ಸ್ವರೂಪವಾದ ಜಂಗಮಕ್ಕೆ ಕಾಯಕಷ್ಟ ಮಾಡಿ ದುಡಿದು; ದಾಸೋಹ ಮಾಡಿ, ಪ್ರಸಾದಿಯಾಗಬೇಕಾದ ಅರ್ಥದಲ್ಲಿ ಕ್ರೀಯೆ-ಜ್ಞಾನಗಳ ಹೊಂದಾಣಿಕೆ ಇದೆ. ಒಳಗೆ ಲಿಂಗದ ಅರಿವು, ಹೊರಗೆ ಲಿಂಗಕ್ಕೆಂದು ಕಾಯಕ. ಕಾಯಕದ ಮರೆಯಲ್ಲಿ ಲಿಂಗಾರ್ಥವಿದೆ, ಲಿಂಗವಿದೆ, ಕಾಯಕದಲ್ಲಿ ಮಾಡುವ ಕಾಯಕ ಅಂತರಂಗದಲ್ಲಿ ನಾಟಿ, ಮಾಡುವ ಕಾಯಕದ ಅರಿವುಊ, ಒಳಗೂ ನಡೆಯುತ್ತಿರುತ್ತದೆ. ಹೊರಗೆ ತೋಟ ಕೃಷಿ ಮಾಡುತ್ತಿದ್ದಂತೆ, ಅಂತರಂಗದ ಕೃಷಿಯೂ ನಡೆಯುತ್ತಿರಬೇಕು. ಪ್ರಭುವಿನ ಲಿಂಗದ ತೋಟ ಹೀಗಿದೆ.

ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ |
ಅಗಿದು ಕಳೆದನಯ್ಯಾ ಭ್ರಾಂತಿಯ ಬೇರ, ಒಡೆದು ಸಂಸಾರದ |
ಹೆಂಟೆಯು, ಬಡಿದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ |
ಅಖಂಡ ಮಂಡಲವೆಂಬ ಬಾವಿ, ಪವನವೇ ರಾಟಳೆ |
ಸುಷುಮ್ನನಾಳದಿಂದ ಉದಕವ ತಿದ್ದಿ ಬಸವಗಳೈವರು |
ಹಸೆಗೆಡಿಸವೆಂದು, ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ |
ಅವಾಗಳು ಈ ತೋಟದಲಿ ಜಾಗರವಿದ್ದು |
ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ |

ಶರಣರ ನಿರ್ಣಯದಂತೆ ಕಾಯಕ ಕೈಲಾಸ, ಕಾಯಕ ಪೂಜೆ, ಈ ಪೂಜೆ ಇಲ್ಲದೆ ಯಾವ ಪೂಜೆಯೂ ಪೂರ್ಣವಾಗಲಾರದು. "ಜ್ಞಾನವಿಲ್ಲದ ಕ್ರೀಯೆ ಜಡನು. ಕ್ರೀಯೆ ಇಲ್ಲದ ಜ್ಞಾನ ವಾಗ್ಜಾಲ.' ಭ್ರಾಂತು. ಇದು ಕಾರಣ ಸಿದ್ಧ ಸೋಮನಾಥಲಿಂಗವ ಕೂಡುವ ಶರಣಂಗೆ ಎರಡೂ ಬೇಕು.

ಈ ಕಾಯಕ ಮಹತ್ವವನ್ನು ಅರಿತು, ಆಚರಿಸಿದರೆ ರಾಷ್ಟ್ರಹಿತ ಸಾಧನೆಯನ್ನು ಮುಕ್ತಿಮಾರ್ಗವನ್ನು ಪಡೆಯಲು ಸಾಧ್ಯವಲ್ಲವೆ.





# ಧರ್ಮಕ್ರಾಂತಿಯ ನೇತಾರ ಬಸವಣ್ಣ



ಭಾರತಭೂಮಿ ಜಗದುದ್ಧಾರಕರಾದ ಅನೇಕ ಪುಣ್ಯ ಪುರುಷರಿಗೆ ಜನ್ಮವಿತ್ತ ನಾಡು. ಭಾರತದ ಇತಿಹಾಸದಲ್ಲಿ 12ನೇ ಶತಮಾನ ಒಂದು ಚಿರಸ್ಮರಣೀಯ ಯುಗ. ಏಕೆಂದರೆ ಈ ಕಾಲದಲ್ಲೇ ಬಸವಣ್ಣನವರು ಮನುಕುಲದ ಬಾಳಿನ ಬೆಳಕಾಗಿ ಬಂದವರು. ಬಸವಣ್ಣನವರು ಶತಮಾನಗಳಿಂದ ನಡೆದು ಬಂದ ಅರ್ಥಹೀನ ಅಂಧಾನುಕರಣದ ಬಂಧನವನ್ನು ಕಿತ್ತೊಗೆದು ಮಾನವತೆಯನ್ನು ಒಂದುಗೂಡಿಸುವ ಮಹಾ ಕಾರ್ಯದಲ್ಲಿ ತೊಡಗಿ ಜಗಜ್ಯೋತಿಯೆನಿಸಿದರು. ಶರಣರು ನುಡಿದಂತೆ "ಕಲ್ಯಾಣವೆಂಬ ಪ್ರಣತಿಯಲ್ಲಿ, ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ

---

ಪೂಜ್ಯ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಿದ ಸುಭಾಷಿತ (1982)





ಜ್ಯೋತಿಯ ಮುಟ್ಟಿಸಲು ತೊಳಗಿ ಬೆಳಗುತಿಪ್ಪುದು ಶಿವನ ಪ್ರಕಾಶ" ಎಂದಂತೆ ತೊಳಗಿ ಬೆಳಗಿದರು.

ಬಸವಣ್ಣನವರು ತಮ್ಮ ಆತ್ಮಶಕ್ತಿ ಸಾಧನೆಯಿಂದ ಮಹಾನ್ ವ್ಯಕ್ತಿಯಾದರೂ ಸಾಮಾನ್ಯವಾದ ಕರಣಿಕ ವೃತ್ತಿಯಿಂದ ಜೀವನವನ್ನು ಆರಂಭಿಸಿ ಚಾಲುಕ್ಯ ಸಾಮ್ರಾಜ್ಯದ ಮಹಾಮಂತ್ರಿಯಾದರು. ಸಂಸಾರದಲ್ಲಿದ್ದೂ ಸಂಸಾರವನ್ನು ಗೆದ್ದು ವಿಭೂತಿ ಪುರುಷರೆನಿಸಿದರು. ಅಂದಿನ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿದ್ದ ತೊಡಕುಗಳನ್ನು, ಭಿನ್ನ ಭಾವನೆಗಳನ್ನು ಬಿಡಿಸುವುದರಲ್ಲಿ ಯಶಸ್ಸು ಗಳಿಸಿದ ಮಹಾಪುರುಷರು.

ಜನಜೀವನದಲ್ಲಿ ಇರುವ ಮೇಲು-ಕೀಳು, ಹಿರಿಯ-ಕಿರಿಯ, ಉತ್ತಮ-ನೀಚ ಎಂಬ ಭಿನ್ನತೆಯನ್ನು ಅಳಿಸಲು ಯತ್ನಿಸಿ,

"ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ
ಕೂಡಲ ಸಂಗಮದೇವ
ನಿಮ್ಮ ಮನೆಯ ಮಗನೆಂದಿನಿಸಯ್ಯಾ"

ಎಂದು ಸಾರಿ ಎಲ್ಲರಲ್ಲಿಯೂ ಚೇತನಸ್ವರೂಪನಾಗಿರುವ ಪರಮಾತ್ಮ ಎಲ್ಲ ಜೀವರ ಸೂತ್ರಧಾರಿ. ಅಂದಮೇಲೆ ಯಾವುದೇ ರೀತಿಯ ಭಿನ್ನಭಾವಗಳು ಸಮಾಜದಲ್ಲಿ ಇರಬಾರದೆಂದು ಸಾರಿದರು. ಶತಶತಮಾನಗಳಿಂದ ಎಲ್ಲಾ ರೀತಿಯಿಂದಲೂ ಶೋಷಿತರಾದ ಅಸ್ಪೃಶ್ಯರನ್ನು ಶರಣರೆಂದೆನಿಸಿದ ಮಹಾನ್ ಕ್ರಾಂತಿಪುರುಷರು. ಅವರು ಸಮಾಜೋದ್ಧಾರಕರೂ, ಧರ್ಮೋದ್ಧಾರಕರೂ ಆದ ಯುಗಪ್ರವರ್ತಕರೆನ್ನಬಹುದು. ಸಮಾಜದಿಂದ ಕಡೆಗಣಿಸಲ್ಪಟ್ಟ ಹರಳಯ್ಯ, ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಮೋಳಿಗೆ ಮಾರಯ್ಯ- ಮುಂತಾದ ಹಿಂದುಳಿದ ಭಕ್ತರಿಗೆ ಸಮಾನತೆಯ ಕುರುಹಾಗಿ, ಆತ್ಮಶಕ್ತಿಯನ್ನರಿಯುವ ದರ್ಪಣವನ್ನಾಗಿ ಇಷ್ಟಲಿಂಗವನ್ನಿತ್ತು ಅನುಗ್ರಹಿಸಿದರು ಮತ್ತು ಅಧ್ಯಾತ್ಮದ ತುತ್ತತುದಿಯನ್ನು ಮುಟ್ಟಿದ ಅಲ್ಲಮಪ್ರಭು, ಸಿದ್ಧರಾಮೇಶ್ವರ, ಚನ್ನಬಸವಣ್ಣ, ಅಕ್ಕಮಹಾದೇವಿ- ಮುಂತಾದ ಮಹಾಶರಣರ ಪಂಕ್ತಿಯಲ್ಲಿ ಸಮಾನರನ್ನಾಗಿಸಿ ಇತಿಹಾಸದಲ್ಲಿ ಅಪೂರ್ವ ಕ್ರಾಂತಿಯನ್ನೆಸಗಿದರು.

ಬಸವಣ್ಣನವರು ಅಂದು ಕಟ್ಟಿ ಬೆಳೆಸಿದ ಮಹಾಮನೆಯ ಅನುಭವ ಮಂಟಪದಲ್ಲಿ ಎಲ್ಲ ಜಾತಿ, ಎಲ್ಲ ಭಾಷೆ, ಎಲ್ಲ ನಾಡಿನ ಆತ್ಮಸತ್ಯಾನ್ವೇಷಿಗಳು ಒಂದುಗೂಡಿ, ನಾವೆಲ್ಲ ಒಂದೇ ಎಂಬ ಭಾವನೆಯಿಂದ ಬೆಳೆದು ಬೆಳಗಿದರು. ಅವರಿಂದ ಧರ್ಮಭಂಡಾರಕ್ಕೆ, ಕನ್ನಡದ ವಚನಸಾಹಿತ್ಯ ಸಂಪತ್ತಿಗೆ ಅಮೂಲ್ಯ ಕೊಡುಗೆಯನ್ನು ಕೊಡಿಸಿದ







ಬಸವಣ್ಣನವರ ಶಕ್ತಿಸಾಧನೆ ಅಸಾಧಾರಣವಾದುದು.

ಸಮಾಜದ ಸಮಾನತೆಯ ಸಾಮಾಜಿಕ ಕ್ರಾಂತಿಯನ್ನೆಸಗಿದ ಬಸವಣ್ಣನವರು ರಾಷ್ಟ್ರದ ಆರ್ಥಿಕ ವಿಚಾರದತ್ತ ಕೊಟ್ಟ ಕೊಡುಗೆ ಅದ್ವಿತೀಯವಾದದ್ದು. ಕಾಯಕವೇ ಕೈಲಾಸವೆಂಬ ದಿವ್ಯಸಂದೇಶವನ್ನು ಬಿತ್ತರಿಸಿ, ಮಾನವ ತನ್ನ ಬದುಕಿಗಾಗಿ ಯಾವುದಾದರೊಂದು ಸತ್ಯಶುದ್ಧವಾದ ಕಾಯಕವನ್ನು ಅವಲಂಬಿಸಲೇಬೇಕು. ದುಡಿದುದನ್ನು ತನ್ನೊಬ್ಬನಿಗೇ ಅಲ್ಲ ಇಡೀ ಸಮಾಜದ ಅಭ್ಯುದಯಕ್ಕೆ ನೀಡಬೇಕೆಂಬ ದಿವ್ಯತತ್ತ್ವವನ್ನು ಅಂದಿನ ಸಮಾಜದಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದರು. ಅದರ ಸಂಕೇತವಾಗಿ ನುಲಿಯ ಚೆಂದಯ್ಯ, ಆಯ್ದಕ್ಕಿ ಮಾರಯ್ಯ, ಮಡಿವಾಳ ಮಾಚಯ್ಯ ಮುಂತಾದ ನೂರಾರು ಶರಣರು ನಿರ್ದಿಷ್ಟ ಕಾಯಕವನ್ನು ಅವಲಂಬಿಸಿದರೆಂಬುದು ವ್ಯಕ್ತವಾಗುತ್ತದೆ. ಧನ ಅಥವಾ ಸಂಪತ್ತು ಶರಣರ ದೃಷ್ಟಿಯಲ್ಲಿ ಮಾಯೆಯೂ ಅಲ್ಲ, ತಿರಸ್ಕರಣೀಯವೂ ಅಲ್ಲ. ಇದು ಜೀವನದ ಎಲ್ಲ ಕಾರ್ಯಗಳಿಗೂ ಅತ್ಯಾವಶ್ಯಕವಾದುದು. ಸಾಧನೆಯ ಮಾರ್ಗದಲ್ಲಿ ಕೂಡ ಸಂಪತ್ತು ತಿರಸ್ಕಾರಕ್ಕೆ ಗುರಿಯಾಗಬೇಕಿಲ್ಲ. ಆದರೆ ಅದು ಮೋಹ ಮೂಲವಾಗಿ ಬಂಧಕವಾಗಲಾರದು. ಅದನ್ನು ಪಡೆಯುವ ಮಾರ್ಗ ಮಾತ್ರ ಪರಿಶುದ್ಧವಾದದ್ದಾಗಿರಬೇಕು. ಅದು ಸಮಾಜದ ಜನರಿಗೆ ಉಪಯೋಗಕ್ಕೆ ಬರಬೇಕು. ಮನುಷ್ಯ ಕೇವಲ ಗಳಿಸುವುದನ್ನು ಕಲಿತರೆ ಸಾಲದು ಅದನ್ನು ಹೇಗೆ ಬಳಸಬೇಕು ಎಂಬುದನ್ನು ಅರಿತಿರಬೇಕು. ನಮ್ಮ ಭಾರತದ ಆರ್ಥಿಕ ವಿಷಮತೆಗೆ ಈ ತತ್ತ್ವವನ್ನು ಅರಿಯದಿರುವುದೇ ಕಾರಣ. (ಒಂದು ಕಡೆ ಕಣ್ಣನ್ನೇ ಅಂಧವಾಗಿಸುವ ತೀವ್ರ ಬೆಳಕು, ಮತ್ತೊಂದೆಡೆ ಕಿಂಚಿತ್ ಬೆಳಕೂ ಇಲ್ಲದ ಕಾರ್ಗತ್ತಲೆ) ಉಳ್ಳವರು ಇಲ್ಲದವರ ಬಗ್ಗೆ ಸಹಾನುಭೂತಿಯಿಂದ, ಮಾನವತೆಯಿಂದ ವರ್ತಿಸುವುದೇ ಧರ್ಮದ ತಿರುಳು. ಸಂಗ್ರಹವಾದದ್ದು ಸರಿಯಾದ ರೀತಿಯಲ್ಲಿ ಸಮಾಜಕ್ಕೆ ವಿತರಣೆಯಾಗದಿದ್ದರೆ ಆಂದೋಲನ ಅನಿವಾರ್ಯ. ಹೀಗೆ ಮಾಡಿದ್ದರೆ ನಾವು ಪಶುಪಕ್ಷಿಗಳಿಗಿಂತ ಕಡೆ. ಬಸವಣ್ಣನವರ ಮಾತಿನಲ್ಲೇ ಹೇಳುವುದಾದರೆ -

'ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಗುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆಕೋಳಿಯಿಂದ ಕರಕಷ್ಟ
ಕೂಡಲಸಂಗಮದೇವಾ'

ಕಾಯಕವೆಂದು ಕಾಯವ ಬಳಲಿಸದೆ, ತನುಕರಗದೆ, ಮನನೋಯದೆ, ಬೇಡಿಕಾಡಿ ಮಾಡುವುದು ದಾಸೋಹವಾಗುವುದಿಲ್ಲ. ತನು ಮತ್ತು ಧನ ಇವೆರಡೂ ಇವುಗಳನ್ನು ಉಪಯೋಗಿಸುವ ಮನದಿಂದ ಮಹತ್ತನ್ನು ಪಡೆಯುತ್ತವೆ.





ಅವರ ವಿಚಾರಧಾರೆ ಅಂದಿನ ಸಮಾಜಕ್ಕೆ ಮಾತ್ರವಲ್ಲದೆ ಎಂದೆಂದಿಗೂ ಎಲ್ಲರಿಗೂ ಮಾರ್ಗದರ್ಶಕವಾಗುವಷ್ಟು ವ್ಯಾಪಕವಾದ ಶಕ್ತಿಯನ್ನು ಪಡೆದಿದೆ. ಏಕೆಂದರೆ ಅವರು ಧರ್ಮದ ವಿಚಾರದಲ್ಲಾಗಲಿ, ಸಮಾಜ, ವ್ಯಕ್ತಿ ಇವುಗಳ ಅಭ್ಯುದಯದ ವಿಚಾರದಲ್ಲಾಗಲಿ ಅಂಧಶ್ರದ್ಧೆಯನ್ನು ಅವಲಂಬಿಸದೆ ಜೀವನದ ಹೋರಾಟಕ್ಕೆ ಚಿರಂತನವಾದ ಉತ್ತರವನ್ನು ಕಂಡುಕೊಂಡು, ಅದನ್ನು ತಮ್ಮ ಆಚರಣೆಯಲ್ಲಿ ತಂದು ಅದಕ್ಕೆ ಪುನರ್ಜನ್ಮವನ್ನಿತ್ತು ಪೂರ್ಣಧರ್ಮದ ಜೀವಂತಶಕ್ತಿಯನ್ನಾಗಿಸಿದರು.

ಸತ್ಯವೆನಿಸಿದುದನ್ನು ಯಾವ ದಾಕ್ಷಿಣ್ಯವೂ ಇಲ್ಲದೆ ಪ್ರತಿಪಾದಿಸಿದರು. ಸತ್ಯವನ್ನು ಸಾರಿದ ಅವರ ನುಡಿಗಳು ಕ್ರಾಂತಿಕಾರಕವಾಗಿ ಪರಿಣಮಿಸಿದವು ಮತ್ತು ಧರ್ಮಕ್ಕೆ, ಸಮಾಜಕ್ಕೆ ಅಂಟಿದ ಕೊಳೆಯನ್ನು ತೊಳೆದು ಬೆಳಕನ್ನು ಉಜ್ವಲಗೊಳಿಸಲು ಸಹಾಯಕವಾದವು.

ಬಸವಣ್ಣನವರು ಗಹನವಾದ, ಜನಸಾಮಾನ್ಯರಿಗೆ ನಿಲುಕದ, ತಾತ್ವಿಕ ಚರ್ಚೆಯನ್ನು ಬೋಧಿಸಲಿಲ್ಲ. ಈ ಜಗತ್ತಿನಲ್ಲಿ ಮಾನವನಿಗೊಂದು ವಿಶಿಷ್ಟ ಸ್ಥಾನವಿದೆ. ಮನುಷ್ಯನ ಬದುಕು ಸುಂದರವಾಗಿರಬೇಕಾದರೆ, ತನ್ನಂತೆಯೇ ಇರುವ ಮತ್ತೊಬ್ಬ ಮನುಷ್ಯನೊಡನೆ ಹೇಗೆ ವರ್ತಿಸಬೇಕು ಎಂಬುದನ್ನು ಬೋಧಿಸಿದರು. ಧನಮದ, ವಿದ್ಯಾಮದ, ಇನ್ನಾವ ಮದದಿಂದಲೋ ಅಹಂಕಾರಭರಿತನಾಗಿ, ಇತರರನ್ನು ತುಚ್ಛವಾಗಿ ಕಾಣಬಾರದು.

ಏನ ಬಂದಿರಿ, ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲ ಸಂಗಮದೇವರು

ಬಸವಣ್ಣನವರ ಪ್ರತಿಯೊಂದು ವಚನ ನೇರವಾದವು, ಲೋಕದ ಡೊಂಕನ್ನು ತಿದ್ದುವಂಥವು. ಸಾರ್ವಕಾಲಿಕ ಸತ್ಯವಾದವು. ಅಂತೆಯೇ 'ಆಚಾರವೇ ಸ್ವರ್ಗ ಅನಾಚಾರವೇ ನರಕ, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ', ಮುಂತಾದ ನುಡಿಗಳು ಸದಾ ಸ್ಮರಣಾರ್ಹವಾದವುಗಳು. ಸ್ವಾರ್ಥ, ಅಹಂಕಾರ, ದುರಾಸೆ, ನಿಂದನೆ- ಮುಂತಾದವುಗಳನ್ನು ಬದಿಗೊತ್ತಿ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳಲು ಹೇಳಿದರು. ಈ ಬುದ್ಧಿವಾದ ಎಲ್ಲ ಕಾಲಕ್ಕೂ ಅನ್ವಯವಾದದ್ದು.

ಬಸವಣ್ಣನವರು 12ನೇ ಶತಮಾನದ ಕ್ರಾಂತಿಕಾರಕ ಪುರುಷರು. ಅಂದಿನ ಸಮಾಜದಲ್ಲಿ ಕಂಡುಬಂದ ಅಂಕುಡೊಂಕುಗಳನ್ನು ಸೂಕ್ಷ್ಮವಾಗಿ ಗಮನಿಸಿ, ಲೋಕದ







ಡೊಂಕನ್ನು ತಿದ್ದಲು ಶರಣ ಸಮೂಹವನ್ನೇ ಬೆಳೆಸಿದರು. ಅಧರ್ಮ, ಅನ್ಯಾಯ, ಅತ್ಯಾಚಾರ, ಮೂಢನಂಬಿಕೆಗಳನ್ನು ಧೈರ್ಯವಾಗಿ ಎದುರಿಸಿ ತಿಳಿಭಾಷೆಯ ವಚನಗಳು, ಅವರ ಮನಸ್ಸಿಗೆ ನಾಟುವಂತೆ ಮಾಡಿ, ಅದು ಪರಿಣಾಮಕಾರಿಯಾಗಿ ಅದರ ಮನಸ್ಸಿನಲ್ಲಿ ಪ್ರಭಾವ ಬೀರುವಂತೆ ಮಾಡಿದ್ದಾರೆ. ನಡೆದಂತೆ ನುಡಿದು, ನುಡಿದಂತೆ ನಡೆದು ಆದರ್ಶ ತೋರಿದ್ದಾರೆ. ಈ ಶರಣ ಸಮೂಹದ ನೇತಾರರು ತಾವೇ ಆಗಿದ್ದರೂ 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಹೇಳಿ ವಿನಯ ತೋರಿದ್ದಾರೆ.

ಬಸವಣ್ಣನವರ ನಡೆನುಡಿಗಳಲ್ಲಿ ಎಂದೂ ಭಿನ್ನತೆ ಇರಲಿಲ್ಲ. ಆದುದರಿಂದ ಅವರ ನುಡಿ ಸಾಮಾನ್ಯವಾದುದಲ್ಲ.

ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ,
ನಡೆಯೊಳಗೆ ನುಡಿಯ ಪೂರೈಸುವ
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ;
ಎನ್ನ ನಡೆ ನುಡಿಯಲ್ಲಿ
ಒಂದು ಜವೆ ಕೊರತೆಯಾದೊಡೆ
ಎನ್ನನದ್ದಿ ನೀನೆದ್ದು ಹೋಗು, ಕೂಡಲ ಸಂಗಮದೇವಾ

ಎಂದು ಶಿವನಿಗೆ ಆಣೆಯಿಟ್ಟು ನಡೆದವರು. ಆದುದರಿಂದ ಮನುಷ್ಯ ನಡೆನುಡಿಗಳಲ್ಲಿ ಅಂತರವಿಲ್ಲದಂತೆ ವರ್ತಿಸುವುದೇ ಜೀವನದ ಪ್ರಮುಖ ಸಾಧನೆ ಎಂಬ ಮಹಾನ್ ಸಂದೇಶವನ್ನು ಸಾರಿದ್ದಾರೆ. ಆಗ ನಾವು ಪರಮಾತ್ಮನ ಕೃಪೆಗೆ ಪಾತ್ರರಾಗುತ್ತೇವಷ್ಟೇ ಅಲ್ಲದೆ ಸಮಾಜದಲ್ಲಿರುವ ಈರ್ಷೆ, ಅಸೂಯೆ, ದ್ವೇಷ, ಅಂತಃಕಲಹ ಮುಂತಾದ ದುರ್ಗುಣಗಳು ದೂರವಾಗಿ ಸುಂದರವಾದ ಸಮಾಜ ನಿರ್ಮಾಣವಾಗುತ್ತದೆ. ಅವರ ನುಡಿಯಲ್ಲಿ ಇಂದು ನಮ್ಮ ಮುಂದೆ ಬರುವ ಸಮಸ್ಯೆಗಳನ್ನು ಬಿಡಿಸಬಲ್ಲ ಅಮೃತ ಸಂದೇಶಗಳಿವೆ. ಬಸವಣ್ಣನವರ ಜೀವನ ವಿಶ್ವದ ಜನಾಂಗಕ್ಕೆ ಆದರ್ಶಪ್ರಾಯವಾದುದು. ಆದರೆ ಜಗದುದ್ಧಾರಕ್ಕಾಗಿ ಬಂದ ವಿಶ್ವಮಾನವರನ್ನು ಒಂದು ಜಾತಿಯ, ಒಂದು ಕಾಲದ, ಒಂದು ನಾಡಿನ ವೃತ್ತದಲ್ಲಿ ಬಂಧಿಸಿ ಅವರ ಮಹೋನ್ನತ ವ್ಯಕ್ತಿತ್ವವನ್ನು, ಅವರು ಸಾರಿ ತೋರಿದ ಆಧ್ಯಾತ್ಮಿಕ ಮೌಲ್ಯಗಳನ್ನು ಅವರವರ ಅನುಯಾಯಿಗಳೇ ಸಂಕುಚಿತಗೊಳಿಸಿರುವುದು ವಿಷಾದಕರ ಸಂಗತಿ. ವೈಜ್ಞಾನಿಕವಾಗಿ ಮಹೋನ್ನತಿಯನ್ನು ಸಾಧಿಸಿರುವ ನಾವು ಇಂದಾದರೂ ಬಸವಣ್ಣನವರಂಥ ಮಹಾನುಭಾವರಿಂದ ಬಿತ್ತರಿಸಲ್ಪಟ್ಟ ವಿಶ್ವವ್ಯಾಪಕವಾದ ಜೀವನ ಮೌಲ್ಯಗಳನ್ನು ಮನಗಾಣಬೇಕಾಗಿದೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜಗದ ಜನರೆಲ್ಲ ಒಂದೆಂಬ ಭಾವನೆಯತ್ತ ಸಾಗಬೇಕಾಗಿದೆ. ಆದುದರಿಂದ ಬಸವಣ್ಣನವರ ಸಂದೇಶ ಇಂದಿನ ಪರಿಸ್ಥಿತಿಯಲ್ಲಿ ದೇಶ, ಕಾಲ, ಜಾತಿ, ಮತ, ಪಂಥಗಳ ಬಂಧನವನ್ನು ಮೀರಿ ವಿಶ್ವವ್ಯಾಪಿಯಾಗುವಂತೆ





ಮಾಡಬೇಕಾದುದು ಬಸವಣ್ಣನವರ ವಿಷಯದಲ್ಲಿ ಹಾಗೂ ಮಾನವತೆಯ ವಿಷಯದಲ್ಲಿ ಅಭಿಮಾನವುಳ್ಳ ಪ್ರತಿಯೊಬ್ಬ ಧರ್ಮದರ್ಶಕರ ಆದ್ಯಕರ್ತವ್ಯ ಎಂದು ಹೇಳಬಯಸುತ್ತೇವೆ. ಅನೇಕ ಶತಮಾನಗಳ ನಂತರ ಅವರನ್ನು ಸ್ಮರಿಸಿ ಅವರ ಜಯಂತಿ ಉತ್ಸವವನ್ನು ಆಚರಿಸುವುದು ಔಪಚಾರಿಕಕ್ರಿಯೆ ಆಗಬಾರದು. ಅವರ ತತ್ವಗಳನ್ನು ನಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಂಡು ಅವರು ಅಂದು ಏರಿದ ಎತ್ತರವನ್ನು ಮುಟ್ಟಲು ನಾವೆಲ್ಲರೂ ನೈಜವಾಗಿ ಪ್ರಯತ್ನಿಸಬೇಕಾಗಿದೆ.

'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ;  
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ;  
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ;  
ಕೂಡಲಸಂಗಮದೇವ

ಎಂದು ಎಲ್ಲರ ಐಹಿಕ ಜೀವನದಲ್ಲಿ ಬಸವಣ್ಣನವರು ಆಧ್ಯಾತ್ಮದ ಚೇತನವನ್ನು ತುಂಬಿ ಆದರ್ಶಸಮಾಜವನ್ನು ನಿರ್ಮಿಸಲು ನಮ್ಮನ್ನು ಎಚ್ಚರಿಸುವ ಉತ್ಸವವು ಬಸವಣ್ಣನವರ ಜಯಂತಿ ಆಗಲೆಂದು ಆಶಿಸುತ್ತೇವೆ.

□

ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ  
ಇಂಗಿತವನೇನೆಂದು ಬೆಸಗೊಂಬಿರಯ್ಯಾ  
ಅವರ ನಡೆಯೆ ಆಗಮ, ಅವರ ನುಡಿಯೇ ವೇದ  
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯಾ?  
ಅದೆಂತೆಂದಡೆ ಸಾಕ್ಷಿ!  
"ವೃಕ್ಷಾದ್ಭವತಿ ಬೀಜಂ ಹಿ ತದ್ವೃಕ್ಷೇ ಲೀಯತೇ ಪುನಃ|  
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ||" ಎಂದುದಾಗಿ  
ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು.  
ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು  
ಆ ಪ್ರಕಾರದಲ್ಲಿ ಲಿಂಗದೊಳಗಿಂದ ಪುರಾತನರುದ್ಭವಿಸಿ  
ಮರಳಿ ಆ ಪುರಾತನರು ಆ ಲಿಂಗದೊಳಗೆ ಬೆರಸಿದರು ನೋಡಿರಯ್ಯಾ  
ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ  
ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**



# ಪಠ್ಯಕ್ರಮದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣದ ಅವಶ್ಯಕತೆ



ಮಾನವನಲ್ಲಿ ಸುಪ್ತವೂ ಗುಪ್ತವೂ ಆಗಿರುವ ಪ್ರತಿಭೆಯನ್ನು ವಿಕಾಸಮಾಡಿ, ವಸ್ತುಗಳ ಬಗೆಗೆ ನಿಜಪರಿಸ್ಥಿತಿಯ ಜ್ಞಾನವನ್ನುಂಟುಮಾಡುವ ಸಲುವಾಗಿ ಶಿಕ್ಷಣಕ್ರಮವೇರ್ಪಟ್ಟಿದೆ. ಇಂತಹ ಶಿಕ್ಷಣಕ್ರಮ ಮಾನವನ ಸರ್ವಾಂಗೀಣ ಪ್ರಗತಿಗೆ ಸಾಧಕವಾಗಿರಬೇಕು. ಅಂದರೆ ಶಿಕ್ಷಣಕ್ರಮವು ಮಾನವನ ಪರಿಪೂರ್ಣ ವಿಕಾಸಕ್ಕೆ ಸರ್ವಸಮರ್ಪಕವಾಗಿ ನೆರವಾಗಬೇಕು.

ಶಿಕ್ಷಣವೇತ್ತರು ಆಧುನಿಕ ಶಿಕ್ಷಣಕ್ರಮದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ ಯೋಗ್ಯ ಶಿಕ್ಷಣ ಲಭಿಸುವಂತೆ

---

ದಿನಾಂಕ 5-2-1977 ರಂದು ಬೆಂಗಳೂರಿನಲ್ಲಿ ನಡೆದ "ಧರ್ಮಜಾಗೃತಿ" ಸಮ್ಮೇಳನಕ್ಕೆ ಶ್ರೀ ಸುತ್ತೂರು ವೀರಸಿಂಹಾಸನಾಧೀಶರಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿರಾಜೇಂದ್ರ ಮಹಾಸ್ವಾಮಿಗಳವರು ಅನುಗ್ರಹಿಸಿದ ಸಂದೇಶ ಭಾಷಣ.

ಸಂಯೋಜಿಸಿರುವುದು ಅಭಿನಂದನೀಯ. ಇದು ಪರಿಪೂರ್ಣವಾಗಿಲ್ಲ. ಪ್ರಸಕ್ತ ಪಠ್ಯಕ್ರಮವು ಧಾರ್ಮಿಕ ಮತ್ತು ಅವಕಾಶವನ್ನು ಅವಶ್ಯವಾಗಿ ಕಲ್ಪಿಸಿಕೊಡಬೇಕು. ಇಂದಿನ ಪಠ್ಯಕ್ರಮವು ಈ ರೀತಿಯ ಅವಕಾಶವಿಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಆಧುನಿಕ ಪಠ್ಯಕ್ರಮದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣವು ಸಂಯೋಜಿಸಲ್ಪಟ್ಟಾಗ ಮಾತ್ರ ಶಿಕ್ಷಣವು ಪರಿಪೂರ್ಣವಾಗಿ ಶೋಭಿಸುವುದು.

**ಧಾರ್ಮಿಕ ಶಿಕ್ಷಣದ ಅವಶ್ಯಕತೆ**

"ಧರ್ಮ" ಎಂಬ ಪದವು ಸಂಸ್ಕೃತದ "ಧೃ" ಧಾತುವಿನಿಂದ ನಿಷ್ಪನ್ನವಾಗಿದೆ. ಧರ್ಮದ ವ್ಯಾಖ್ಯಾನವನ್ನು ವಿದ್ವಾಂಸರು ವಿಸ್ತೃತವಾಗಿ ಮಾಡಿದ್ದಾರೆ. ವೈಶೇಷಿಕ ದರ್ಶನದಲ್ಲುಕ್ತವಾದ ಧರ್ಮದ ವ್ಯಾಖ್ಯೆ ಇಂತಿದೆ.

"ಯತೋ ಅಭ್ಯುದಯ ನಿಶ್ರೇಯಸ ಸಿದ್ಧಿಃ ಸ ಧರ್ಮಃ" ಇಹದಲ್ಲಿ ಅಭ್ಯುದಯ. ಪರದಲ್ಲಿ ನಿಶ್ರೇಯಸ್ಸು ಇವು ಯಾವುದರಿಂದ ಲಭ್ಯವಾಗುವುದೋ ಅದು ಧರ್ಮ. ಅಂದರೆ ಯಾವುದು ನೀತಿ ನಿಯಮಗಳಿಗೆ ಅನುಗುಣವಾಗಿ, ಇಹದಲ್ಲಿ ಮಾನವನ ಏಳಿಗೆಗೆ ಸಾಧಕವಾಗಿ, ಪರದಲ್ಲಿ ಅವನಿಗೆ ಕಲ್ಯಾಣವನ್ನುಂಟುಮಾಡುವುದೋ ಅದೇ ಧರ್ಮ. ಇಂತಹ ಧರ್ಮವನ್ನು ಶಿಕ್ಷಣಕ್ರಮದಲ್ಲಿ ಕಡೆಗಣಿಸುವುದು ಉಚಿತವೇ? ಸಾಧುವೇ? ವಿವೇಚಿಸಿ.

"ಧರ್ಮೋ ರಕ್ಷತಿ ರಕ್ಷಿತಃ," ಧರ್ಮವು ತನ್ನನ್ನು ರಕ್ಷಿಸಿದವರನ್ನು ಅಂದರೆ, ಧರ್ಮ ಮಾರ್ಗದಲ್ಲಿ ನಡೆಯುವವರನ್ನು ರಕ್ಷಿಸುತ್ತದೆ. ವ್ಯಕ್ತಿ ಅವರವರ ಅಭಿರುಚಿಗೆ ಅನುಗುಣವಾಗಿ ಯಾವ ಧರ್ಮವನ್ನು ಬೇಕಾದರೂ ಸ್ವೀಕರಿಸಬಹುದು. ಆತನು ಸ್ವೀಕರಿಸಿದ ಧರ್ಮದಲ್ಲಿ ನಿಷ್ಠೆಯಿಂದ ನಡೆದದ್ದೇ ಆದರೆ ಆ ವ್ಯಕ್ತಿಯ ಆತ್ಮಕಲ್ಯಾಣ ವಾಗುವುದಷ್ಟೇ ಅಲ್ಲದೆ ಮಾನವಕಲ್ಯಾಣವೂ ಆಗುವುದು. ಪ್ರತಿಯೊಂದು ಧರ್ಮದಲ್ಲಿಯೂ ನೀತಿಗೆ ಅಗ್ರಸ್ಥಾನ ಕೊಟ್ಟಿರುವುದನ್ನು ಗಮನಿಸಬಹುದು. "ಆತ್ಮವತ್ ಸರ್ವಭೂತಾನಿ ಯಃ ಪಶ್ಯತಿ ಸ ಪಂಡಿತಃ" ಎಂಬ ಸರ್ವಜ್ಞನ ನುಡಿಯಲ್ಲಿಯೂ "ನಿನ್ನ ನೆರೆಹೊರೆಯವರನ್ನು ನಿನ್ನಂತೆಯೇ ಪ್ರೀತಿಸು" ಎಂಬ ಮಹಾತ್ಮ ಏಸುಕ್ರಿಸ್ತನ ಮಾತಿನಲ್ಲಿಯೂ ಕಾಣಬಹುದಾಗಿದೆ.

ಏಸುಕ್ರಿಸ್ತ, ಬುದ್ಧ, ಮಹಾವೀರ, ಮಹಮದ್ ಪೈಗಂಬರ್, ಶಂಕರ, ರಾಮಾನುಜ, ಬಸವ, ಮಧ್ವ, ಚೈತನ್ಯ, ಗುರುನಾನಕ್ ಮೊದಲಾದ ಮಹನೀಯರು ಧರ್ಮದ ಶ್ರೇಷ್ಠತತ್ತ್ವಗಳನ್ನು ಅರುಹಿರುವರು. ಈ ಎಲ್ಲ ತತ್ತ್ವಗಳ ಗುರಿಯೂ ಮಾನವನ ಕಲ್ಯಾಣದ ಸಲುವಾಗಿದೆಯೆಂಬುದನ್ನು ಮರೆಯಲಾಗದು. ಕೆಲವೊಮ್ಮೆ ಜಾತಿ ಮತ ಪಂಥಗಳ ವಿಧಿವಿಧಾನಗಳ ಆಚರಣೆಗಳಲ್ಲಿ ಭಿನ್ನತೆ ತೋರಿಬಂದರೂ ಮೂಲಭೂತವಾದ ನೈತಿಕ ಅಂಶಗಳಲ್ಲಿ ಏಕತೆ ಇರುವುದನ್ನು ಗಮನಿಸಬಹುದಾಗಿದೆ.





ಸಾಹಿತ್ಯ, ಕಲೆ, ವಿಜ್ಞಾನ, ವಾಣಿಜ್ಯ ಮೊದಲಾದ ವಿಭಾಗಗಳಲ್ಲಿ ವ್ಯಕ್ತಿಯು ಎಷ್ಟೇ ಪಾಂಡಿತ್ಯವನ್ನು ಪಡೆದು ಅವುಗಳ ನೆರವಿನಿಂದ ಅಪರಿಮಿತವಾದ ಭೌತಿಕ ಸಂಪತ್ತನ್ನು ಗಳಿಸಿದಾಗ್ಯೂ, ಸಂತೃಪ್ತಿ, ಸಮಾಧಾನ, ನಿಜಸುಖಗಳನ್ನು ಪಡೆಯಲಾರ. ವಿಜ್ಞಾನದ ಪ್ರಗತಿಯಿಂದ ಅಮೆರಿಕಾ ಮೊದಲಾದ ದೇಶಗಳ ಜನರು ಅಪಾರ ಐಶ್ವರ್ಯಗಳಿಸಿ ಸಮೃದ್ಧ ಭೋಗಜೀವನವನ್ನು ನಡೆಸುತ್ತಿರುವರಾದರೂ ನಿಜಸುಖ, ಶಾಂತಿ, ಆನಂದ ಇವುಗಳಿಗಾಗಿ ಭಾರತದ ಶ್ರೇಷ್ಠ ಆಧ್ಯಾತ್ಮಿಕ ಮೌಲ್ಯಗಳತ್ತ ತಮ್ಮ ಗಮನವನ್ನು ಹರಿಸುತ್ತಿರುವುದು ಅವರ ಅತೃಪ್ತ ಜೀವನಕ್ಕೆ ಸಾಕ್ಷಿ. ಇದರಿಂದ ಶಿಕ್ಷಣ ಕ್ರಮವು ಕೇವಲ ಆಯಾ ವಿಷಯಕ್ಕೆ ಸಂಬಂಧಿಸಿದ ಜ್ಞಾನಾರ್ಜನೆಯನ್ನು ಮಾತ್ರ ತಿಳಿಸಿಕೊಡುವುದರ ಜೊತೆಗೆ ಧಾರ್ಮಿಕ ಜ್ಞಾನವನ್ನು ಅವಶ್ಯವಾಗಿ ಮಾಡಿಕೊಡಬೇಕೆಂಬುದು ಖಚಿತವಾಗಿ ತಿಳಿದುಬರುವುದು.

ಖ್ಯಾತ ವಿಜ್ಞಾನಿ ಐನ್‌ಸ್ಟಿನ್ನನು "ಧರ್ಮರಹಿತವಾದ ವಿಜ್ಞಾನ ಕುರುಡು, ವಿಜ್ಞಾನ ರಹಿತವಾದ ಧರ್ಮ ಕುಂಟು" ಎಂದು ಹೇಳಿರುವುದು ಮನನೀಯ. "ವಿಜ್ಞಾನ ಮತ್ತು ಧರ್ಮ" ಇವು ಪರಸ್ಪರ ಪೂರಕಗಳು. ಅತ್ಯಂತ ಮುಂದುವರಿದ ರಾಷ್ಟ್ರಗಳ ಶಿಕ್ಷಣಕ್ರಮವನ್ನು ಚೆನ್ನಾಗಿ ವಿವೇಚಿಸಿ ಅವುಗಳಿಂದ ಒದಗುವ ಫಲಗಳನ್ನು ಗಮನಕ್ಕೆ ತಂದುಕೊಂಡು ಅಲ್ಲಿ ಸಹಜವಾಗಿರುವ ನ್ಯೂನತೆಗಳನ್ನು ನಿವಾರಿಸಿ ನಮ್ಮ ದೇಶದ ಸಂಸ್ಕೃತಿಯ ಅಡಿಪಾಯದ ಮೇಲೆ ಶಿಕ್ಷಣಕ್ರಮವನ್ನು ಸುಸಂಬದ್ಧವಾಗಿ ಸಂಯೋಜಿಸಿದಾಗ ಮಾತ್ರ ಪರಿಣಾಮಕಾರಿಯಾದ ಫಲ ಸಾಧ್ಯ. ಆದುದರಿಂದ ಪ್ರಾಥಮಿಕ ಶಿಕ್ಷಣದಿಂದ ಮೊದಲುಗೊಂಡು ಸ್ನಾತಕೋತ್ತರ ಶಿಕ್ಷಣದವರೆಗೂ ಮಾನವ ಧರ್ಮದ ಮೂಲಭೂತ ತತ್ತ್ವಗಳನ್ನು ಆಧುನಿಕ ಶಿಕ್ಷಣಕ್ರಮದಲ್ಲಿ ಅವಶ್ಯವಾಗಿ ಸಂಯೋಜಿಸಬೇಕು.

ಇದರ ಜೊತೆಗೆ ವ್ಯಕ್ತಿಯ, ಸಮಾಜದ, ದೇಶದ ಹಿತದೃಷ್ಟಿಯಿಂದ ನೈತಿಕ ಶಿಕ್ಷಣವೂ ಅತ್ಯವಶ್ಯ. ಸಭ್ಯ, ಸುಂದರ, ಸುಸಂಸ್ಕೃತ ರಾಷ್ಟ್ರವನ್ನು ಕಟ್ಟಬೇಕಾದರೆ ಅದಕ್ಕೆ ನೀತಿಯೇ ಭದ್ರವಾದ ಅಡಿಗಲ್ಲು ಎಂಬುದನ್ನು ನಾವು ಮರೆಯಲಾಗದು.

ಜೀವನದಲ್ಲಿ "ನಿಷೇಧಕ ನೀತಿ"ಯನ್ನು ದಮನಮಾಡಿ "ವಿಧಾಯಕ ನೀತಿ"ಯನ್ನು ಬೆಳೆಸಬೇಕು. ಅಣ್ಣನವರ "ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ" ಅಂತರಂಗ ಬಹಿರಂಗಗಳ ಶುದ್ಧಿ ಹೊಂದಲು ಸರ್ವರೂ ಪ್ರಯತ್ನಿಸಬೇಕು. "ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದು ಒಲ್ಲದಿಪ್ಪುದೇ ನೇಮ, ಆಶೆಯಿಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ"ಮುಂತಾದ ಮಾತುಗಳು

ಎಲ್ಲ ಮಾನವರಿಗೂ ಅನ್ವಯವಾಗುತ್ತದೆ. ಈ ರೀತಿಯಾಗಿ ಮಾನವನ ದುಷ್ಟವೃತ್ತಿಯನ್ನು ದೂರಮಾಡಲು ನೈತಿಕವಿದ್ಯೆ, ಶಿಕ್ಷಣ ಅತ್ಯಗತ್ಯ.

ಮಾನವನು ಸತ್ಯ-ಅಹಿಂಸೆ-ಅಸ್ತೇಯ-ಬ್ರಹ್ಮಚರ್ಯ ಅಪರಿಗ್ರಹ ಮುಂತಾದುವುಗಳನ್ನು ಅಳವಡಿಸಿಕೊಂಡು ಜೀವನವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳಬೇಕು.

"ಸತ್ಯಂವದ, ಧರ್ಮಂಚರ"
"ಸತ್ಯಾನ್ನಾಸ್ತಿ ಪರೋಧರ್ಮಃ"
"ಸತ್ಯವೆಂಬುದೇ ಹರನು; ಹರನೆಂಬುದೇ ಸತ್ಯ"

ಈ ಉಕ್ತಿಗಳು ಮಾನವನು ಸತ್ಯವಂತನಾಗಿರಬೇಕೆಂಬುದನ್ನು ಒತ್ತಿ ಒತ್ತಿ ಹೇಳುತ್ತವೆ. ರಾಷ್ಟ್ರಪಿತರಾದ ಮಹಾತ್ಮ ಗಾಂಧೀಜಿಯವರು "ಸತ್ಯವೇ ದೇವರು ಎಂದು ಹೇಳಿರುವುದನ್ನು ಸ್ಮರಿಸಬಹುದು. ತೈತ್ತಿರೀಯೋಪನಿಷತ್ತೂ ಸಹ "ಸತ್ಯಾಸತ್ಯ ಪ್ರಮದಿತವ್ಯಂ" ಎಂಬುದಾಗಿ ಹೇಳಿದೆ. "ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು; ಲಕ್ಷಕ್ಕೊಮ್ಮೆ ನುಡಿಯಲಾಗದು; ಕೋಟಿಗೊಮ್ಮೆ ನುಡಿಯಲಾಗದು ಎಂದು ಅಲ್ಲಮನ ಕಠೋರವಾದ ನುಡಿ ಸತ್ಯದ ಧ್ವಜವನ್ನು ಎತ್ತಿಹಿಡಿದಿದೆ.

"ಅಹಿಂಸೆ" ನಮ್ಮ ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿರುವ ಮತ್ತೊಂದು ಅವಶ್ಯವಾದ ನೀತಿ. ಗಾಂಧೀಜಿಯವರು ಅಹಿಂಸೆಯ ಅವಶ್ಯಕತೆ ಮತ್ತು ಅದರ ಹಿರಿಮೆಗಳನ್ನು ಬಹಳ ಸುಂದರವಾಗಿ ಪ್ರತಿಪಾದಿಸಿರುವರು. ಸತ್ಯ-ತ್ಯಾಗಗಳ ಮೂರ್ತಿಯಾದ ಗಾಂಧೀಜಿಯವರು ಅಹಿಂಸೆಯ ಅಸ್ತ್ರದಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರವನ್ನು ತಂದುಕೊಟ್ಟುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ವಿದ್ಯಾರ್ಜನೆ ಮುಗಿಸಿ ಗುರುಕುಲದಿಂದ ತೆರಳಿರುವ ಸ್ನಾತಕನಿಗೆ ತೈತ್ತರೀಯೋಪನಿಷತ್ತಿನಲ್ಲಿ "ಸತ್ಯವನ್ನು ನುಡಿ, ಧರ್ಮದಿಂದ ನಡೆ; ನಿಂದನೀಯವಾದ ಕೆಲಸವನ್ನು ಮಾಡಬೇಡ, ಧರ್ಮಸಮ್ಮತವಾದ ಕಾರ್ಯವನ್ನು ಮಾಡು" ಇತ್ಯಾದಿಯಾಗಿ ಗುರುವು ಆದೇಶ ನೀಡುವನು. ಗುರುವಿನ ಈ ಅನುಶಾಸನ ಇಂದಿಗೂ ಅನುಕರಣೀಯವಾಗಿದೆ. ಮೇಲ್ಕಂಡ ನೀತಿಗಳು ಇದೇ ಮಾನವಕುಲದ ಕಲ್ಯಾಣಕ್ಕೆ ಸಾಧಕವಾಗಿವೆ. ಇಂತಹ ಶಿಕ್ಷಣ ಎಲ್ಲಾ ಮಾನವರಿಗೂ ಬೇಕಲ್ಲವೆ?

ಆಧುನಿಕ ಶಿಕ್ಷಣಕ್ರಮದಲ್ಲಿ ಧಾರ್ಮಿಕ ಮತ್ತು ನೈತಿಕ ಶಿಕ್ಷಣವನ್ನು ಸಂಯೋಜಿಸಿದಾಗ ಮಾತ್ರ ಮಾನವರು ಭೌತಿಕ ಮತ್ತು ಆಧ್ಯಾತ್ಮಿಕ ಸಂಪತ್ತನ್ನು ಹೊಂದಿ ಸರ್ವತೋಮುಖ ಪ್ರಗತಿ ಪಡೆದು ಸಂತೃಪ್ತಿ, ಸಮಾಧಾನ ಮತ್ತು ಆನಂದವನ್ನು ಹೊಂದಬಲ್ಲರು. ಆದುದರಿಂದ ಈಗಿನ ಪಠ್ಯಕ್ರಮದಲ್ಲಿ ಆಧ್ಯಾತ್ಮಿಕ ಮತ್ತು ನೈತಿಕ





ಶಿಕ್ಷಣವನ್ನು ಅವಶ್ಯ ಸೇರಿಸಿ ಪರಿಪೂರ್ಣವಾದ ಶಿಕ್ಷಣ ಜನರಿಗೆ ಲಭಿಸುವಂತೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಸೂಚಿಸುತ್ತೇವೆ. ಶಿಕ್ಷಣವೇತ್ತರು ಈ ಬಗೆಗೆ ಗಮನ ಹರಿಸಿ ಈ ಕೊರತೆಯನ್ನು ಕೂಡಲೇ ನಿವಾರಿಸುತ್ತಾರೆಂದು ನಂಬಿದ್ದೇವೆ. ಈ ಸಮ್ಮೇಳನವು ನಮ್ಮ ಅಭಿಪ್ರಾಯಕ್ಕೆ ಪೂರ್ಣವಾಗಿ ಬೆಂಬಲ ಕೊಟ್ಟು ಇದನ್ನು ನಿರ್ಣಯರೂಪದಲ್ಲಿ ಸ್ವೀಕರಿಸಲೆಂದು ಆಶಿಸುತ್ತೇವೆ.

□

ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ
ಇಂಗಿತವನೇನೆಂದು ಬೆಸಗೊಂಬಿರಯ್ಯಾ
ಅವರ ನಡೆಯೆ ಆಗಮ, ಅವರ ನುಡಿಯೇ ವೇದ
ಅವರ ಲೋಕದ ಮಾನವರೆಂದೆನ್ನಬಹುದೆ ಅಯ್ಯಾ?
ಅದೆಂತೆಂದಡೆ ಸಾಕ್ಷಿ!
“ವೃಕ್ಷಾದ್ಭವತಿ ಬೀಜಂ ಹಿ ತದ್‌ವೃಕ್ಷೇ ಲೀಯತೇ ಪುನಃ|
ರುದ್ರಲೋಕಂ ಪರಿತ್ಯಕ್ತ್ವಾ ಶಿವಲೋಕೇ ಭವಿಷ್ಯತಿ||” ಎಂದುದಾಗಿ
ಅಂಕೋಲೆಯ ಬೀಜದಿಂದಾಯಿತ್ತು ವೃಕ್ಷವು.
ಆ ವೃಕ್ಷ ಮರಳಿ ಆ ಬೀಜದೊಳಡಗಿತ್ತು
ಆ ಪ್ರಕಾರದಲ್ಲಿ ಲಿಂಗದೊಳಗಿಂದ ಪುರಾತನರುದ್ಭವಿಸಿ
ಮರಳಿ ಆ ಪುರಾತನರು ಆ ಲಿಂಗದೊಳಗೆ ಬೆರಸಿದರು ನೋಡಿರಯ್ಯಾ
ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ
ಚನ್ನಮಲ್ಲಿಕಾರ್ಜುನಾ.

**- ಅಕ್ಕಮಹಾದೇವಿ**

## ಶ್ರೀ ಗುರುವಾಣಿ - ೧

ಯತ್ರೈವ ಯತ್ರೈವ ಮನೋಮದೀಯಂ ತತ್ರೈವ ತತ್ರೈವ ತವಸ್ವರೂಪಂ
ಯತ್ರೈವ ಯತ್ರೈವ ಶಿರೋಮದೀಯಂ ತತ್ರೈವ ತತ್ರೈವ ಪದದ್ವಯಂತೇ



"ತೃಣಮಪಿನಚಲತಿ ತೇನ ವಿನಾ" ಎಂದು ಶೃತಿ ಬಹು ಹಿಂದೆಯೇ ಹೇಳಿದೆ. ಶಿವ ಶಿವಾ, ನೀ ನಡೆಸಿದಂತೆ ನಡೆವೆ, ಶಿವ ಶಿವಾ ನೀ ನುಡಿಸಿದಂತೆ ನುಡಿವೆ, ನಿಮ್ಮ ಊಳಿಗವ ಮಾಡುವೆ, ನೀವಿರಿಸಿದಲ್ಲಿ ಇರುವೆನಯ್ಯ ಅಖಂಡೇಶ್ವರಾ" ಎಂದು ಶರಣರು ತಮ್ಮ ನಡೆ ನುಡಿ ಎಲ್ಲವನ್ನೂ ಭಗವಂತನ ಪ್ರಸಾದವಾಗಿ ಪಡೆದಿದ್ದಾರೆ, ಭಗವತ್ಸೇವೆಗೇ ಅರ್ಪಿಸಿದ್ದಾರೆ. ಅದೇ ಕಾರ್ಯಕ್ಕೆಂದು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಅವತರಿಸಿದರು. ನಾವು ಅವರ ಆಜ್ಞಾನುವರ್ತಿಗಳಾಗಿ ಅವರ ಕೃಪೆಯಂತೆ ನಡೆಯುತ್ತಿದ್ದೇವೆ. ನಾವು ಗುರುವಿನ

ಪ್ರಸಾದ: ಅಕ್ಟೋಬರ್ 1970 ಸಂಚಿಕೆಗೆ ದಯಪಾಲಿಸಿದ ಗುರುವಾಣಿ







ಆಜ್ಞಾಪಾಲಕರು. "ಎನ್ನ ಮಾನಾಪಮಾನ ನಿಮ್ಮದಯ್ಯ, ಎನ್ನ ಹಾನಿವೃದ್ಧಿ ನಿಮ್ಮದಯ್ಯ" ಎಂದು ಅವರ ಅಡಿದಾವರೆಗೆ ಮಣಿದು ನಮ್ಮ ಕರ್ತವ್ಯವನ್ನೆಸಗುತ್ತಿದ್ದೇವೆ. ನಮ್ಮ ಕರ್ತವ್ಯದಿಂದ ಯಾರಿಗಾದರೂ ಸತ್‌ಫಲ ದೊರೆತಿದ್ದರೆ ಅದರ ಕಾರಣಕರ್ತರು ಅವರೇ ಹೊರತು ನಮ್ಮದೆಂಬುವ ಹಮ್ಮು ನಮಗಿಲ್ಲ. ಈ ಸೇವೆಯನ್ನು ಗುರುಸೇವೆಯೆಂದು ಭಾವಿಸಿದ್ದೇವೆ. ಈ ಅವಕಾಶ ದೊರೆತಿರುವುದು ನಮ್ಮ ಭಾಗ್ಯವಿಶೇಷವೆಂದು ನಂಬಿದ್ದೇವೆ. ಆದುದರಿಂದ ಎಲ್ಲ ಪ್ರಶಂಸೆಯೂ ಪರಮಾತ್ಮನಿಗೆ ಸಲ್ಲುತ್ತದೆ.

ಜಗತ್ತಿನ ಇತಿಹಾಸದಲ್ಲಿ ದೈವಭಕ್ತರು ನಾನಾ ಕಾರಣಗಳಿಗಾಗಿ, ಅಂದರೆ ಲೌಕಿಕ ಪಾರಮಾರ್ಥಿಕ ಲಾಭಗಳಿಗಾಗಿ ದೇವಾಲಯಗಳನ್ನು ನಿರ್ಮಿಸಿ ದೇವತಾ ಉಪಾಸನೆ ಮಾಡುತ್ತಿರುವುದು ವಿಶಿಷ್ಟ ಸಂಪ್ರದಾಯವಾಗಿ ಬೆಳೆದುಬಂದಿದೆ. ಅಪಾರವಾದ ಅಜ್ಞಾನ ಅಗಾಧದಾರಿದ್ರ್ಯದಿಂದ ಜನ ಸಂಕಟಪಡುವುದನ್ನು ಎಲ್ಲೆಡೆಯಲ್ಲೂ ನಾವು ಕಾಣುತ್ತಿದ್ದೇವೆ. ಇಂತಹ ಕಾಲದಲ್ಲಿ ಜ್ಞಾನದಾನದ ವಿದ್ಯಾಮಂದಿರಗಳು ನಿಜವಾದ ದೇವಾಲಯಗಳು. ತನ್ನ ಅಂತರಂಗ ಬಹಿರಂಗ ಹಸಿವನ್ನು ಇಂಗಿಸಿಕೊಳ್ಳಲು ಬರುವವರೇ ನಿಜವಾದ ದೇವರುಗಳು. ಈ ಭಾವನೆಯಿಂದ ಆರ್ತರ ಅಭ್ಯುದಯಕ್ಕೆ ದುಡಿಯುವುದೇ ಸ್ತುತ್ಯವಾದ ತಪಸ್ಸು. ಪರಿತಾಪಪಡುವವರನ್ನು ಹಸನ್ಮುಖಿಗಳಾಗಿ ಮಾಡಿದಲ್ಲಿ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಇದೇ ಅರ್ಥದಲ್ಲಿ ಶರಣರು "ಕಾಯಕವೇ ಕೈಲಾಸ"ವೆಂದು ವಿಶ್ವಸಂದೇಶವನ್ನು ನೀಡಿದರು. ನಮ್ಮ ಬದುಕು ಕಾಯಕದಿಂದ ಕೈಲಾಸವಾದಾಗ ಮಾತ್ರ ಸಾರ್ಥಕವೆನಿಸುತ್ತದೆ. ಅಂತೆಯೇ ನಾವು ಸೇವೆಯಲ್ಲಿ ಶಿವನನ್ನು ಕಾಣಬಯಸಬೇಕು. ದೇವತಾ ತಪಸ್ಸಿಗೆ ಜಾತಿ ಮತ ಪಂಥಗಳ ದೇಶ ಕಾಲಗಳ ಯಾವ ಭೇದವೂ ಇರಬಾರದು. ಮಾನವಕುಲವೆಲ್ಲಾ ದೇವಕುಲವೆಂದು ಸರ್ವರ ಕ್ಷೇಮವನ್ನು ಬಯಸುವುದು ನಿಜವಾದ ಮುಕ್ತಿಮಾರ್ಗ.

ಜಗತ್ತು ನಾನಾ ರೀತಿಯಿಂದ ದಿನದಿನಕ್ಕೆ ಅತ್ಯಂತ ದಾರುಣ ಸ್ಥಿತಿಗೆ ಇಳಿಯುತ್ತಿದೆ. ಸೃಷ್ಟಿಕರ್ತನ ವಿಷಯದಲ್ಲಿ ಶ್ರದ್ಧಾಭಕ್ತಿಗಳು ಇಲ್ಲದಿರುವುದೇ ಇದಕ್ಕೆ ಕಾರಣ. ಐಹಿಕ ಭೋಗವನ್ನು ಪರಮಗುರಿಯೆಂದು ನಂಬಿದ ಕಾರಣ ಅಶಾಂತಿಯ ಬಿರುಗಾಳಿಯಲ್ಲಿ ಮಾನವತೆಯೇ ತಲ್ಲಣಿಸುತ್ತಿದೆ. ಮಾನವನ ಮಾನಸಿಕ ಪ್ರವೃತ್ತಿ ಅಂತರ್ಮುಖವಾಗಿ ಪರಮಾತ್ಮನಲ್ಲಿ ಶ್ರದ್ಧಾಭಕ್ತಿಗಳು ಬೆಳೆದರೆ ಜಗತ್ತಿನಲ್ಲಿ ಯಾವ ಕಾರ್ಪಣ್ಯವೂ ಇರಲಾರದು. ಅಖಂಡ ಮಾನವತೆಯು ಒಬ್ಬ ಪರಮಾತ್ಮನ ವಿಶ್ವರೂಪ. ಅದನ್ನೇ "ಏಕೋದೇವಃ ಸರ್ವಭೂತೇಷು ಗೂಢಃ" ಎಂದರೆ ಒಬ್ಬ ಪರಮಾತ್ಮನೇ ಸರ್ವದಲ್ಲಿಯೂ ನೆಲೆಸಿರುವನೆಂದು ಹೇಳುವುದು. ಈ ದಿವ್ಯ ಸಂದೇಶವನ್ನು ಅರಿತು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಾನುಷಜಗತ್ತು ಮಹಾದೇವನ ಕೈಲಾಸವಾಗುತ್ತದೆ. ಅದನ್ನರಿತು ವಿಶ್ವದ ಜನಕೋಟಿ ನಡೆಯುವಂತೆ ಶ್ರೀಗುರುವು ಅನುಗ್ರಹಿಸಲಿ.

ಜೀವರೇ ದೇವರೆಂಬ ನಮ್ಮ ಅಭಿಮತವು ನಮ್ಮ ವಿದ್ಯಾರ್ಥಿವೃಂದಕ್ಕೂ ಅನ್ವಯಿಸುತ್ತದೆ. ನಿಮ್ಮ ಅಭ್ಯುದಯವನ್ನೇ ನಾವು ಪರಮಾತ್ಮನ ಒಲುಮೆಯೆಂದು





ಭಾವಿಸಿದ್ದೇವೆ. ನಾವು ವಿದ್ಯಾಸಂಸ್ಥೆಗಳನ್ನು ನಡೆಸುವುದು ನೀವೆಲ್ಲರೂ ದೇವಫಲಗಳಾಗುತ್ತಾರೆಂಬ ನಂಬಿಕೆಯಿಂದ. ದೇವಫಲವು ಸಮಾಜದ ಕ್ಷೇಮಾಮೃತವಾಗಬೇಕು. ನಮ್ಮ ವಿದ್ಯಾರ್ಥಿಗಳಲ್ಲಿ ಎಲ್ಲರಲ್ಲಿಯೂ ದಿವ್ಯವಾದ ಸುಪ್ತಚೇತನವಿದೆ. ಅದು ಲೋಕೋಪಯುಕ್ತ ರೀತಿಯಲ್ಲಿ ವಿಕಾಸವಾಗಬೇಕು. ಹಾಗಾಗಬೇಕಾದರೆ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿಜೀವನವನ್ನು ತಪಸ್ಸೆಂದು ಭಾವಿಸಬೇಕು. ವಿದ್ಯಾಕ್ಷೇತ್ರವನ್ನು ಧರ್ಮಕ್ಷೇತ್ರವನ್ನಾಗಿ ಮಾಡಿಕೊಳ್ಳಬೇಕು. ಈ ರಾಷ್ಟ್ರದ ಭವಿಷ್ಯ ನಮ್ಮ ಇಂದಿನ ವಿದ್ಯಾರ್ಥಿಗಳನ್ನೇ ಅವಲಂಬಿಸಿದೆ. ಅವರು ಬಾಳೆಯ ಗಿಡದಂತೆ ಪುಷ್ಟವಾಗಿ ಬೆಳೆದು ಸುಫಲವನ್ನು ನೀಡುವಂತಾಗಬೇಕು. ಬೆಳೆಯುವಾಗಲೇ ರಾಜಕೀಯ ಜಾತೀಯ ಸೋಂಕಿನ ಸುಳಿಗಾಳಿಗಳಿಗೆ ಸಿಕ್ಕಿದರೆ ಹಣ್ಣು ಬಿಡುವ ಮುನ್ನವೇ ಗಿಡ ಮುರಿದುಹೋಗುತ್ತದೆ. ಆದುದರಿಂದ ಅವರು ಎಚ್ಚೆತ್ತು ಶ್ರದ್ಧೆಯಿಂದ, ಧರ್ಮಪ್ರವೃತ್ತರಾಗಿ, ತಮ್ಮ ವಿದ್ಯಾ ತಪಸ್ಸನ್ನು ನಡೆಸಬೇಕು. ದೇವರು, ದೇಶ, ಮಾತಾಪಿತೃಗಳು, ಗುರುಗಳು, ಸಮಾಜ ಇವುಗಳಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ಮುನ್ನಡೆದರೆ ಅವರಿಗೆ ಜೀವನದಲ್ಲಿ ಸರ್ವೇಶ್ವರನ ಸಾಕ್ಷಾತ್ಕಾರವಾಗುತ್ತದೆ. ನಮ್ಮ ವಿದ್ಯಾರ್ಥಿಗಳೆಲ್ಲರೂ ರಾಷ್ಟ್ರದ ಭಾಗ್ಯನಿಧಿಯಾಗಲಿ,

ರಾಷ್ಟ್ರದ ಅಭಿಮಾನ ಪ್ರತಿಯೊಬ್ಬರಲ್ಲೂ ಬೆಳೆಯಬೇಕು. ರಾಷ್ಟ್ರ ಉಳಿದರೆ ನಮ್ಮ ಉಳಿವು. ರಾಷ್ಟ್ರ ಅಳಿದರೆ ನಮ್ಮ ಧರ್ಮ, ಸಂಪತ್ತು, ವೈಭವ ಒಂದೂ ಉಳಿಯುವುದಿಲ್ಲ. ರಾಷ್ಟ್ರಧರ್ಮ ಎಲ್ಲಕ್ಕಿಂತಲೂ ಶ್ರೇಷ್ಠವಾದುದು; ಆದುದರಿಂದ ಭಾರತೀಯರಲ್ಲಿ ರಾಷ್ಟ್ರಧರ್ಮ ಮೂಡಬೇಕಾಗಿದೆ. ಶ್ರದ್ಧೆಯೆಂದರೆ ಎಲ್ಲೋ ಕುಳಿತು ಮಾಡುವ ತಪಸ್ಸಲ್ಲ. ಜಾತಿದ್ವೇಷ, ಮೇಲುಕೀಳೆಂಬ ಭಾವನೆ, ಅಧಿಕಾರ, ಐಶ್ವರ್ಯಗಳ ಲಾಲನೆ ಇವು ರಾಷ್ಟ್ರಧರ್ಮಕ್ಕೆ ಕಂಟಕಪ್ರಾಯವಾಗಿದೆ. ಸಮಾಜದಲ್ಲಿ ಸಾಮಾಜಿಕ ಅಂತರ ಅಳಿಯಬೇಕು. ಆರ್ಥಿಕ ಭಿನ್ನತೆ ಅಳಿಸಬೇಕು. ಕ್ಷಣಿಕವಾದ ಅಧಿಕಾರ ಐಶ್ವರ್ಯಕ್ಕೆ ರಾಷ್ಟ್ರಹಿತವನ್ನು ಬಲಿಕೊಡುವ ದುಷ್ಟ ಪ್ರವೃತ್ತಿ ನಷ್ಟವಾಗಬೇಕು. ರಾಷ್ಟ್ರೋದ್ಧಾರಕ್ಕೆ ಪ್ರತಿಯೊಬ್ಬನೂ ಕಷ್ಟಪಟ್ಟು ದುಡಿಯಬೇಕು. ಜನರು ವಿಚಾರಶೀಲರಾಗಬೇಕು. ರಾಷ್ಟ್ರದ ವಿಧಿ ವಿಧಾನಗಳನ್ನು ಗೌರವಿಸುವ ಆಚಾರನಿಷ್ಠರಾಗಬೇಕು. ದೇಶಕ್ಕಾಗಿ ತ್ಯಾಗಶೀಲರಾಗಬೇಕು- ಇವು ರಾಷ್ಟ್ರೀಯ ಸಪ್ತಶೀಲಗಳು. ಭಾರತೀಯರಿಗೆ ಈ ಸಪ್ತಶೀಲಗಳಲ್ಲಿ ಭಕ್ತಿ ಬೆಳೆಯುವಂತಹ ಸತ್‌ಪ್ರವೃತ್ತಿಯನ್ನು ಆದಿಜಗದ್ಗುರುಗಳವರು ಅನುಗ್ರಹಿಸಲಿ.

ಶ್ರೀ ಗುರು ಕೃಪೆಯಿಂದ ಸಮಸ್ತರಿಗೂ ಸರ್ವ ಶ್ರೇಯಸ್ಸು ಲಭಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

"ಸರ್ವೇಜನಾಃ ಸುಖಿನೋ ಭವಂತು"

□



# ಶ್ರೀ ಗುರುವಾಣಿ - ೨

ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ|
ನಮಸ್ಸದ್ಗುರುನಾಥಾಯ ಷಟ್ಸ್ಥಲಬ್ರಹ್ಮಮೂರ್ತಯೇ||



ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ 1026ನೇ ಜಯಂತಿ ಮಹೋತ್ಸವವನ್ನು ಕಳೆದ ನಾಲ್ಕು ದಿನಗಳಿಂದ ಭಕ್ತಿ ಗೌರವಗಳಿಂದ ನೆರವೇರಿಸುತ್ತಿರುವುದು ನಮಗೆ ಸಂತೋಷವನ್ನುಂಟುಮಾಡಿದೆ. ನಾವು ಮಾಡಿರುವ ಕಿಂಚಿತ್ ಸಾಮಾಜಿಕ ಸೇವೆಯನ್ನು ಬಿನ್ನವತ್ತಳೆಯಲ್ಲಿ ಸ್ಮರಿಸಿ ಪ್ರಶಂಸಿಸಿದ್ದೀರಿ. ಈ ಎಲ್ಲ ಕಾರ್ಯಗಳೂ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಕೃಪಾಶೀರ್ವಾದದ ಬಲದಿಂದ ನಡೆಯುತ್ತಿವೆಯೆಂದು ತಿಳಿಸಬಯಸುತ್ತೇವೆ.

---

ಪ್ರಸಾದ: ಜನವರಿ-ಫೆಬ್ರುವರಿ 1986 ಸಂಚಿಕೆಗೆ ದಯಪಾಲಿಸಿದ ಗುರುವಾಣಿ

ಮಹಿಮಾನ್ವಿತರ ಕೃಪಾಶೀರ್ವಾದ ನಿರಂತರವಾಗಿ ಸಕಲ ಜೀವಾವಳಿಗಳ ಮೇಲೆ ಇರಲಿ ಎಂದು ಆಶಿಸುತ್ತೇವೆ.

ನಾವಿಂದು ಕ್ಲಿಷ್ಟ ಪರಿಸ್ಥಿತಿಯಲ್ಲಿದ್ದೇವೆ. ದೇಶದ ಒಳಗೆ ಮತ್ತು ಹೊರಗೆ ಹಾಹಾಕಾರ ನಡೆದಿದ್ದು ಪ್ರಪಂಚವೇ ವಿನಾಶದ ಹಾದಿಗೆ ತಲುಪುತ್ತಲಿದೆ. ಧರ್ಮದ ಬಗ್ಗೆ ಜನತೆಯಲ್ಲಿರುವ ನಿರಾಸಕ್ತಿಯೇ ಇದಕ್ಕೆಲ್ಲ ಮೂಲಕಾರಣ. ಶ್ರಮವಿಲ್ಲದೆ ಸುಖ ಪಡೆಯಬೇಕೆಂಬ ಹೆಬ್ಬಯಕೆ ಜನತೆಯಲ್ಲಿ ದಿನೇ ದಿನೇ ವೃದ್ಧಿಯಾಗುತ್ತಲಿದೆ. ಇದು ವಿಷಾದದ ಸಂಗತಿ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಕಾಯಕವನ್ನು ಆಶ್ರಯಿಸಿ ಅವುಗಳ ಉಚ್ಚ-ನೀಚ ಭೇದವನ್ನೆಣಿಸದೆ, ಸ್ವಾರ್ಥ ಭಾವನೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಿಕೊಂಡು ರಾಷ್ಟ್ರದ ಸರ್ವಾಂಗೀಣ ಅಭ್ಯುದಯಕ್ಕಾಗಿ ದುಡಿಯಬೇಕೆಂಬ ಭಾವನೆ ಹಿಂದಿಗಿಂತ ಇಂದು ಹೆಚ್ಚಾಗಿ ಯುವ ಜನತೆಯಲ್ಲಿ ಮೂಡಬೇಕಾಗಿದೆ. ಅದಕ್ಕೋಸುಗವೇ ಶರಣರು 'ಕಾಯಕವೇ ಕೈಲಾಸ'ವೆಂದು ಸಾರಿದರು.

ಶಿವನನ್ನು ಒಲಿಸಲಿಕ್ಕಾಗಿಯೇ ಈ ಕಾಯ ದೊರಕಿದೆ ಎಂಬುದನ್ನು ಮರೆತು ಕೇವಲ ಪ್ರಾಪಂಚಿಕ ಸುಖವೇ ಸರ್ವಸ್ವವೆಂದು ಇಂದು ಮಾನವ ಭಾವಿಸಿದ್ದಾನೆ. ಮಾನವನಿಗಿಂತ ಮಿಗಿಲಾದ ದೈವೀಶಕ್ತಿಯಿದೆ ಎಂಬುದನ್ನು ನಾವಾರೂ ಮರೆಯಬಾರದು. ಅದೇ ಮಾನವನ ಸರ್ವತೋಮುಖ ಶ್ರೇಯಸ್ಸಿಗೆ ಕಾರಣೀಭೂತವಾಗಿದ್ದು, ಅದರ ಸಾಕ್ಷಾತ್ಕಾರವೇ ಎಲ್ಲರ ಪರಮಗುರಿಯಾಗಬೇಕು. 'ತೇನವಿನಾ ತೃಣಮಪಿ ನ ಚಲತಿ' ಎಂಬ ವಾಣಿಯಂತೆ ಸಕಲ ಚರಾಚರ ವಸ್ತುಗಳೂ ಅವನ ಅಧೀನ, ಸರ್ವವೂ ಆತನ ಸೊತ್ತು ಎಂಬುದು ನಮ್ಮ ಬುದ್ಧಿಯಲ್ಲಿ ಬೇರೂರಬೇಕು. ಅಂತಹ ಪರವಸ್ತುವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ 'ಸದುವಿನಯವೇ ಸದಾಶಿವನ ಒಲುಮೆಯಯ್ಯಾ' ಎಂಬ ಶರಣರ ಸೂಳ್ನುಡಿಯಂತೆ ಮಾನವರು ವಿನಯಸಂಪನ್ನರಾಗಬೇಕು. ಇಹದ ಬದುಕು ಪರದಲ್ಲಿಯೂ ಸಲ್ಲುವಂತಾಗಬೇಕಾದರೆ ಇಹದಲ್ಲಿ ಪರಿಶುದ್ಧವಾದ, ಪ್ರಾಮಾಣಿಕವಾದ ಬದುಕನ್ನು ಬಾಳಬೇಕು. ಶಿವನ ಒಲುಮೆಯಾದರೆ ಶರಣರು ಹೇಳುವಂತೆ ಕೊರಡು ಕೊನರಬಲ್ಲುದು, ಬರಡೂ ಹಯನವಾಗಬಲ್ಲುದು, ವಿಷವೂ ಅಮೃತವಾಗಬಹುದು. ಶರಣರ ಈ ಮಾತುಗಳು ಎಲ್ಲರಿಗೂ ದಾರಿದೀವಿಗೆಗಳು. ಈ ಸಂದರ್ಭದಲ್ಲಿ ದೇವರ ದಾಸಿಮಯ್ಯನ ವಚನವೊಂದನ್ನು ಉದಾಹರಿಸಬಹುದು.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಬುದೆ,
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡ ಶರಣರ ನುಡಿಗಡಣವೇ ಕಡೆಗೀಲು
ಕಾಣಾ ರಾಮನಾಥಾ





ಎಂಬಂತೆ ಶರಣರ-ಸಂತರ ಅಮೃತವಾಣಿಗಳು ನಿಮ್ಮೆಲ್ಲರಿಗೂ ದಾರಿದೀಪಗಳಾಗಿ ಮುಕ್ತಿಮಾರ್ಗದತ್ತ ಕೊಂಡೊಯ್ಯಲೆಂದು ಆಶಿಸುತ್ತೇವೆ.

ಇಂದಿನ ವಿದ್ಯಾರ್ಥಿಗಳೇ ಮುಂದಿನ ನಮ್ಮ ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಕರು. ಆದ್ದರಿಂದ ಅವರ ಆದರ್ಶ ನಡೆ-ನುಡಿಗಳನ್ನು ಶ್ರೇಷ್ಠ ವಿಚಾರಗಳನ್ನು ಮೈಗೂಡಿಸಿಕೊಂಡು ಮಾನವ ಸಮಾಜವನ್ನು ಅಭ್ಯುದಯದತ್ತ ಕೊಂಡೊಯ್ಯುವ ಸಂಕಲ್ಪವನ್ನು ಮಾಡಬೇಕಾಗಿದೆ. ಹಾಗೆ ಸಂಕಲ್ಪ ಮಾಡಿ ಮುನ್ನಡೆಯುತ್ತಾರೆಂಬ ವಿಶ್ವಾಸ ನಮಗಿದೆ. ಅಂತೆಯೇ ಅಧ್ಯಾಪಕರು, ರೈತರು, ರಾಜಕಾರಣಿಗಳು, ಅಧಿಕಾರಿಗಳು ತಮ್ಮ ಪಾಲಿನ ಕರ್ತವ್ಯಗಳನ್ನು ಸಮರ್ಪಕವಾಗಿ ಅರ್ಪಣಭಾವದಿಂದ ಮಾಡಬೇಕಾಗಿದೆ.

ಇಂದು ಕನ್ನಡನಾಡಿನ ಬಹುಭಾಗದಲ್ಲಿ ಭೀಕರ ಕ್ಷಾಮ ತಲೆದೋರಿದೆ. ಪ್ರಕೃತಿಯ ವಿಕೋಪಕ್ಕೆ ತುತ್ತಾದ ಜನ ಕಂಗಾಲಾಗಿದ್ದಾರೆ. ಮೇವಿಲ್ಲದೆ ಕಟುಕರ ಮನೆ ಸೇರುತ್ತಿರುವ ದನ-ಕರುಗಳು, ಅನ್ನ-ನೀರಿಲ್ಲದೆ ಹಸಿದು ಹಂಬಲಿಸಿ ಪರಿತಪಿಸುತ್ತಿರುವ ಜನರು - ಈ ದೃಶ್ಯ ಅತ್ಯಂತ ಕಳವಳಕಾರಿಯಾಗಿದೆ. ಈ ಭೀಕರ ಪರಿಸ್ಥಿತಿಯನ್ನು ಸುಧಾರಿಸಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕೈಲಾದ ಮಟ್ಟಿಗೆ ನೆರವನ್ನು ನೀಡಬೇಕಾಗಿದೆ. ಈ ಕರ್ತವ್ಯದಿಂದ ವಿಮುಖರಾದರೆ ಧರ್ಮದ್ರೋಹ ಮಾಡಿದಂತಾಗುತ್ತದೆ. ಮಾನವೀಯ ಭಾವನೆಗಳಿಗೆ ಸ್ಪಂದಿಸದ ವ್ಯಕ್ತಿ ಎಂದೂ ಧಾರ್ಮಿಕನಾಗಲಾರ. ಮಾನವ ಸೇವೆಯೇ ಒಂದರ್ಥದಲ್ಲಿ ಈಶಸೇವೆ ಎನ್ನಿಸುತ್ತದೆ. ಈ ವಿಷಮ ಪರಿಸ್ಥಿತಿಯಲ್ಲಿ ಸಮಾಜರೂಪಿಯಾದ ಶಿವನನ್ನು ಮರೆಯಬಾರದು. ಧರ್ಮ ಮಾನವನನ್ನು ಕೇಂದ್ರವಾಗಿಟ್ಟುಕೊಂಡೇ ವಿಕಾಸವಾಗಿದೆ. ಸರ್ಕಾರ, ಸಾರ್ವಜನಿಕ ಸಂಸ್ಥೆಗಳು, ಉದಾರಿಗಳು ತಮ್ಮ ಸೇವೆ ಸಲ್ಲಿಸಬೇಕಾಗಿದೆ. ಅಲ್ಲದೆ ಜನ ನೀಡುವ ದಾನ ಆಘಾತಕ್ಕೊಳಗಾಗಿರುವ ಜನತೆಗೆ ಮುಟ್ಟುವಂತೆ ನಿಸ್ಪೃಹತೆಯಿಂದ ಸೇವೆ ಸಲ್ಲಿಸುವ ಅವಶ್ಯಕತೆ ಇದೆ. ನಮ್ಮ ವಿದ್ಯಾಪೀಠದ ಅಧಿಕಾರ ವೃಂದದವರು, ವಿದ್ಯಾರ್ಥಿಗಳು ಬರ ಪರಿಹಾರಕ್ಕಾಗಿ ತಮ್ಮ ಅಳಿಲು ಸೇವೆಯನ್ನು ಸಲ್ಲಿಸಿರುವುದನ್ನು ಪ್ರಶಂಸಿಸುತ್ತೇವೆ. ಈ ಸಂದರ್ಭದಲ್ಲಿ ಮನುಷ್ಯ ಪ್ರಯತ್ನವನ್ನು ಸಫಲಗೊಳಿಸಲು ದೈವದ ಕಾರುಣ್ಯಕ್ಕಾಗಿ ಜನತೆ ಪ್ರಾರ್ಥಿಸಬೇಕು. ದುಃಖಿಗಳಾದ ಜನರಿಗೆ ಸಂಕಟವನ್ನು ನಿವಾರಿಸಿ ಸಂತೃಪ್ತಿಯನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ಗುರುಗಳನ್ನು ಪ್ರಾರ್ಥಿಸುತ್ತೇವೆ.

|| ಶಿವಂ ಭೂಯಾತ್ ||

ಸರ್ವೇಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ |
ಸರ್ವೇ ಭದ್ರಾಣಿ ಪಶ್ಯಂತು ಮಾಗಶ್ಚಿದ್ದುಃಖವಾಗ್ಭವೇತ್ ||

□

## ಶ್ರೀ ಗುರುವಾಣಿ - ೩



ಅಪೂಜ್ಯಾ ಯತ್ರ ಪೂಜ್ಯಂತೇ ಪೂಜನೀಯೇವ ಪೂಜ್ಯತೇ |
ತ್ರೀಣಿತತ್ರ ಭವಿಷ್ಯಂತಿ ದಾರಿದ್ರ್ಯಂ ಮರಣಂ ಭಯಂ ||

ಪೂಜಾರ್ಹರಲ್ಲದವರು ಎಲ್ಲಿ ಪೂಜಿಸಲ್ಪಡುತ್ತಾರೋ, ಪೂಜಾರ್ಹರು ಎಲ್ಲಿ ಪೂಜಿಸಲ್ಪಡುವುದಿಲ್ಲವೋ ಅಂತಹ ಕಡೆಗಳಲ್ಲಿ, ದಾರಿದ್ರ್ಯ, ಮರಣ, ಭಯ ಇವು ಮೂರು ಸಂಭವಿಸುತ್ತವೆ ಎಂದು ಶಿವಪುರಾಣದಲ್ಲಿ, ಶ್ರೀಹರಿಯೂ ದಕ್ಷಬ್ರಹ್ಮನಿಗೆ ಹೇಳಿದ ಒಂದು ಸಂದೇಶವಿದೆ. ಇಂದು ನಮ್ಮ ರಾಷ್ಟ್ರದಲ್ಲಿ ದಾರಿದ್ರ್ಯ ತಾಂಡವವಾಡುತ್ತಿದೆ. ದಿನಬೆಳಗಾದರೆ ಅನಾಹುತಗಳಲ್ಲಿ, ಕೊಲೆಗಳಲ್ಲಿ, ನಾನಾ ರೀತಿಯಲ್ಲಿ ಮರಣ ಸಂಭವಿಸಿದ ವಾರ್ತೆಯನ್ನು ಕೇಳುತ್ತಿದ್ದೇವೆ. ನಗರಗಳಲ್ಲಿ ಒಂದು ರೀತಿಯ ಭೀತಿಯಾದರೆ ಗ್ರಾಮಾಂತರ ಪ್ರದೇಶಗಳಲ್ಲಿ

---
ಪ್ರಸಾದ: ಮಾರ್ಚ್-ಏಪ್ರಿಲ್ 1986 ಸಂಚಿಕೆಗೆ ದಯಪಾಲಿಸಿದ ಗುರುವಾಣಿ







ಮತ್ತೊಂದು ರೀತಿಯ ಭಯಂಕರ ಸನ್ನಿವೇಶ ನಿರ್ಮಾಣವಾಗಿದೆ. ಹೀಗೆ ಈ ಎರಡು ರೀತಿಯ ದುರ್ದೆಶೆಗಳು ನಮ್ಮ ಸಮಾಜದಲ್ಲಿ ಕಾಣುತ್ತಿರುವಾಗ ಅದಕ್ಕೆ ಕಾರಣವನ್ನು ಅರಸಬೇಕಾಗಿದೆ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರಿಗೆ ಗೌರವ, ಸನ್ಮಾನಗಳು ಲಭಿಸಬೇಕೋ ಅವರಿಗೆ ಲಭಿಸುತ್ತಿಲ್ಲ. ನಾವು ಯಾವ ಆದರ್ಶಪುರುಷರನ್ನು ಅನುಸರಿಸಬೇಕೋ ಅವರನ್ನು ಅನುಸರಿಸುತ್ತಿಲ್ಲ. ದುಷ್ಟಕಾರ್ಯದಲ್ಲಿ ತೊಡಗಿದ ರಾವಣನ ಪರಿವಾರವನ್ನು ಕೊಂದ ವೀರಹನುಮನ ಆದರ್ಶ ನಮಗಿಲ್ಲ ಅಧಿಕಾರಕ್ಕಾಗಿ ಅಮಾನುಷ ರೀತಿಯಲ್ಲಿ ವರ್ತಿಸಿದ ಹಿಟ್ಲರ್ ಮುಸಲೋನಿಯರನ್ನೋ ಚಲನಚಿತ್ರದಲ್ಲಿ ವೀರಾವೇಶದಿಂದ ಹೋರಾಡಿದಂತೆ ನಟಿಸುವ ನಟರನ್ನೋ ರಾಷ್ಟ್ರೋದ್ಧಾರ ಕಾರ್ಯದಲ್ಲಿ ಶ್ರಮಿಸುತ್ತಿರುವಂತೆ ವರ್ತಿಸುತ್ತ, ಅಂತರಂಗ ಜೀವನವೇ ಬೇರೆಯಾದ ಜನರನ್ನೋ ನಾವು ಓಲೈಸುತ್ತಿದ್ದೇವೆ. ಅವರನ್ನೆ ಹಗಲಿರುಳು ಸ್ಮರಿಸುತ್ತೇವೆ. ನಮ್ಮ ಯುವ ಪೀಳಿಗೆ ರಜತ ಪರದೆಯ ಮೇಲೆ ಕಾಣಿಸಿಕೊಳ್ಳುವ ನಾಯಕನಿಗೆ ಕಾಯಿ ಒಡೆದು ಕರ್ಪೂರ ಹಚ್ಚಿ ಪೂಜೆ ಮಾಡುವ ಸಂಪ್ರದಾಯವನ್ನು ಬೆಳೆಸಿಕೊಳ್ಳುತ್ತಿರುವುದಾಗಿ ಕೇಳಿದ್ದೇವೆ. ಇಂತಹ ಪ್ರವೃತ್ತಿ ಯುವ ಜನತೆಯಲ್ಲಿ ಬೆಳೆದರೆ ಮೌಲ್ಯಾಧಾರಿತ ಆದರ್ಶ ಜೀವನವನ್ನು ನಡೆಸಲು ಯಾರು ಬಯಸುತ್ತಾರೆ? ಜನರು ಬಯಸದೇ ಇರುವುದನ್ನು ಬೆಳೆಸಿಕೊಳ್ಳಲು ಯಾರು ಯತ್ನಿಸುತ್ತಾರೆ? ನಮ್ಮ ವಿದ್ಯಾಕ್ಷೇತ್ರದಲ್ಲಿ ಇಂತಹ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾರ್ಥಿಯು ಶ್ರಮಿಸಿ ಜ್ಞಾನಾರ್ಜನೆ ಮಾಡಬೇಕೆಂದು ಬಯಸುವ ಅಧ್ಯಾಪಕರು ಇಂದು ಬೇಡವಾಗಿದೆ. ಆದರ್ಶದ ಹಾದಿಯಲ್ಲಿ ನಡೆದು, ಅಕ್ರಮವಾಗಿ ವರ್ತಿಸುವ ವಿದ್ಯಾರ್ಥಿಗೆ ಅಡ್ಡಿ ಬರುವ ಅಧ್ಯಾಪಕರ ಎದೆಗೆ ಚೂರಿ ಇಡುವ ಸಂಸ್ಕೃತಿ ಬೆಳೆದರೆ, ಈ ರಾಷ್ಟ್ರದ ಭವಿಷ್ಯವನ್ನು ಊಹಿಸುವುದೇ ಕಠಿಣವಾಗುತ್ತದೆ. ಇಂತಹ ಪರಿಸ್ಥಿತಿಗೆ ಅಧ್ಯಾಪಕರು ಕಾರಣರಾಗಬಾರದಲ್ಲವೆ? ಗುರು ಸ್ಥಾನದಲ್ಲಿರಲು ಸೂಕ್ತ ಸಾಮರ್ಥ್ಯ ಸಂಸ್ಕೃತಿಗಳನ್ನು ಬೆಳೆಸಿಕೊಳ್ಳಬೇಕಲ್ಲವೆ? ಅಂತೆಯೇ ರಾಜಕೀಯ, ಆರ್ಥಿಕ, ಸಾಮಾಜಿಕ, ಅಧ್ಯಾತ್ಮಿಕ ಕ್ಷೇತ್ರದಲ್ಲೂ ಅಪೂಜ್ಯರು ಪೂಜ್ಯರಾಗುತ್ತಿದ್ದಾರೆ. ಪೂಜ್ಯರು ಅಪೂಜ್ಯರಾಗಿದ್ದಾರೆ. ಇಂತಹ ಪರಿಸರದ ನಿರ್ಮಾಣಕ್ಕೆ ಕಾರಣರಾದವರು ಆತ್ಮಪರಿಶೋಧನೆ ಮಾಡಿಕೊಳ್ಳಲಿ! ಪರಿಸ್ಥಿತಿಯನ್ನು ಸುಧಾರಿಸಲು ರಾಷ್ಟ್ರಾಭಿಮಾನಿಗಳು ಶ್ರಮಿಸಲೆಂದು ಅಪೇಕ್ಷಿಸುತ್ತೇವೆ.

□

# ಶ್ರೀ ಗುರುವಾಣಿ - ೪



ಒಡೆಯರಿಗೆ ಒಡವೆಯನೊಪ್ಪಿಸಲಾರದೆ
ಮೊರೆಯಿಡುವ ಮನವ ನಾನೇನೆಂಬೆ ?
ನೆತ್ತಿಯಲ್ಲಿ ಅಲಗತಿರುಹುವಂತಪ್ಪ
ವೇದನೆಯಹುದೆನಗೆ !
ಕೊಯ್ದ ಮೂಗಿಂಗೆ ಕನ್ನಡಿಯ ತೋರುವಂತಪ್ಪ
ವೇದನೆಯಹುದೆನಗೆ !
ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ,
ವೇದನೆಯಹುದೆನಗೆ !
ಕೂಡಲ ಸಂಗಮದೇವ ಮಾಡಿನೋಡುವ ಹಗರಣವ
ನಾ ಮಾಡಿಹೆನೆಂದಡೆ ಮನಕ್ಕೆಮನ ನಾಚದೆ ಅಯ್ಯ?

ನಾ ಹುಟ್ಟುವ ಮುನ್ನ ಜಗತ್ತು ಇತ್ತು. ಜನ ಇದ್ದರು. ಜೀವನ ಸಾಗುತ್ತಿತ್ತು. ಜೀವನಕ್ಕಾಗಿ ವ್ಯವಹಾರ ಸಾಗುತ್ತಿತ್ತು. ನಾವು

ಪ್ರಸಾದ: ಮೇ-ಜೂನ್ 1986 ಸಂಚಿಕೆಗೆ ದಯಪಾಲಿಸಿದ ಗುರುವಾಣಿ







ಹೋದನಂತರವೂ ಇವೆಲ್ಲವೂ ನಡೆಯುತ್ತವೆ. ನಾವು ಇರುವಾಗ ಕೆಲವಾರು ಕಾರ್ಯಗಳನ್ನು ಮಾಡಲೇಬೇಕಾದುದು ಮನುಜಧರ್ಮ. ಅದು ಜೀವನದ ಸಹಜ ಕ್ರಿಯೆ. ಆದುದರಿಂದ ನಮ್ಮಿಂದ ಯಾವುದಾದರು ಕಾರ್ಯ ನಡೆದಿದ್ದರೆ ಅದರಿಂದ ಕೆಲವರಿಗೆ ಉಪಕಾರವಾಗಿದ್ದರೆ ಅದು ಪರಮಾತ್ಮನ ಇಚ್ಛೆಯಂತೆ ನಡೆದಿರುತ್ತದೆ. ಪರಮಾತ್ಮನ ಇಚ್ಛೆಯಂತೆಯೇ ಕೆಲವರಿಗೆ ಸಹಾಯವಾಗಿದೆ. ಇದರಲ್ಲಿ ನನ್ನದು, ನಾನು ಮಾಡಿದೆ ಎನ್ನುವುದು ಹಾಸ್ಯಾಸ್ಪದ. ಒಬ್ಬರಿಂದಾಗುವ ಕಾರ್ಯದಿಂದ ಒಬ್ಬರಿಗೇ ಲಾಭವಾಗಬಹುದು. ಹತ್ತಾರು, ಸಾವಿರಾರು ಜನರಿಗೆ ಪ್ರಯೋಜನವಾಗಬಹುದು. ಮತ್ತೊಬ್ಬರಿಂದಾಗುವ ಕಾರ್ಯದಿಂದ ನೂರಾರು, ಸಾವಿರಾರು ಜನರಿಗೆ ತೊಂದರೆಯು ಆಗಬಹುದು. ಎಲ್ಲಕ್ಕೂ ಪರಮಾತ್ಮನನ್ನೇ ಹೊಣೆಗಾರನಾಗಿ ಮಾಡಿದರೆ ಅನ್ಯರಿಗೆ ಹಾನಿಯಾಗುವ ಕಾರ್ಯವನ್ನೇಕೆ ಪರಮಾತ್ಮ ಮಾಡಿಸುತ್ತಾನೆ- ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅದು ಸಹಜವೇ? ಮಾನವ ಅನ್ಯಪ್ರಾಣಿಗಳಿಗಿಂತ ಭಿನ್ನವಾದ, ಶ್ರೇಷ್ಠವಾದ ಪ್ರಾಣಿ. ಆಹಾರ, ನಿದ್ರೆ, ಭಯ ಮೈಥುನಗಳಲ್ಲಿ ಮನುಷ್ಯರೂ, ಇತರ ಪ್ರಾಣಿಗಳೂ ಸಮಾನರೇ. ಆದರೆ ಮನುಷ್ಯನಿಗೆ ವಿವೇಚನಾ ಜ್ಞಾನವಿದೆ. ಅದರಿಂದ ಅನ್ಯರಿಗೆ ಉಪಕಾರವಾಗುವುದನ್ನು ಮಾಡಿ ಜೀವನವನ್ನು ಧನ್ಯವಾಗಿ ಮಾಡಿಕೊಳ್ಳುವುದರಲ್ಲಿ ನಾವು ನಿರತರಾಗಬೇಕು. ಅನ್ಯರ ದುಃಖಕ್ಕೆ ಕಾರಣವಾಗುವುದನ್ನು ಮಾಡಿ ಜನ್ಮ ಜನ್ಮಾಂತರದ ದುಃಖಕ್ಕೆ ಒಳಗಾಗಬಾರದೆಂದು ಸಂತರೂ, ಶರಣರೂ, ಶಾಸ್ತ್ರಗಳೂ ಹೇಳಿವೆ. ಅದನ್ನು ತಿಳಿದುಕೊಂಡು ಇಂದಿನ ನಾವು ಎಂದೆಂದಿನ ಜನ್ಮಕ್ಕೂ ಆನಂದವನ್ನುಂಟುಮಾಡುವ ಕಾರ್ಯ ಮಾಡಬೇಕು. ಅದರಂತೆ ಪರಮಾತ್ಮನ ಕೃಪೆಯಿಂದಲೇ ನಾವು ಅನ್ಯರಿಗೆ ಸಹಾಯವಾಗುವ ಕಾರ್ಯಗಳನ್ನು ಮಾಡಲು ಸಾಧ್ಯ. ಅವನ ಕೃಪೆ ತಪ್ಪಿದಾಗ ನಮ್ಮ ಕಾರ್ಯಗಳು ಅನ್ಯರಿಗೆ ಅಪಕಾರವನ್ನೇ ಮಾಡುತ್ತವೆ. ಅವು ಕೊನೆಗೆ ಮಾಡಿದವನಿಗೆ ಅಪಾಯಕಾರಿಯಾಗಿ ಪರಿಣಮಿಸುತ್ತವೆ. ಆದ ಕಾರಣ ನಾವು ಮಾಡಿದ ಕಾರ್ಯ ನಮ್ಮದು. ನನ್ನಿಂದಲೇ ಬಹುಜನರಿಗೆ ಉಪಕಾರವಾಗುತ್ತಿದೆ ಎಂಬ ಭಾವನೆ ಮಾಡುವವರಲ್ಲಿ ಇರಬಾರದು.

ಮಾಡಿದೆನೆಂಬುದು ಮನದಲ್ಲಿ ಹೊಳೆದಡೆ
ಏಡಿಸಿ ಕಾಡಿತ್ತು ಶಿವನ ಡಂಗುರ,
ಮಾಡಿದೆನೆನ್ನದಿರಾ ಲಿಂಗಕ್ಕೆ, ನೀಡಿದೆನೆನ್ನದಿರಾ
ಜಂಗಮಕ್ಕೆ, ಮಾಡಿದೆನೆಂಬುದು ಮನದಲ್ಲಿಲ್ಲ
ದಿದ್ದಡೆ, ಬೇಡಿತ್ತ ನೀವ ಕೂಡಲ ಸಂಗಮದೇವಾ

ಎಂದಿದ್ದಾರೆ ಬಸವಣ್ಣನವರು. ಇದು ಬಸವಣ್ಣನವರು ನಮಗೆ ಕೊಟ್ಟ ಎಚ್ಚರಿಕೆ. ಈ ಎಚ್ಚರವನ್ನು ಮರೆತು ಮತ್ತೆ ನಾನು ನನ್ನದು ಎಂಬ ದುರಭಿಮಾನಕ್ಕೆ ತುತ್ತಾಗುತ್ತೇವೆ.





ಅದರಿಂದ ಕೋಟಲೆಗಳಿಗೆ ಸಿಕ್ಕುತ್ತೇವೆ. ಪರಮಾತ್ಮನಿಂದ ಬೇಡಿದುದನ್ನೆಲ್ಲಾ ಪಡೆಯುವ ಭಾಗ್ಯವನ್ನು ಕಳೆದುಕೊಳ್ಳುತ್ತೇವೆ. ನಾವು ಬಸವಣ್ಣನವರು ಮಾಡಿದ ಕಾರ್ಯಕ್ಕಿಂತಲೂ ಮಿಗಿಲಾದ ಕಾರ್ಯವನ್ನು ಏನನ್ನು ಮಾಡಲು ಸಾಧ್ಯವಿಲ್ಲ. ಅಂತಹ ಚಿರಂತನ, ಸ್ಮರಣೀಯ ಕಾರ್ಯಗಳನ್ನೆಸಗಿದ ಬಸವಣ್ಣನವರು ತಮ್ಮ ಕಾರ್ಯಗಳೆಲ್ಲಾ ತಮ್ಮ ಯಜಮಾನನಿಗೆ ಅವರು ಕೊಟ್ಟ ಒಡವೆಗಳನ್ನು ಒಪ್ಪಿಸುವ ಕಾರ್ಯ. ನಾವು ಪರಮಾತ್ಮನ ಸೇವಕರಾಗಿ ಅವರ ಆಜ್ಞೆಯಂತೆ ನಾವು ನಡೆಯಬೇಕು. ಅದಿಲ್ಲದೆ ನಾನು ಮಾಡಿದೆ ನನ್ನಿಂದಲೇ ಜಗತ್ತು ಎಂದು ಭಾವಿಸಿದರೆ ತಲೆಗೆ ಕತ್ತಿಯನ್ನಿಟ್ಟು ತಿರುಗಿಸಿದಂತೆ ವೇದನೆ. ಕತ್ತರಿಸಿದ ಮೂಗ ಕನ್ನಡಿಯಲ್ಲಿ ನೋಡಿದಷ್ಟು ವೇದನೆ. ಸುಟ್ಟ ಗಾಯವನ್ನು ಕಾದ ಕಬ್ಬಿಣದ ಸಲಾಕೆಯಿಂದ ಚುಚ್ಚಿದಂತಹ ವೇದನೆಯಾಗುತ್ತದೆ ಎನ್ನುತ್ತಾರೆ ಬಸವಣ್ಣನವರು. ಅಂತಹ ಮಹಾನುಭಾವರ ನುಡಿ ಮರೆತವರನ್ನು ಮತ್ತೆ ಮತ್ತೆ ಎಚ್ಚರಿಸುವ ಅಮೃತವಾಣಿ. ನಾವು ಈ ವಾಣಿಯನ್ನು ಜೀವನದ ನಿತ್ಯಮಂತ್ರವಾಗಿ ಬಳಸಿಕೊಂಡು ನಡೆದರೆ ಕೂಡಲ ಸಂಗಮದೇವನು ಬೇಡಿದುದನ್ನು ಕೊಡುತ್ತಾನೆಂಬುವ ಆತ್ಮವಿಶ್ವಾಸವಿರಬೇಕು. ಜೀವನವಿರುವವರಿಗೆ ಅನ್ಯರಿಗೆ ಉಪಕಾರವಾಗುವುದನ್ನು ಮಾಡಿಸು ಎಂದು ಬೇಡುತ್ತಿರಬೇಕು. ಅದರಿಂದ ನಮ್ಮ ಜೀವನವೂ ಧನ್ಯ. ನಮ್ಮ ಕಾರ್ಯವೂ ಮಾನ್ಯ. □

ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ,
ಪಾಲಿಸೆನ್ನ ಬಿನ್ನಪವ
ಏಕೆನ್ನ ಮೊಜೆಯ ಕೇಳೆಯಯ್ಯಾ ತಂದೆ?
ನೀನಲ್ಲದೆ ಮತ್ತಿಲ್ಲ ಮತ್ತಿಲ್ಲ.
ನೀನೆ ಎನಗೆ ಗತಿ, ನೀನೆ ಎನಗೆ ಮತಿಯಯ್ಯಾ.
ಚನ್ನಮಲ್ಲಿಕಾರ್ಜುನಯ್ಯಾ

- **ಅಕ್ಕಮಹಾದೇವಿ**



## ಶ್ರೀ ಗುರುವಾಣಿ - ೫



ಮಾನವ ಸಾಧನಾ ಜೀವಿ. ಬದುಕಿಗಾಗಿ ಹೋರಾಡುತ್ತಾನೆ. ಬಾಹ್ಯ ಜೀವನವೇ ತನ್ನ ಗುರಿಯಲ್ಲವೆಂದು ಅರ್ಥವಾದಾಗ, ಪರಮ ಗುರಿಯನ್ನು ಕಲ್ಪಿಸಿಕೊಳ್ಳುತ್ತಾನೆ. ಅಗೋಚರ ಅಗಮ್ಯವಾದರೂ ಮುಟ್ಟಬಲ್ಲ ನೆಲೆ ಒಂದಿದೆಯೆಂದು ಅರಿಯುತ್ತಾನೆ. ಅಂತಹ ಗುರಿಯನ್ನು, ದೇವರೆಂದೋ ಪರ ವಸ್ತುವೆಂದೋ ಕರೆಯುತ್ತೇವೆ. ತಾಯಿಯ ಗರ್ಭದಲ್ಲಿರುವ ಶಿಶುವಿಗೂ ಈ ಗುರಿ ಮುಟ್ಟುವ ಅಭಿಲಾಷೆ ಇರುತ್ತದೆ. ಆದರೆ ಸಂಸಾರದ ಜಂಝಾಟದಲ್ಲಿ, ಅದನ್ನೇ ಮರೆತು ಬಾಹ್ಯ ವಸ್ತುಗಳನ್ನೆಲ್ಲಾ ಅಪ್ಪಿಕೊಂಡು ದಾರಿತಪ್ಪಿ ಗುರಿ ಕಾಣದೆ ಬಳಲುತ್ತೇವೆ. ಮಹಾನುಭಾವರ ಅಮೃತವಾಣಿ ನಮ್ಮನ್ನು ಎಚ್ಚರಿಸಿದಾಗ ಮತ್ತೆ ಗುರಿಯತ್ತ ನಡೆಯಲು ಯತ್ನಿಸುತ್ತೇವೆ.

ಪ್ರಸಾದ: ಜುಲೈ-ಆಗಸ್ಟ್ 1986 ಸಂಚಿಕೆಗೆ ದಯಪಾಲಿಸಿದ ಗುರುವಾಣಿ





ಹೀಗೆ ನಡೆಯಲು ಆರಂಭಿಸಿದ ಮೊದಲ ದಾರಿ ಭಕ್ತಿ. ಭಕ್ತಿಯ ಮೊದಲ ಮೆಟ್ಟಿಲು ಉಪಾಸನೆ. ಅದಕ್ಕಾಗಿ ಆಚಾರ. ನಂತರ ವಿಚಾರ. ಅದನ್ನು ಮೀರಿ ನಡೆದಾಗ ನಮ್ಮ ಗುರಿಯ ಸಾಕ್ಷಾತ್ಕಾರ. ಇದನ್ನು ನಾವು ಬಲ್ಲೆವಾದರು ಮೊದಲ ಮೆಟ್ಟಿಲನ್ನೇ ಗುರಿ ಎಂದು ಭಾವಿಸಿ ಅಲ್ಲೇ ಗಾಣದ ಎತ್ತಿನಂತೆ ಗುರಿಕಾಣದೆ ತಿರುಗುತ್ತೇವೆ. ಆಚಾರ ಭಕ್ತಿಗಳು ಸಾಕ್ಷಾತ್ಕಾರಕ್ಕೆ ನೆರವಾಗಬೇಕಾದರೆ ಹೇಗಿರಬೇಕೆಂದು ಬಸವಣ್ಣನವರು ಹೀಗೆ ಹೇಳುತ್ತಾರೆ:

ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯ,
ಎಂತು ಶಿವಾಚಾರವೆನಗೆ ವೇದ್ಯವಪ್ಪುದಯ್ಯ,
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಿಂದ
ಕಟ್ಟುವಡೆದೆನು. ಹಸಿವು ತೃಷೆ, ವ್ಯಸನದಿಂದ ಕುದಿಯುತ್ತಿದ್ದೇನೆ.
ಪಂಚೇಂದ್ರಿಯ ಸಪ್ತಧಾತು, ಹರಿಹಂಚು ಮಾಡಿ ಕಾಡಿಹ
ವಯ್ಯಾ! ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯ!
ಕೂಡಲ ಸಂಗಮದೇವಾ ನಾನೇವೆನಯ್ಯಾ!

ನಮ್ಮ ಸಾಧನೆಗೆ ಅಡ್ಡಿಯಾಗುವ ಅಂಶಗಳೆ ಅರಿಷಡ್ವರ್ಗಗಳು. ಅವುಗಳಿಂದಲೆ ಹಸಿವು, ತೃಷೆ, ವ್ಯಸನಗಳ ಸೃಷ್ಟಿ, ಸಾಧನೆಗಾಗಿ ಅರಣ್ಯದಲ್ಲಿರಲಿ, ಗುಹೆಯಲ್ಲಿರಲಿ, ಸಾಗರದಾಳದಲ್ಲಿರಲಿ, ಅರಿಷಡ್ವರ್ಗಗಳು ವ್ಯಸನಾದಿಗಳು ನಮ್ಮ ಬೆನ್ನು ಬಿಡುವುದಿಲ್ಲ. ಅದರಲ್ಲೇ ಸಿಕ್ಕಿ ನಮ್ಮ ಜೀವನ ಮಾತ್ರ ಮುಗಿದುಹೋಗಿಬಿಡುತ್ತದೆ. ಈ ಆತಂಕಗಳನ್ನು ಗೆಲ್ಲುವುದಕ್ಕಾಗಿ ಉಪಾಸನೆಯ ಪ್ರಥಮ ಮೆಟ್ಟಿಲನ್ನು ಹಿರಿಯರು ನಮಗೆ ತೋರಿಸಿದರು. ಯಾವುದೋ ದೈವದ ಕಲ್ಪನೆ ಮಾಡಿಕೊಂಡು, ಅದನ್ನು ಸಾಕಾರವಾಗಿ ರೂಪಿಸಿಕೊಂಡು ಮನಸ್ಸು ಬಾಹ್ಯ ತೊಡಕುಗಳಿಂದ ಬಿಡುಗಡೆ ಹೊಂದುವವರೆಗೆ ಅರ್ಚನ ಅರ್ಪಣಾದಿಗಳಿಂದ ಉಪಾಸನೆ ಮಾಡಬೇಕಾಗುತ್ತದೆ. ಅದರ ರೀತಿ ನೀತಿಗಳು ರೂಪು ರೇಷೆಗಳು ಮುಖ್ಯವಲ್ಲ. ಇವೆಲ್ಲ ಮನಸ್ಸಿನ ನಿಲುಗಡೆಯ ಸಾಧನೆಗಳಲ್ಲವೇ? ಅದಕ್ಕಾಗಿಯೇ ಬಸವಣ್ಣನವರು, ಅಷ್ಟವಿಧಾರ್ಚನೆ ಶೋಡಷೋಪಚಾರವ ಮಾಡುವುದು; ಮಾಡಿದ ಪೂಜೆಯ ನೋಡುವುದಯ್ಯ, ಶಿವತತ್ತ್ವಗೀತವ ಹಾಡುವುದು; ಶಿವನ ಮುಂದೆ ನಲಿದಾಡುವುದಯ್ಯಾ, ನಮ್ಮ ಕೂಡಲ ಸಂಗನ ಕೂಡುವುದು ಎಂದಿದ್ದಾರೆ. ಅವರು ಹೇಳಿದಂತೆ ಎಲ್ಲವನ್ನು ಮಾಡುತ್ತೇವೆ. ಆದರೆ ಭಕ್ತಿ ಸಂಭಾಷಣೆಯನ್ನು ಮಾಡುವುದು ಕೂಡಲ ಸಂಗನ ಕೂಡುವುದು ಅಷ್ಟವಿಧಾರ್ಚನೆಯ ಗುರಿ ಎಂಬುದನ್ನು ಮರೆಯುತ್ತೇವೆ. ಅದು ಬಸವಣ್ಣನವರಿಗೆ ಆಗಲೇ ಗೊತ್ತಿದ್ದಿರಬೇಕು. ಅಥವಾ ಅದರ ಉರಿ ಅವರಿಗೂ ತಾಗಿರಬೇಕು. ಆದುದರಿಂದಲೇ ಮುಂದೆ ಹೀಗೆ ಎಂದು ಹೇಳುತ್ತಾರೆ. ಅಷ್ಟವಿಧಾರ್ಚನೆ ಶೋಡಷೋಪಚಾರವ ಮಾಡುವ ಹಮ್ಮಿನಲ್ಲಿ ಬೆಂದೆನಯ್ಯಾ! ಗುರುವೆಂದರಿಯೇ ಲಿಂಗವೆದರಿಯೇ ಜಂಗಮವೆಂದರಿಯೇ ಪ್ರಸಾದವೆಂದರಿಯೇ, ಆನು ಬೆಂದೆನಯ್ಯಾ,







ಕೂಡಲ ಸಂಗಮದೇವಾ ಆನು ಮಾಡುವುದೆಲ್ಲಾ ಬರಿಯ ಉಪಚಾರವಯ್ಯಾ! ಎಂದಿದ್ದಾರೆ. ಗುರಿಯನ್ನು ಮರೆತು ಮಾಡುವ ಆಚಾರವೆಲ್ಲಾ ಬರಿಯ ಉಪಚಾರ. ಅದರಿಂದ ಯಾವ ಪ್ರಯೋಜನವೂ ಇಲ್ಲ. ಅದು ತಿಳಿದಿದ್ದರೂ ಬರಿಯ ಉಪಚಾರದ ಆಚಾರದಲ್ಲೇ ಜೀವನವನ್ನೆಲ್ಲಾ ಮುಗಿಸಿಬಿಡುತ್ತೇವೆ. ಬಿಡುವಿಲ್ಲದ ಆಚಾರದಲ್ಲಿ ತೊಡಗುತ್ತೇವೆ. ಮನವನ್ನು ಬಿಗಿಹಿಡಿದು ಆಚಾರದಿಂದ ಸಾಕಾರದತ್ತ ನಡೆಯಬಯಸಿದರೆ ವಿಧಿ ಬೆನ್ನ ಬಿಡದು, ಕರ್ಮ ಕೈ ಬಿಡದು ಎಂದು ಹಂಬಲಿಸುತ್ತೇವೆ. ಅದನ್ನು ಜ್ಞಾನಿಗಳು ಒಪ್ಪುವುದಿಲ್ಲ. ದಿವ್ಯಜ್ಞಾನಿಯಾದ ಜನಕ ಮಹಾರಾಜನಿಗೆ ಈ ಸಮಸ್ಯೆ ಕಾಡಿರಬೇಕು. ಕೊನೆಗೆ ಅಷ್ಟಾವಕ್ರ ಮಹಾಶಯನನ್ನು ಈ ಬಗೆಗೆ ಪ್ರಾರ್ಥಿಸುತ್ತಾನೆ. ಆತನು ಜನಕ ಮಹಾರಾಜನಿಗೆ ಹೀಗೆ ಉತ್ತರಿಸುತ್ತಾನೆ

ಮುಕ್ತಾಭಿಮಾನೀ ಮುಕ್ತೋ ಹಿ ಬದ್ಧೋ ಬದ್ಧಾಭಿಮಾನ್ಯಪಿ |
ಕಿಂ ವದಂತೀಹ ಸತ್ಯೇಯಂ ಯಾ ಮತಿಃ ಸಾಗತಿರ್ಭವೇತ್ ||

ಯಾರು ತಾವು ಮುಕ್ತರೆಂದು ಭಾವಿಸುತ್ತಾರೋ ಅವರು ಮುಕ್ತರಾಗಿರುತ್ತಾರೆ. ಯಾರು ಬಂಧಿತರೆಂದು ಭಾವಿಸುವರೋ ಅವರು ಬಂಧಿತರೇ ಆಗಿರುತ್ತಾರೆ. ಯಾರು ಹೇಗೆ ಭಾವಿಸುವರೋ ಹಾಗೆಯೇ ಆಗುತ್ತಾರೆಂಬುದು ಸರ್ವವಿಧಿತ ಸಂಗತಿ ಎಂದಿದ್ದಾರೆ. ಆತ್ಮ ಎಂದೂ ಬಂಧನಕ್ಕೆ ಒಳಗಾಗುವುದಿಲ್ಲ. ಆದರೆ ನಮ್ಮ ಅಜ್ಞಾನದಿಂದ, ಮನ ಬಂಧನಕ್ಕೆ ಒಳಗಾಗಿ ತಾನು ಕರ್ಮಗಳ ಬಂಧನದಲ್ಲಿದ್ದೇನೆಂದು ಪರಿತಪಿಸಿ ಜೀವನ ಅಲ್ಲೇ ಪರ್ಯಾವಸಾನವಾಗುತ್ತದೆ. ಆದುದರಿಂದ ಜೀವನ ಒಂದು ಪರಮ ಸಾಧನವಾಗಬೇಕು. ಓದಿನಿಂದ ಕೇಳುವುದರಿಂದ, ನೋಡುವುದರಿಂದ, ಅನುಭವದಿಂದ ನಾವು ಎಚ್ಚೆತ್ತು ನಡೆಯಬೇಕು. ಸಾಯುವ ತನಕ ಸಾಮು ಮಾಡುತ್ತಲೇ ಇರುವುದಲ್ಲ. ಮಾಡಿದ ಸಾಮಿನಿಂದ ಭೀಮಶಕ್ತಿಯನ್ನು ದೇಹದಲ್ಲಿ ಪಡೆಯಬೇಕು. ಅಂತೆಯೆ ನಮ್ಮ ಆಚಾರ ವಿಚಾರ ವ್ಯವಹಾರಗಳು ಪರಮ ಗುರಿಯನ್ನು ಮುಟ್ಟುವ ಸಾಧನಗಳಾಗಬೇಕೇ ಹೊರತು, ಅವೇ ಗುರಿಯಾಗಿರಬಾರದು. ಜೀವನ ಪರ್ಯಂತರ ಕೆಲವರು, ಆಚಾರಕ್ಕಿಂತಲೂ ಆಚಾರಕ್ಕೆ ಬೇಕಾದ ಸಲಕರಣೆಗಳಲ್ಲೇ ಆಸಕ್ತರಾಗಿಬಿಡುತ್ತಾರೆ. ನೀರು, ಮಡಿ, ಮುಡಿ, ಧೂಪ, ದೀಪ, ನೈವೇದ್ಯ, ಇತ್ಯಾದಿ ಉಪಕರಣಗಳಲ್ಲೇ ಅವರು ತೃಪ್ತರಾಗಿಬಿಡುತ್ತಾರೆ. ಇವನ್ನೂ ಬಿಡಬಾರದು. ಆದರೆ ಇವುಗಳಲ್ಲೇ ಅಡಗಿ ಹೋಗಬಾರದು. ನದಿ ದಾಟಲು ದೋಣಿಯ ಸಹಾಯ ಬೇಕು. ನಂತರ ಅದನ್ನೇ ತಬ್ಬಿ ಕುಳಿತುಕೊಳ್ಳಬಾರದು. ಅಥವಾ ದೋಣಿಯನ್ನು ನೀರಿಗಿಳಿಸಿ ಅದನ್ನು ಮುನ್ನಡೆಸಿ ನದಿಯನ್ನು ದಾಟದೆ ನದಿ ದಡದಲ್ಲೇ ಕುಳಿತು ದೋಣಿಯನ್ನು ಶೃಂಗಾರ ಮಾಡುತ್ತಾ ಹಾಡುತ್ತಾ ಕುಳಿತರೆ ಆಗುವುದೇನು? ಅಂತೆಯೇ ನಮ್ಮ ಜೀವನವಾಗಿದೆ. ಅದನ್ನರಿತ





ಬಸವಣ್ಣನವರು ಮತ್ತೆ ಎಚ್ಚರಿಸುತ್ತಾರೆ.

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ
ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿಯ
ಬೆರೆಸಿದಂತಾಗದನ್ನಕ್ಕ?

ನದಿಯೊಳಗೆ ನದಿ ಬೆರೆತು ಭಿನ್ನಭಾವವಳಿದಂತೆ ಶಿವಜೀವರ ಭಿನ್ನಭಾವವಳಿದು ಜೀವ ಶಿವನೆಂಬುದರಿಯಲು ನಮ್ಮ ಜೀವನ ಸಾಧನವಾಗಬೇಕು. ಗುರಿಮುಟ್ಟಿ ಸಿದ್ಧಿ ಪಡೆಯಬೇಕು ಅದೇ ಜೀವನದ ನಿಜದರ್ಶನ.

ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು.
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು.
ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು.
ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು.
ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿದಲ್ಲಿ
ನಾ ನಿಮ್ಮ ಮಱೆದು ಭವದುಃಖಕ್ಕೀಡಾದೆ
ನೀ ಕರುಣದಿಂದೆತ್ತಿ ಎನ್ನ ಮಱಹ ವಿಂಗಡಿಸಿ
ನಿಮ್ಮ ಪಾದವನಱಿಹಿಸಯ್ಯಾ, ಚನ್ನಮಲ್ಲಿಕಾರ್ಜುನಾ.

ಒಲೆಯ ಹೊಕ್ಕು ಉರಿಯ ಮಱೆದವಳ,
ಮಲೆಯ ಹೊಕ್ಕು ಉಲುಹ ಮಱೆದವಳ ನೋಡ ನೋಡಾ,
ಸಂಸಾರ ಸಂಬಂಧವ ನೋಡಾ,
ಸಂಸಾರ ಸಂಬಂಧ ಭವಭವದಲ್ಲಿ ಬೆನ್ನಿಂದ ಬಿಡದು.
ಸರವು ನಿಸ್ಸರವು ಒಂದಾದವಳನು.
ಎನ್ನಲೇನ ನೋಡುವಿರಯ್ಯಾ, ಚನ್ನಮಲ್ಲಿಕಾರ್ಜುನಯ್ಯಾ ?

**- ಅಕ್ಕಮಹಾದೇವಿ**



## ಶ್ರೀ ಗುರುವಾಣಿ - ೬



ನಂಬಿ ಕರೆದರೆ ಓ ಎನ್ನನೆ ಶಿವನು! ಎಂದಿದ್ದಾರೆ ಬಸವಣ್ಣನವರು. ದೇವರ ಕೃಪೆಯನ್ನು ಅಪೇಕ್ಷಿಸುವವನಿಗೆ ದೇವರಲ್ಲಿ ಮೊದಲು ನಂಬಿಕೆ ಇರಬೇಕು, ಶ್ರದ್ಧೆ ಇರಬೇಕು. ದೇವರು ಇದ್ದಾನೋ ಇಲ್ಲವೋ ಎಂಬುದರಲ್ಲೇ ಜೀವನ ಯಾತ್ರೆಯನ್ನು ಮುಗಿಸುವವರಿದ್ದಾರೆ. ಇದ್ದಾನೋ ಇಲ್ಲವೋ ಎಂಬ ವಾದ ತೀರ ಹಳೆಯದು ಮತ್ತು ಅದು ಮುಕ್ತಾಯವಾಗದ ಸಂಗತಿ. ಇದ್ದಾನೆ, ಅವನೇ ರಕ್ಷಕ ಎಂಬ ನಂಬುಗೆಯಿಂದ ನಡೆದವರು ಮಾತ್ರವೇ ಅಘಟಿತ ಘಟನೆಗಳನ್ನು ನಡೆಸಿದ್ದಾರೆ. ಜೀವನದಲ್ಲಿ ವಿಜಯಿಗಳಾಗಿದ್ದಾರೆ. ನಾವು ಅವಲಂಬಿಸುವ ಕಾರ್ಯ ಯಾವುದೇ ಇರಬಹುದು. ಅದರ ಗುರಿ ಮುಟ್ಟಲು ನಮ್ಮ ಶಕ್ತಿಗಿಂತಲೂ ಭಗವದನುಗ್ರಹ ಬೇಕೆಂಬ ನಂಬಿಕೆ ಬೇಕು. ಭಗವಂತನನ್ನು ನಂಬಿದ್ದೇನೆಂದು ಪುರುಷಪ್ರಯತ್ನವನ್ನು ಕಡೆಗಣಿಸಬೇಕೆಂದಲ್ಲ. ಪುರುಷ ಪ್ರಯತ್ನದಲ್ಲಿ ಅಪಾರ

---

ಪ್ರಸಾದ: ಸಂ. 24 ಸಂಚಿಕೆ 8-9ಕ್ಕೆ ದಯಪಾಲಿಸಿದ ಗುರುವಾಣಿ





ವಿಶ್ವಾಸವಿಟ್ಟು ದೈವಕೃಪೆಯನ್ನು ಮರೆತವರು ತಮ್ಮ ಗುರಿ ಮುಟ್ಟುವುದು ಸುಲಭಸಾಧ್ಯವಲ್ಲ. ದೈವಾನುಗ್ರಹದ ಹಿನ್ನೆಲೆಯಲ್ಲಿ ಪುರುಷ ಪ್ರಯತ್ನ ನಡೆದರೆ ಅದು ಗುರಿ ಮುಟ್ಟಿಸಬಲ್ಲದು. ಇದಕ್ಕೆ ಅನೇಕ ನಿದರ್ಶನಗಳನ್ನು ಕಾಣುತ್ತೇವೆ.

ಇತ್ತೀಚೆಗೆ ಕೊರಿಯಾದ ಸಿಯೋಲ್‌ನಲ್ಲಿ ಜಗತ್ತಿನ ಎಲ್ಲ ರಾಷ್ಟ್ರಗಳ ಆಟಪಾಠಗಳ ಸ್ಪರ್ಧಾಮೇಳ ನಡೆಯಿತು. ಎರಡು ವಾರಗಳ ಕಾಲ ಜಗತ್ತಿನ ಬಹು ಜನರ ಕಣ್ಮನಗಳನ್ನು ತಣಿಸಿದ ಈ ಮೇಳ ಚರಿತ್ರಾರ್ಹವಾದುದು. ಅದರಲ್ಲಿ ಅನೇಕ ರಾಷ್ಟ್ರದವರು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಅಂತೆಯೇ ಭಾರತರಾಷ್ಟ್ರದಿಂದಲೂ ಅನೇಕರು ಪಾಲ್ಗೊಂಡಿದ್ದರು. ಕೇರಳದ ಹೆಣ್ಣುಮಗಳು ಉಷಾ ಈ ಸ್ಪರ್ಧೆಯಲ್ಲಿ ಭಾಗಿಯಾಗಿ ನಾಲ್ಕು ಬಂಗಾರದ ಪದಕ ಪಡೆದಳು. ಭಾರತಕ್ಕೆ ಗೌರವವನ್ನು ತಂದುಕೊಟ್ಟಳು. ಆದರೆ ಆಕೆಯ ವಿಜಯದ ಗುಟ್ಟು ಇರುವುದು ಅವಳ ದೈವಭಕ್ತಿಯಲ್ಲಿ. ಹಿಂದೆ ಒಮ್ಮೆ ಒಂದು ಸ್ಪರ್ಧೆಯಲ್ಲಿ ಜಯ ಗಳಿಸಿದಾಗ ತನಗೆ ದೊರೆತ ಚಿನ್ನದ ಪದಕವನ್ನು ಗುರುವಾಯೂರು ದೇವರಿಗೆ ಅರ್ಪಿಸಿದಳು. ಸಿಯೋಲ್‌ನಲ್ಲಿ ವಿಜಯಿಯಾಗಿ ಬಂದ ನಂತರ ಗುರುವಾಯೂರಪ್ಪನ ದರ್ಶನ ಮಾಡಿ ವಿವಿಧ ರೀತಿಯ ಕೈಂಕರ್ಯವನ್ನು ಸಲ್ಲಿಸಿದಳು. ಸಕ್ಕರೆಯ ತುಲಾಭಾರವನ್ನು ನೆರವೇರಿಸಿದಳು. ಸಿಯೋಲಿನಲ್ಲಿ ಪಡೆದ ಚಿನ್ನದ ಪದಕದ ಮಾದರಿಯ ಚಿನ್ನದ ಪದಕವನ್ನೆ ಸ್ವಾಮಿಗೆ ಅರ್ಪಿಸಲು ನಿರ್ಧರಿಸಿದಳು. ಆಟ ಪಾಠಗಳ ಸ್ಪರ್ಧೆಗೂ ದೈವಭಕ್ತಿಗೂ ಏನು ಸಂಬಂಧ ಎಂದುಕೊಳ್ಳುವವರಿದ್ದಾರೆ. ಆದರೆ ಆ ಹೆಣ್ಣುಮಗಳ ಮನೋಧರ್ಮ ಆದರ್ಶವಾದುದು. ಅನುಕರಣೀಯವಾದುದು. ನಾವು ಯಾವುದೇ ಕಾರ್ಯದಲ್ಲಿರಲಿ, ನಮ್ಮ ಹಿಂದೆ ದೈವಶಕ್ತಿಯನ್ನು ಗಳಿಸಿಕೊಳ್ಳುವ ದೃಢ ವಿಶ್ವಾಸವಿರಬೇಕು. ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರಲ್ಲಿ ದೈವಶಕ್ತಿಯಲ್ಲಿ ನಂಬಿಕೆ ಇಲ್ಲದಂತಾಗುತ್ತಿದೆ. ಸ್ವಶಕ್ತಿಯ ಬಗೆಗೆ ದುರಾಭಿಮಾನ ಬೆಳೆಯುತ್ತಿದೆ. ಇದು ಪ್ರಗತಿಯ ಸಂಕೇತವಲ್ಲ. ದುರ್ಗತಿಗೆ ಸ್ವಾಗತ ನೀಡಿದಂತೆ! ಆದುದರಿಂದ ಇಂದು ಸಮಾಜ ದಲ್ಲಿ ದೈವಭಕ್ತಿ ಧರ್ಮಶ್ರದ್ಧೆ ಬೆಳೆಸಬೇಕಾಗಿದೆ. ತುತ್ತು ಅನ್ನಕ್ಕಾಗಿ ದುಡಿಯುವವರನ್ನು ನಿರ್ಮಾಣ ಮಾಡಬೇಕಾದ ಕಾಲವೊಂದಿತ್ತು. ಇಂದು ಚಿತ್ತಶುದ್ಧರೂ, ದೈವಭಕ್ತರೂ ಆದ ಸಮಾಜ ನಿರ್ಮಾಣ ಮಾಡಬೇಕಾಗಿದೆ. ಅದರಿಂದ ಶ್ರೇಷ್ಠ ರಾಷ್ಟ್ರ ನಿರ್ಮಾಣವಾಗು ತ್ತದೆ. ಈ ಮಹಾನ್ ಕಾರ್ಯದಲ್ಲಿ ಯಾರು ಮುಂದಾಗಬೇಕು? ಸರ್ಕಾರ ಮೊದಲ ಹೆಜ್ಜೆ ಇಡಬೇಕು. ಕೇವಲ ಅರ್ಥವನ್ನು ಅವಲಂಬಿಸುವ ಸಮಾಜ ನಿರ್ಮಾಣದಲ್ಲಿ ಸರ್ಕಾರಗಳು ನಿರತವಾಗಿವೆ. ಆತ್ಮಶಕ್ತರ ಸಮಾಜ ನಿರ್ಮಾಣಕ್ಕೆ ಆಗಬೇಕಾದ ವ್ಯವಸ್ಥೆ ಮಾಡಲು ಪ್ರಯತ್ನ ನಡೆಯುತ್ತಿಲ್ಲ. ಸರ್ಕಾರ ಮಾಡಲಿ ಬಿಡಲಿ, ಧರ್ಮಾವಲಂಬಿಗಳು, ಧರ್ಮ ಸಂಸ್ಥೆಗಳು ಈ ಮಹಾ ಕಾರ್ಯದಲ್ಲಿ ತೊಡಗಬೇಕಾಗಿದೆ. ಜೀವನದ ಎಲ್ಲ ಸ್ತರಗಳಲ್ಲೂ ಧರ್ಮ ಜೀವನ, ದೈವಭಕ್ತಿಗಳ ಅವಲಂಬನೆಯಾಗ ಬೇಕಾಗಿದೆ. ಈ ದಿಕ್ಕಿನಲ್ಲಿ ನಾವು ಆಲೋಚಿಸಿ ಕಾರ್ಯನಿರತರಾಗದಿದ್ದರೆ, ರಾಷ್ಟ್ರದ ಭವಿಷ್ಯ ಚಿಂತಾಜನಕವಾಗುತ್ತದೆ. ಆದುದರಿಂದ ರಾಷ್ಟ್ರ ಇಂದು ಎಚ್ಚರಗೊಳ್ಳುವುದು ಅಗತ್ಯ. □